ಬಾಗೂರು ಮಾರ್ಕಾಂಡೇಯ ಅವರ ಚಿತ್ರಕಲೆ ಮತ್ತು ಸಾಹಿತ್ಯ

ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಪ್ರಬಂಧ.

ಮಾರ್ಗದರ್ಶಕರು
ಡಾ. ಶಿವಾನಂದ ಹೆಚ್ ಬಂಟನೂರು
ಸಹಾಯಕ ಪ್ರಾಧ್ಯಾಪಕರು

ಸಂಶೋಧಕರು
ರಾಜಪ್ಪ ಹೆಚ್



ವಿಭಾಗ
ನಿಕಾಯ
ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೪

ಬಾಗೂರು ಮಾರ್ಕಾಂಡೇಯ ಅವರ ಚಿತ್ರಕಲೆ ಮತ್ತು ಸಾಹಿತ್ಯ

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಶೋಧನ ಪ್ರಬಂಧ)

ಸಂಶೋಧಕರು

ರಾಜಪ್ಪ ಹೆಚ್.

ಮಾರ್ಗದರ್ಶಕರು

ಡಾ. ಶಿವಾನಂದ ಹೆಚ್. ಬಂಟನೂರು

ಅಧ್ಯಾಪಕರು

ದೃಶ್ಯಕಲಾ ವಿಭಾಗ

ದೃಶ್ಯಕಲಾ ವಿಭಾಗ

ಲಲಿತಕಲೆಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿದ್ಯಾರಣ್ಯ-೫೮೩೨೭೬

೨೦೧೩-೧೪

ಘೋಷಣಾ ಪತ್ರ

'ಬಾಗೂರು ಮಾರ್ಕಾಂಡೇಯ ಅವರ ಚಿತ್ರಕಲೆ ಮತ್ತು ಸಾಹಿತ್ಯ' ಎಂಬ ಶೀರ್ಷಿಕೆಯ ಸಂಶೋಧನ ಪ್ರಬಂಧವನ್ನು ಅಧ್ಯಾಪಕರಾದ ಡಾ. ಶಿವಾನಂದ ಹೆಚ್. ಬಂಟನೂರು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಲಾಗಿದೆ. ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೆ ಯಾವುದೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ

ದಿನಾಂಕ: ೨೦.೦೬-೨೦೧೮

ಶಾಜಪ್ಪ ಹೆಚ್.

ಸಂಶೋಧನ ವಿದ್ಯಾರ್ಥಿ

ದೃಶ್ಯಕಲಾ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

ಪ್ರಮಾಣ ಪತ್ರ

ರಾಜಪ್ಪ ಹೆಚ್. ಇವರು ಬರೆದು ಸಾದರಪಡಿಸಿದ **'ಬಾಗೂರು ಮಾರ್ಕಾಂಡೇಯ ಅವರ ಚಿತ್ರಕಲೆ ಮತ್ತು ಸಾಹಿತ್ಯ'** ಎಂಬ ಶೀರ್ಷಿಕೆಯ ಸಂಶೋಧನ ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿರುತ್ತಾರೆ. ಪ್ರಸ್ತುತ ಸಂಪ್ರಬಂಧವನ್ನು ಇಡಿಯಾಗಿ ಇಲ್ಲವೆ ಬಿಡಿಯಾಗಿ ಈ ಮೊದಲು ಯಾವ ಪದವಿಗೂ ಸಲ್ಲಿಸಲ್ಪಟ್ಟಿಲ್ಲವೆಂದು ದೃಢೀಕರಿಸಲಾಗಿದೆ.

ಸ್ಥಳ: ವಿದ್ಯಾರಣ್ಯ
ದಿನಾಂಕ: 30/06/14

ಡಾ. ಶಿವಾನಂದ ಹೆಚ್. ಬಂಟನೂರು
ಮಾರ್ಗದರ್ಶಕರು ಮತ್ತು ಅಧ್ಯಾಪಕರು
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಪ್ರಮಾಣ ಪತ್ರ

ರಾಜಪ್ಪ ಹೆಚ್. ಇವರು ಬರೆದು ಸಾದರಪಡಿಸಿದ **'ಬಾಗೂರು ಮಾರ್ಕಾಂಡೇಯ ಅವರ ಚಿತ್ರಕಲೆ ಮತ್ತು ಸಾಹಿತ್ಯ'** ಎಂಬ ಶೀರ್ಷಿಕೆಯ ಸಂಶೋಧನ ಪ್ರಬಂಧವನ್ನು ಡಾ. ಶಿವಾನಂದ ಹೆಚ್. ಬಂಟನೂರು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿರುತ್ತಾರೆ ಎಂದು ದೃಢೀಕರಿಸಲಾಗಿದೆ.

ಸ್ಥಳ: ವಿದ್ಯಾರಣ್ಯ
ದಿನಾಂಕ: ೨೦-೬-೧೪

ಡಾ. ಕೆ. ರವೀಂದ್ರನಾಥ
ಮುಖ್ಯಸ್ಥರು
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

ಕಲೆಯು ವಿಶ್ವ ವ್ಯಾಪಿಯಾದ ಒಂದು ಚಟುವಟಿಕೆ. ಶತ ಶತಮಾನಗಳಿಂದಲೂ ವಿದ್ವಾಂಸರು, ಕಲಾವಿದರು ಇದಕ್ಕೆ ವ್ಯಾಖ್ಯನಗಳನ್ನು ನೀಡುತ್ತ ಬಂದಿರುವರು. ಆದರೂ ಒಮ್ಮತವಾದ ಅಭಿಪ್ರಾಯವಿಲ್ಲ. "ಕಲೆಯನ್ನು ಮಾನವನ ದೈಹಿಕ ಇಲ್ಲವೆ ಬೌದ್ಧಿಕ ಜಾಣ್ಮೆ" ಎಂದು ಸಾಮಾನ್ಯವಾಗಿ ಗ್ರಹಿಸಬಹುದು. ಮನುಷ್ಯನಲ್ಲಿ ಸೌಂದರ್ಯಾನುಭವ ಸಂವೇದನೆಗಳು ಅಭಿವ್ಯಕ್ತಗೊಳಿಸುವ ಸಾದನ ಇದರ ತತ್ವಗಳು ಹಿಂದಿನಿಂದಲೂ ಒಂದೇ ರೀತಿ ಬೆಳೆದು ಬಂದಿಲ್ಲ. ಅವು ಕಾಲ ಕಾಲಕ್ಕೆ ಬದಲಾವಣೆಯಾಗುತ್ತ ಬಂದಿವೆ. ಆದಿ ಮಾನವನ ಗುಹೆ ಮತ್ತು ಶಿಲಾಶ್ರಯಗಳಲ್ಲಿ ರೂಪಿತವಾಗಿ ಬೆಳೆಯುತ್ತಾ ಬಂದಿರುವದರಲ್ಲಿ ಸಾಕಷ್ಟು ವ್ಯತ್ಯಾಸವಿದೆ. ಹೀಗೆ ಸ್ವಾನುಬವದಿಂದ ಉತ್ಪತ್ತಿಯಾಗುತ್ತ ಅದರದ್ದೇ ಆದ ತತ್ವ ಮತ್ತು ಸಿದ್ಧಾಂತಗಳನ್ನು ಬೆಳೆಸಿಕೊಂಡು ಆ ಚೌಕಟ್ಟಿನಲ್ಲಿ ಬೆಳೆಯುತ್ತಿರುತ್ತದೆ. ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಕಾರಣಗಳಿಂದ ಹೊರತಾಗಲು ಸಾಧ್ಯವಿಲ್ಲವಾದರೂ ಅವುಗಳ ಪ್ರಭಾವದಿಂದ ಬದಲಾವಣೆಯಾಗುತ್ತಿರುತ್ತದೆ. ಈ ಬದಲಾವಣೆಯನ್ನು ನಾವು ಸಿಂಹಾವಲೋಕನ ಮಾಡುವುದಾದರೆ. "ಬೌದ್ಧ ಅರಸರ ಕಾಲದಲ್ಲಿ – ಬೌದ್ಧ ಕಲೆಯಾಗಿ, ಜೈನರ ಕಾಲದಲ್ಲಿ–ಜೈನ ಕಲೆಯಾಗಿ, ಮೊಘಲ ಅರಸರ ಕಾಲದಲ್ಲಿ ಮೊಘಲ್ ಕಲೆಯಾಗಿ ಹೀಗೆ ರಜಪೂತ ಚಾಲುಕ್ಯ, ವಿಜಯನಗರ ಮತ್ತು ಮೈಸೂರು. ಶೈಲಿಯ ಕಲೆಯಾಗಿ ಕಲಾ ಶೈಲಿಯಾಗಿ ಬೆಳೆದು ಬಂದಿದೆ"[೧] ಎಂದು ಅಭಿಪ್ರಾಯ ಪಡಬಹುದಾಗಿದೆ.

ವಿವಿಧ ಕಾಲಘಟ್ಟಗಳಲ್ಲಿ ರಚನೆಯ ತಂತ್ರ, ವಿನ್ಯಾಸ, ನಿರೂಪಣಾಶೈಲಿ ಇತ್ಯಾದಿ ದೃಷ್ಟಿಗಳಿಂದ ಪರಸ್ಪರ ಭಿನ್ನವಾದರೂ ಕಲಾವಿದನ ಸ್ಥಾನ ಮಾನಗಳಾಗಲೀ ಸಾಮಾಜಿಕ ನೆಲೆಗಟ್ಟಾಗಲೀ ಬದಲಾವಣೆಗೊಳ್ಳಲಿಲ್ಲಾ. ಪೌರಾಶ್ರೀತ ಕಥಾ ಸಂದರ್ಬಗಳಿಗೆ ಪೂರಕ ಚಿತ್ರಗಳಾಗುವ ಮಟ್ಟದಿಂದ ಮೇಲೇರಲಿಲ್ಲ. "೧೯ನೇ ಶತಮಾನದ ಅಂತ್ಯದಲ್ಲಿಯೇ ರವಿವರ್ಮನ ಆಗಮನದಿಂದ ಛಾಯಾ ಚಿತ್ರಣ ಅನ್ವೇಷಣೆ, ತಂತ್ರ ಮತ್ತು ವಸ್ತುವಿನ ಬದಲಾವಣೆ, ರಾಷ್ಟ್ರೀಯ ಆಂದೋಲನ ಮತ್ತು

ಸಾಮಾಜಿಕ ಪ್ರಜ್ಞೆ ಕಲೆಯ ಬಗ್ಗೆ ಇದ್ದ ಕಲ್ಪನೆ, ದೋರಣೆಗಳಲ್ಲಿ ಬದಲಾವಣೆ ಕಾಣಿಸಿಕೊಳ್ಳಲಾರಂಭಿಸಿದವು."[೨] ಹಾಗಾಗಿ ಈ ಕಾಲಘಟ್ಟದಲ್ಲಿ ಕಲೆಗೆ ರಾಜಾಶ್ರಯ ತಪ್ಪಿ ಜನಾಶ್ರಯಕ್ಕೆ ಬಂದರೂ ಅದರ ಪ್ರಧಾನ ಕೇಂದ್ರಗಳು, ಹೈದರಾಬಾದ್, ವಿಜಾಪುರ, ಸುರಪುರ, ಗದವಾಲ, ವನಪರ್ತಿ, ತಂಜಾವುರು ಮತ್ತು ಮೈಸೂರು ಪಟ್ಟಣಗಳಲ್ಲಿ ಈ ಕೇಂದ್ರಗಳು ಬೇರೆ ಬೇರೆ ಆಳ್ವಿಕರಿಗೆ ಒಳಪಟ್ಟಿದ್ದರೂ ನಂತರ ಮೈಸೂರು ಅರಸರು ಕಲೆಯನ್ನು ವಿಶಾಲ ಕರ್ನಾಟಕದ ತುಂಬ ತುಂಬಿ ಬೆಳೆಸುತ್ತಾ ಬಂದರು. ಅದು ಇಂದಿಗೂ ಜೀವಂತವಾಗಿರುವುದನ್ನು ಕಾಣಬಹುದು.

"೧೯-೨೦ನೆಯ ಶತಮಾನದಲ್ಲಿ ಪಾಶ್ಚಾತ್ಯ ಚಿತ್ರಕಲಾರಂಗದಲ್ಲಿ ಬೆಳೆದ ಅನೇಕ ಸಂಪ್ರದಾಯಗಳನ್ನು ಅನುಸರಿಸುವ ತಂತ್ರವನ್ನು ಉಪಯೋಗಿಸಿ ದೇಶೀಯ ವಸ್ತುಗಳನ್ನು ಚಿತ್ರಿಸುವ ಪಂಥಗಳು ಕರ್ನಾಟಕದಲ್ಲಿ ಕಾಣಿಸಿದವು. ಕರ್ನಾಟಕದ ಚಿತ್ರಕಲಾ ಇತಿಹಾಸದಲ್ಲಿ ಈ ಆಧುನಿಕ ಸಂಕೀರ್ಣತೆಯ ಕಾಲ. ವೈವಿದ್ಯಮಯವಾದ ಚಿತ್ರರಚನಾ ತಂತ್ರಗಳು ಇದಕ್ಕೆ ಹಿನ್ನಲೆ ಮತ್ತು ಮುನ್ನಲೆಯಾಗಿ ವಸ್ತುಗಳ ಜೋಡಣೆ ಕೃತಕ ವರ್ಣಗಳನ್ನು ಬಳಸುವುದು ಈ ಕಾಲದಲ್ಲಿ ಕಂಡುಬಂದ ಮುಖ್ಯ ಬದಲಾವಣೆ."[೩]

ಕರ್ನಾಟಕವು ಚಿತ್ರ-ಶಿಲ್ಪ ಕಲೆಗಳನ್ನು ತನ್ನ ಒಡಲಲ್ಲಿ ಇಟ್ಟುಕೊಂಡು ಇಡೀ ವಿಶ್ವದ ವೀಕ್ಷಣೆಯನ್ನು ತನ್ನ ಕಡೆ ಸೆಳೆದುಕೊಂಡಿರುವುದು ಗಮನಾರ್ಹವಾದದ್ದು. ಉದಾಹರಣೆಗೆ ಶಿಲ್ಪಕಲೆ ಮತ್ತು ಚಿತ್ರಕಲೆಯಲ್ಲಿ ಬೇಲೂರು, ಹಳೇಬೀಡು, ಮೈಸೂರು, ಹಂಪಿ ವಿಜಾಪೂರ ಮುಂತಾದ ಪ್ರದೇಶಗಳು ಪ್ರಮುಖವಾದವು. ಚಿತ್ರಕಲೆಯಂತೆ ಸಾಹಿತ್ಯ ಕರ್ನಾಟಕದ ಮೇರು ಶಿಖರಕ್ಕೇರಿ ನಾಂದಿಹಾಡಿದ್ದು ಗಮನಾರ್ಹ ಸಂಗತಿ. ಇದರ ಇತಿಹಾಸದಲ್ಲಿ ಕಲೆ ಉಳಿದಿದೆ. ಕಲಾವಿದರು ಕಲೆಯೊಂದಿಗೆ ಅಜರಾಮರ ಮಾತ್ರರಾಗಿಲ್ಲ, ಪ್ರತಿಭೆಯನ್ನು ಮೆರೆದು ಮರೆಯಾಗಿದ್ದಾರೆ. ಆ ಕಾಲದ ಕಲಾವಿದರು ತಮ್ಮ ಹೆಸರುಗಳನ್ನು ಕೃತಿಗಳ ಮೇಲೆ ಸೂಚಿಸದೇ ಇರುವುದು ಚಿತ್ರಕಲೆ ಶ್ರೇಷ್ಠ ಎಂಬ ಅವರ ಭಾವನೆ, ಅದು ಧರ್ಮಾರ್ಥಕಾಮ ಮೋಕ್ಷ ಪ್ರಧವಾದುದೆಂದು ನಂಬಿಕೆ. ಇಂತಹ ಸಾಕಷ್ಟು ಕಾರಣಗಳನ್ನು ನೀಡಬಹುದು ಜೊತೆಗೆ ಚಿತ್ರಕಲೆಯು ಸರ್ವಕಲೆಗಳಲ್ಲಿ ಶ್ರೇಷ್ಠವೆಂಬುದಕ್ಕೆ ಖಚಿತಪಡಿಸಲು ಪುರಾಣಗಳಲ್ಲಿ ಉಲ್ಲೇಖಗಳಿವೆ. ಮಾರ್ಕಂಡೇಯ ಪುರಾಣದಲ್ಲಿ ಹೇಳಿರುವಂತೆ,

"ಕಲನಾಂ ಪ್ರವರಂ ಚಿತ್ರಂ

ಧರ್ಮ ಕಾಮಾರ್ಥ ಮೋಕ್ಷಪ್ರಧಮ್

ಮಾಂಗಲ್ಯ ಪ್ರಥಮಂ ಚೈತ ವ್ಯೋಹೇತ್ ಪ್ರತೀಭತಮ್"[೪]

ಕಲೆಗಳಲ್ಲಿ ಚಿತ್ರಕಲೆ ಉತ್ತಮವಾದದ್ದು. ಧರ್ಮ ಅರ್ಥ, ಕಾಮ, ಮೋಕ್ಷಕ್ಕೆ ಸಾಧನವಾದದ್ದು. ಮನೆಯಲ್ಲಿ ಮಂಗಳಕರವೆಂದು, ಗೃಹದೇವತೆಯನ್ನು ಸಂತೃಪ್ತಿಪಡಿಸುವ ಸಾಧನವೆಂದು, ಇದರ ಅರ್ಥ. ಆದ್ದರಿಂದ ಕಲೆಯ ಮುಂದೆ ತಾನು ಏನೂ ಅಲ್ಲವೆಂದು ಭಾವಿಸಿದ ಕಲಾವಿದರು, ತಮ್ಮ

ಹೆಸರನ್ನು ಸೂಚಿಸುತ್ತಿರಲಿಲ್ಲ. ಈ ಮೇಲಿನ ಹೇಳಿಕೆಯು ಧರ್ಮಾರ್ಥವಾಗಿ ಒಪ್ಪಿಕೊಂಡರೂ ಹೆಸರು ಸೂಚಿಸಿಲ್ಲದ್ದರಿಂದ ಆಗಿನಿಂದಲೂ ಚಿತ್ರಕಲೆಯ ಸಂಶೋಧನೆ ಕುರಿತು ಕಂಡಿರುವುದು ತಪ್ಪೇನಿಲ್ಲ ಎಂದು ಹೇಳಬಹುದು. ಏಕೆಂದರೆ, ಆಗಿನ ಯುಗದಲ್ಲಿ ಆಶ್ರಯ ಕಲೆಯಲ್ಲಿ ರಚನಾದಾತರು ರಾಜರಿಗೆ ಮೀಸಲಿತ್ತು ರಚಿಸುತ್ತಿದ್ದರು ಮತ್ತು ರಾಜ ಸರ್ವವಿಧಿತವಾದ್ದರಿಂದ ಹೆಸರು ನಮೂದಿಸಿದರೆ ಕಲೆಯ ರಚನೆಯಿಂದ ಎಲ್ಲ ಹಿಂದುಳಿಯುತ್ತೇವೆಂದು ಅರುಹಿರಬೇಕೆಂದು ನಾವು ತಿಳಿದುಕೊಳ್ಳಬಹುದು. ಹಾಗೇಯೇ, "ಚಾಲುಕ್ಯ, ಹೊಯ್ಸಳ ಶಿಲ್ಪಗಲ ಮೇಲೆ ಕಲಾವಿದರ ಹೆಸರುಗಳು ಮಾತ್ರ ಅಲ್ಲಲ್ಲಿ ಉಳಿದಿವೆ. ಕನ್ನಡ ಚಿತ್ರಕಲೆಯ ಪ್ರಸ್ತಾಪ ಬಂದಾಗಲೆಲ್ಲ ಬೇರುಘಟ್ಟಿ ಎಂಬ ಕಲಾವಿದನೊಬ್ಬನ ಹೆಸರು ಮಾತ್ರ ಕೇಳಿಬರುತ್ತದೆ. ಅವನ ಕುರಿತು ಹೆಚ್ಚಿನ ವಿವರಗಳು ತಿಲಿದು ಬಂದಿಲ್ಲ."[3] ಹೀಗೆ ಅಲ್ಲಲ್ಲಿ ಕೆಲವು ಹೆಸರುಗಳನ್ನು ಕುರಿತು ಮಾತ್ರ ಸೂಚಿಸಿರುವ ಅಂಶ ಕಂಡು ಬಂದಿದ್ದು ವಿವರವಾದ ಪರಿಚಯವಿಲ್ಲ. ಮುಂದಿನ ಶತಮಾನಗಳಲ್ಲಿ ಕಲಾವಿದರ ಪರಿಚಯ ಹಾಗೂ ಕಲೆಯ ಬಗ್ಗೆ ಸ್ವಲ್ಪ ಮಟ್ಟಿನ ಪ್ರಯತ್ನಗಳು ನಡೆದಿವೆ. ಆದರೆ ಕಲಾವಿದರ ಕುರಿತಾದ ಸಂಶೋಧನೆಗಳು ಪ್ರಸ್ತುತವಾಗಿ ನಡೆಯುತ್ತಿರುವುದನ್ನು ಕಾಣಬಹುದಾಗಿದೆ.

ಕಲಾವಿದರ ಕುರಿತು ಅಧ್ಯಯನಗಳು ನಡೆಯದೇ ಇದ್ದರೆ ಈ ಹಿಂದೆ ಚಾಲುಕ್ಯ, ಹೊಯ್ಸಳ, ಕದಂಬ ಮತ್ತು ಇತರೆ ವಾಸ್ತು ಶಿಲ್ಪಗಳಿಂದ ಕೂಡಿದ ದೇವಾಲಯಗಳು ಸ್ಥಿರವಾಗಿ ನಿಂತಿರುವಂತೆ ಕಲೆ ಮತ್ತು ಕಲಾವಿದ ನಿಲ್ಲಬಹುದು.

ಹೀಗೆ ಆಗುವುದರಿಂದ ಕರ್ನಾಟಕದಲ್ಲಿ ಉಚ್ಛ ಮಟ್ಟದ ಕಲಾ ಸಾಮ್ರಾಜ್ಯವನ್ನು ಕಟ್ಟಲು ಸಾಧ್ಯವಾದೀತು ಮತ್ತು ಭಾಷಾವಾರು ರಾಜ್ಯಗಳು ಅಂತ ಹೋದಂತೆ ಕಲೆಯ ರಚನಾ ಕಾರ್ಯ ಕುಂಠಿತವಾಗಬಹುದು. ನಾನು ಈ ಮಾತನ್ನು ಅಧ್ಯಯನ ಮಾಡಿದರೆ ಕಲಾವಿದ ಕರತಿ ರಚನೆ ಮಾಡುತ್ತಾನೆ. ಇಲ್ಲವಾದರೆ ರಚನೆಮಾಡುವುದಿಲ್ಲ ಎಂದು ಹೇಳಲು ಸಾಧ್ಯವಾಗದು ಏಕೆಂದರೆ ಮಾನವ ಸೌಂದರ್ಯಾನುಭವಿ. ಯಾರಿಂದ ಏನುಬೇಕು? ಎಂಬ ಅಹಂನಿಂದ ಸ್ವ ಹಿತಕ್ಕಾಗಿಯಾದರೂ ಕಲಾಕೃತಿಯ ರಚನೆಯನ್ನು ಮಾಡುತ್ತಾನೆ. ಆಗಿದ್ದಲ್ಲಿ ಇಂತಹವರನ್ನು ಅಧ್ಯಯನಕ್ಕೊಳಪಡಿಸಿದರೆ ಪ್ರೋತ್ಸಾಹಿಸಿದಂತಾಗುತ್ತದೆ. ಇನ್ನು ಹೆಚ್ಚಿನದಾಗಿ ಈತನೆ ಮುಂದಿನ ಪೀಳಿಗೆಗೆ ಕಲಾ ದೀವಿಗೆಯಾಗಿ ಬೆಳಗುತ್ತಿರುತ್ತಾನೆ. ಇಲ್ಲವಾದರೆ ಕಲೆಯು ಬೂದಿ ಮುಚ್ಚಿದ ಕೆಂಡದಂತೆ, ಬೆಳಕಿಗೆ ಬಾರದಂತೆ ತನ್ನಲ್ಲಿಯೇ ಸಮುದ್ರದ ಅಲೆಗಳು ದಡಕ್ಕೆ ಅಪ್ಪಳಿಸಿ ಪುನಃ ಪುನಃ ಸಮುದ್ರದಲ್ಲಿ ವಿಲೀನವಾದಂತೆ ತಟಸ್ಥವಾಗಿ ಉಳಿಯಬೇಕಾಗುತ್ತದೆ.

"ಕಲಾವಿದನ ಬದುಕು, ಪರಿಸರ, ವ್ಯಾಸಂಗ, ಧ್ಯೇಯ ಪ್ರೇರಣೆ, ಸಿದ್ಧಿ ಮುಂತಾದವುಗಳು ಆತನ ಕಲಾಕೃತಿಯ ಸೃಷ್ಟಿಯು ಪರಿಕರಗಳಾಗಿರುತ್ತವೆ. ಕಲಾವಿದ ಅವುಗಳಿಗೆ ಅತೀತನಾಗಿ ಕಲಾಕೃತಿ ನಿರ್ಮಾಣಕ್ಕೆ ಹೇಗೆ ದುಡಿಸಿಕೊಳ್ಳುತ್ತಾನೆ ಮತ್ತು ಕಲಾವಿದನ ಸ್ವಂತಿಕೆಯು ಹೇಗೆ ಅಭಿವ್ಯಕ್ತಿಗೊಂಡಿರುತ್ತದೆ

ಎಂಬುದು ಮುಖ್ಯವಾಗಿರುತ್ತದೆ. ಕಲಾವಸ್ತುವಿನ ಆಯ್ಕೆಯಲ್ಲಿ ಕಂಡುಬರುತ್ತದೆ. ಯಾವುದೇ ಕಲಾವಿದನ ಧೋರಣೆಯು ಅವನದೆ ಆದ ಅಭಿವ್ಯಕ್ತಿ ವೈಯಕ್ತಿಕತೆಯಲ್ಲಿ ಅವನ ಕಲಾ ಸೃಷ್ಠಿಯ ವಿಶಿಷ್ಟತೆಯನ್ನು ಗುರುತಿಸಬಹುದು. ಈ ಹಿನ್ನಲೆಯಲ್ಲಿ ಕಲಾವಿದನ ಜೀವನ ಚರಿತ್ರೆಯು ಅಧ್ಯಯನದಲ್ಲಿ ಅಷ್ಟೇ ಮಹತ್ವದಾಗಿದೆ."[೨] ಹೌದು ಈ ಮೇಲೆ ಹೇಳಿದ ಮಾತುಗಳು ನಿಜಾತೀತವಾದವು ಎಂದು ಹೇಳಬಹುದು. ಉದಾಹರಣೆಗೆ: ರವಿವರ್ಮನು ರಾಜಾಶ್ರಯದಲ್ಲಿ ಕಲಾಕೃತಿ ರಚನೆಯ ಸಂದರ್ಭದಲ್ಲಿ ಅರಸರ ಭಾವಚಿತ್ರ ಸಬೆಯಲ್ಲಿ ಸಭಾ ಸದಸ್ಯರ ಚಿತ್ರ, ಇತರೆ ಒಟ್ಟಾರೆಯಾಗಿ ಮಾನವಾಕರತಿಗಳ ನೈಜ ಚಿತ್ರಣದ ಕಲಾಕೃತಿಗಳನ್ನು ರಚಿಸುತ್ತಿದ್ದಾರೆ. ಹಾಗೇಯೇ ಕೆ.ಕೆ.ಹೆಬ್ಬಾರರು ಕೋಳಿ ಜಗಳಗಳ ಚಿತ್ರಣದು, ಅವರ ಪರಿಸರದಲ್ಲಿ ಪ್ರಭಾವಿತ ಶಕ್ತಿಯಿಂದಾದ ಚಿತ್ರಣಗಳು ಎಂದು ಹೇಳಬಹುದು. ಮತ್ತು ಉತ್ತರ ಕರ್ನಾಟಕದ ವಿಜಾಪುರದ ಕಲಾವಿದರು. ಅತಿಯಾದ ಭೂದೃಶ್ಯ ಸೆರೆ ಹಿಡಿಯುವುದು. ಒಟ್ಟಾರೆಯಾಗಿ ಕಲಾವಿದ ಜೀವಿತ ಸಮಾಜದಲ್ಲಾದ ಬದಲಾವಣೆಗಳನ್ನರಿತು ಕಲಾಯನ್ನು ತನ್ನಲ್ಲಿ ದುಡಿಸಿಕೊಳ್ಳುತ್ತಾನೆ ಎಂದು ಹೇಳಬಹುದು.

ಪ್ರಸ್ತುತವಾಗಿ ಇಂದು ಬೇರೆ ಬೇರೆ ಕ್ಷೇತ್ರಗಳನ್ನು ಗಮನಿಸಿದರೆ ಸಾಕಷ್ಟು ಸಂಶೋಧನೆಗಳು ನಡೆದಿವೆ ಮತ್ತು ನಡೆಯುತ್ತಿವೆ. ಅದರೆ ನಮ್ಮ ಚಿತ್ರಕಲಾ ಕ್ಷೇತ್ರದಲ್ಲಿ ಸಂಶೋಧನಾ ಕಾರ್ಯ ತೀರ ಕಡಿಮೆ ಏಕೆಂದರೆ ಈ ಕ್ಷೇತ್ರದ ಕಡೆ ಸಾಹಿತ್ಯ ಕೃಷಿಯಲ್ಲಿ ಬಂದಿದ್ದಷ್ಟು ಇಲ್ಲವೆಂದು ಹೇಳಬಹುದು. ಆದರೂ ಈ ಕ್ಷೇತ್ರವು ಕರ್ನಾಟಕಕ್ಕೆ ಸಾಹಿತ್ಯ ಕೊಟ್ಟ್ಯಾಂತರಷ್ಟು ಅಥವಾ ಸಾಹಿತ್ಯಕ್ಕೆ ಸಮವಾಗಿ ನಿಲ್ಲಬಹುದಾದಷ್ಟು ಕೊಡುಗೆಯನ್ನು ಕೊಟ್ಟಿದೆ. ಬಹುಶಃ ಚಿತ್ರಗಳಿಗೆ ಸಂಬಂಧಿಸಿದಂತೆ ಸಂಶೋಧನೆಗಳು ತೀರ ವಿರಳವೆಂದರೆ ತಪ್ಪಾಗಲಾರದು. ಮತ್ತು ಕಲಾವಿದರ ಉನ್ನತ ಶಿಕ್ಷಣದ ವಿಮುಖತೆ ತೋರಿಸಿದುದರ ಪರಿಣಾಮದಿಂದಾಗಿ ಈ ಕ್ಷೇತ್ರದ ಅಧ್ಯಯನ ಕುಂಠಿತವಾಗಿರುವುದನ್ನು ಕಾಣಬಹುದಾಗಿದೆ.

ಸಂಶೋಧನೆಯು ವಿಶ್ವವಿದ್ಯಾಲಯದ ಮಟ್ಟದಲ್ಲಿ ೧೯೫೦ರ ದಶಕದಿಂದ ಗಂಭೀರ ಅಧ್ಯಯನದ ವಿಷಯವಾಗಿ ಪರಿಗಣಿಸಲ್ಪಟ್ಟಿದೆ. ಪರಿಗಣಿತವಾಗದೆ ಇದ್ದಲ್ಲಿ ಕಲೆ ಮತ್ತು ಕಲಾವಿದನ ಬದುಕು ಬವಣೆಗಳು ಕೇಳುವವರಿಲ್ಲದೆ ಬದುಕು ಬರಡಾಗುತ್ತಿತ್ತು. ಹೀಗೆ ಅಧ್ಯಯನಗಳಾಗುವುದರಿಂದ ಕಲಾವಿದ ಮತ್ತು ಆತನ ಕೌಶಲ್ಯಗಳು ಜನಸಾಮಾನ್ಯರಿಗೆ ತಲುಪಿ ಅದರ ಕುರಿತು ತಿಳಿಯಲು ಸಹಾಯಕವಾಗಿದೆ. ಇಂತಹ ಸಂದರ್ಭದಲ್ಲಿ ತಮ್ಮದೇಯಾದ ಬಹುಮುಖ ವ್ಯಕ್ತಿತ್ವದ ಕರ್ನಾಟಕದ ಕಲಾ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆ ನೀಡಿದ ನೂರಾರು ಕಲಾವಿದರ ಕುರಿತು ಅಧ್ಯಯನ ನಡೆಯಬೇಕಾಗಿದೆ. ಆಗ ಮಾತ್ರ ಈ ಕ್ಷೇತ್ರದಲ್ಲಿ ಮಹತ್ವದ ಅಂಶಗಳು ಬೆಳಕಿಗೆ ಬಂದು ಎಲ್ಲಾ ಸ್ಥರದ ಜನಸಾಮಾನ್ಯರಿಗೆ ತಲುಪಿಸಿದಂತೆ ಮತ್ತು ತಮ್ಮ ಕಲಾ ಸಂಸ್ಕೃತಿಯ ಶ್ವೇತ ವರ್ಣದ ಗಿರಿ ಶಿಖರವನ್ನೇರಲು ಸಹಾಯಕಾರಿಯಾಗಬಹುದು. ಆದರೆ ಅವುನಿರಂತರವಾಗಿ ಮುಂದಿನ ಪೀಳಿಗೆಗೆ ಪರಿಚಿತವಾಗಬೇಕಾದರೆ ಅವರುಗಳ ಅಧ್ಯಯನದ ಮೂಲಕ ಕಾರ್ಯರೂಪಕ್ಕೆ ತರುವುದು ಇಂದು

ಬಹಳ ಅವಶ್ಯವಾಗಿದೆ. ಈ ಉದ್ದೇಶವನ್ನು ಪರಿಗಣಿಸಿ ಅನಾದರಕ್ಕೆ ಅಧ್ಯಯನಕ್ಕಾಗಿ ಚಿತ್ರಕಲಾ ಕ್ಷೇತ್ರ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ನಿರಂತರವಾಗಿ ಕಲಾ ಜ್ಞಾನದ ಶಕ್ತಿಯನ್ನು ಬೆಳೆಗುತ್ತಿರುವ ಕರ್ನಾಟಕದ ಐತಿಹಾಸಿಕ ನಗರವಾದ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಬಾಗೂರಿನವರಾದ ಮಾರ್ಕಂಡೇಯ ಅವರ ಜೀವನ ಪ್ರಮುಖವಾಗಿ ಕಲಾ ಜೀವನ ಚಿತ್ರಣವನ್ನು ಕುರಿತು ಕೂಲಂಕಷವಾಗಿ ಅಧ್ಯಯನಕ್ಕೆ ಒಳಪಡಿಸುವ ಸದುದ್ದೇಶವನ್ನು ಇಟ್ಟುಕೊಳ್ಳಲಾಗಿದೆ.

ಬಾಗೂರು ಮಾರ್ಕಂಡೇಯ ಅವರು ಮೈಸೂರಿನ ಮಹಾರಾಜರ ಆಸ್ಥಾನದಲ್ಲಿ ಚಿತ್ರಕಲಾವಿದರಾಗಿದ್ದ ಚಿತ್ರದುರ್ಗದ ಕೃಷ್ಣಪ್ಪನವರ ಮಗ. ಕೆ.ವೆಂಕಟಪ್ಪ ಮತ್ತು ಈ ಜಿಲ್ಲೆಯ ಹರ್ತಿಕೋಟೆಯ ಪಿ.ತಿಪ್ಪೇಸ್ವಾಮಿಯವರಂತೆ ಚಿತ್ರಕಲಾ ಕ್ಷೇತ್ರದಲ್ಲಿ ಕೃಷಿ ಮಾಡುತ್ತಿರುವುದರಲ್ಲಿ ಪ್ರಸ್ತುತ ಇವರು ಒಬ್ಬರು ಎಂದು ಹೇಳಬಹುದು. ಈ ಕ್ಷೇತ್ರವಲ್ಲದೆ ಸಾಹಿತ್ಯ ಕೃಷಿಯಲ್ಲಿಯೂ ಧುಮುಕಿ ತ.ರಾ.ಸು, ಬಿ.ಎಲ್.ವೇಣು, ತ.ಸು.ಶಾಮರಾಯ ಹಾಗೂ ಚಂದ್ರಶೇಖರ ತಾಳ್ಯ"[೭] ಮತ್ತು ಇತರೆ ಸಾಹಿತ್ಯಗಳಲ್ಲಿ ಇವರೂ ಒಬ್ಬರು ಎಂದು ಹೆಮ್ಮೆಯಿಂದ ಹೇಳಬಹುದು. ಹೀಗೆ ಎರಡರಲ್ಲೂ ಕೃಷಿ ಮಾಡುತ್ತ ಬಂದಿರುವ ಇವರು ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಬಾಗೂರಿನ ಚಿನ್ನಗೋವಿಂದಪ್ಪ ಮತ್ತು ಲಕ್ಷ್ಮಮ್ಮನ ಎರಡನೆ ಮಗನಾಗಿ ಜನಸಿದ್ದಾರೆ. ಹುಟ್ಟೂರಾದ ಬಾಗೂರಿನಲ್ಲಿ ರಾಜು, ಐಯುಬು, ಅತ್ತೆ ಮಗ ಶಿವಪ್ಪ ಇವರೊಂದಿಗೆ ಕೆರೆ ಮತ್ತು ಗದ್ದೆಗಳಲ್ಲಿ ಆಟವಾಡುತ್ತಾ ಬಾಲ್ಯ ಸವಿಸಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಮುಗಿಸಿ ಕಲಾಶಿಕ್ಷಣವನ್ನು ಎಂ.ಎ.ಮಲ್ಲನಗೌಡ ವಾ. ಕಾಳೇಶ್ವರರಾವ್ ಮತ್ತು ಪರಸ್ಪರ ಶಿಫಾರಸ್ಸಿನ ಮೇರೆಗೆ ೧೯೮೧ರಲ್ಲಿ ಧಾರವಾಡದ ಭಾರತೀಯ ಕಲಾ ಕೇಂದ್ರದಲ್ಲಿ ಪಡೆಯುತ್ತಾರೆ. (ಅಲ್ಲಿಯೂ ಸಹ ಡಾ. ಎಸ್.ಸಿ.ಪಾಟೀಲರು ಬರೆದಿರುವ ಬಾರೋಕ್ ಕಲೆ ಎಂಬ ಕೃತಿಗೆ ರಕ್ಷಾ ಪುಟ ತಯಾರಿಸಿಕೊಟ್ಟಿರುವುದು ಕಂಡುಬರುತ್ತದೆ. ಇದಲ್ಲದೆ, ಅಲ್ಲಿಯ "ಅಪರಂಜಿ", "ಅರಣಿ ಪತ್ರಿಕೆ", "ರಾಜ ಪತ್ರಿಕೆ" ಸಂಪಾದಕರು ಇವರನ್ನು ದುಡಿಸಿಕೊಂಡಿರುವುದು ಕಾಣಸಿಗುತ್ತದೆ.) ಈ ರೀತಿಯಾದ ಕಲಾ ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ೧೯೮೮ರಲ್ಲಿ ಶಿಕ್ಷಕರಾಗಿ ೧೯೯೨-೯೩ ಪಠ್ಯಪುಸ್ತಕ ನಿರ್ದೇಶನಾಲಯದಲ್ಲಿ ಕಲಾವಿದರಾಗಿ ಸಾಹಿತ್ಯ ಕ್ಷೇತ್ರದಲ್ಲಿ ಸೇವೆ ಮಾಡುತ್ತಾ ಇದಕ್ಕೂ ಹಲವಾರು ಕ್ಷೇತ್ರದಲ್ಲಿ ತನ್ನ ಹಸ್ತವನ್ನೀಯುತ್ತಾ ಯಾವುದೇ ಕ್ಷೇತ್ರವಾದರೂ ಅಲ್ಲಿ ಕಲಾತ್ಮಕತೆಯಲ್ಲಿ ಪ್ರಾಧಾನ್ಯತೆ ಎದ್ದು ಕಾಣುವುದು ತಿಳಿದು ಬರುತ್ತದೆ.

ಇವರ ಕಲಾ ಸೇವೆಗೆ ಪ್ರತಿಫಲವಾಗಿ ಲಭಿಸಿದ ಪ್ರಶಸ್ತಿಗಳು ಮತ್ತು ಹಲವಾರು ಗಣ್ಯ ಮಾನ್ಯರಿಂದ ಧರ್ಮಾಧಿಕಾರಿಗಳಿಂದ, ಗೌರವ ಸನ್ಮಾನಗಳು ಲಭಿಸಿವೆ. ಇವುಗಳ ಕುರುವಾಗಿ ಬಾಗೂರು ಮಾರ್ಕಂಡೇಯ ಅವರ ಜೀವನ ಸಾಧನೆ ಕಲಾ ಬದುಕು ಕಲಾಕೃತಿಗಳು ಮತ್ತು ಕಲಾ ವಲಯಕ್ಕೆ ಅವರ ಸೇವೆ ಕುರಿತು ಅಧ್ಯಯನ ಮಾಡುವುದು ಈ ಪ್ರಬಂಧದ ಮುಖ್ಯ ಉದ್ದೇಶವಾಗಿದೆ.

ಇವರು ತಮ್ಮ ವೃತ್ತಿಯಲ್ಲಿ ತೊಡಗಿಕೊಂಡು ಮಕ್ಕಳಿಗೆ ಚಿತ್ರಕಲಾಸಕ್ತಿಯನ್ನು ಮೂಡಿಸಿರುವ ಮತ್ತು ಸಂಗೀತದ ಜೊತೆ ಚಿತ್ರಕಲೆಯನ್ನು ಮೇಳೈಸುವ, ಗಣಕಯಂತ್ರದಲ್ಲಿ "ಕನ್ನಡ ಸೌರಭ"ದಲ್ಲಿ ಕನ್ನಡದ ಗರಿಮೆಯ ಚಂದನದ ವಾಸನೆಯನ್ನು ಹೊರಸೂಸುವುದು ಈ ಅಧ್ಯಯನದ ಇನ್ನೊಂದು ಉದ್ದೇಶವಾಗಿದೆ.

ಮಾರ್ಕಂಡೇಯ ಅವರು ಸಾವಿರಾರು ರೇಖಾಚಿತ್ರ, ಚುಕ್ಕೆ ಚಿತ್ರ ಹಾಗೂ ವರ್ಣ ಅತ್ಯಮೂಲ್ಯವಾದ ಕೊಡುಗೆಯನ್ನು ನೀಡಿ ಚಿತ್ರಕಲಾಕ್ಷೇತ್ರದಲ್ಲಿ ಉನ್ನತ ಸಾಧನೆಯನ್ನು ಮಂಡಿಸಿದ್ದಾರೆ. ಈ ಕಲಾವಿದರ ಕೊಡುಗೆಯನ್ನು ಮತ್ತು ಅವರ ಕಲಾಕೃತಿಗಳ ಮೇಲಾದ ಪ್ರಭಾವ ಪ್ರೇರಣೆ ತಂತ್ರ, ಶೈಲಿ ಮುಂತಾದವುಗಳನ್ನು ವಿಶೇಷವಾಗಿ ಗಮನಿಸಿ ಅಧ್ಯಯನ ಮಾಡುವ ಉದ್ದೇಶ ಹೊಂದಲಾಗಿದೆ.

ಮಾರ್ಕಂಡೇಯ ಅವರು ಈ ಕ್ಷೇತ್ರದಲ್ಲಿ ವಿವಿಧ ಅಕಾಡೆಮಿಗಳಲ್ಲಿ ಸದಸ್ಯರಾಗಿ ಕಲೆಯ ಅನೇಕ ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸಿ ಕಲಾಕ್ಷೇತ್ರಕ್ಕೆ ತನ್ನದೆಯಾದ ಸೇವೆ ಸಂದಿವೆ. ಇವೆಲ್ಲವುಗಳನ್ನು ಗಮನಿಸಿ ಅಧ್ಯಯನ ಮಾಡುವುದು ಒಂದು ಉದ್ದೇಶವಾಗಿದ್ದು ಮತ್ತು ಅವರ ಕಲಾಕೃತಿಗಳ ಸಂಗ್ರಹದ ನೆಲೆಗಳ ಕುರಿತಾದ ಹಲವಾರು ಅಂಶಗಳನ್ನು ಅಧ್ಯಯನದ ವ್ಯಾಪ್ತಿಯಲ್ಲಿ ವಿವೇಚಿಸುವ ಉದ್ದೇಶವಿದೆ.

ಮಾರ್ಕಂಡೇಯ ಅವರ ಕುರಿತು ನಡೆದಿರುವ ಅಧ್ಯಯನಗಳು

ಚಿತ್ರದುರ್ಗ ಜಿಲ್ಲೆಯ ಬಹುಮುಖಿ ಕಲಾವಿದರರಾದ ಬಾಗೂರು ಮಾರ್ಕಂಡೇಯ ಇವರ ಜನನ, ಬಾಲ್ಯ, ಪರಿಸರ, ವಿದ್ಯಾಭ್ಯಾಸ, ವ್ಯಕ್ತಿಜೀವನ, ಸಾಹಿತ್ಯ ಮತ್ತು ಇತರೆ ಕಲಾತ್ಮಕ ಸೇವೆ ಕುರಿತು ವಿವರಣೆಯನ್ನು 'ದಿನಪತ್ರಿಕೆ' ಹಾಗೂ ಕಲಾವಿದರ ಪರಿಚಯಗಳಲ್ಲಿ ಹರಡಿಕೊಂಡಿದೆ. ಇವರ ಕುರಿತು ಕೆಲವು ಲೇಖನಗಳು ಮತ್ತು ಕಿರು ಪ್ರಬಂಧಗಳು ಬಂದಿದ್ದು ಅವು ಇಂತಿವೆ: "೨೦೧೩ರಲ್ಲಿ ಬಹುಮುಖಿ ಬಾಗೂರು ಮಾರ್ಕಂಡೇಯ" ಎಂಬ ಬರಹದ ಪುಸ್ತಕದ ಪುತ್ಥಳಿಯನ್ನು ಭಗವಾನ್[೮]ರವರು ಸೃಜಿಸಿದ್ದಾರೆ. ಈ ಗ್ರಂಥದ ಒಳಭಾಗದ ಪುಟಗಳಲ್ಲಿ ಕಲಾವಿದರ ಪರಿಸರ, ಬಾಲ್ಯ, ಶಿಕ್ಷಣ, ವೃತ್ತಿ, ಕಾವ್ಯ ವಿವಿಧ ರೀತಿಯ ಕಲಾಕೃತಿಗಳ ಪರಿಚಯ, ಲೇಖಕರು ಮತ್ತು ಗಣ್ಯಮಾನ್ಯರುಗಳು ಬರೆದ ಕಲಾತ್ಮಕ ಭಾವನೆಯುಳ್ಳ ಸಾಧನಾ ಲೇಖನಗಳು ಮತ್ತು ಹೂ ಹೆಣೆದಂತೆ ವಿಚಾರವನ್ನು ಹೆಣೆದಿಟ್ಟಿದ್ದಾರೆ. "೨೦೦೮ ಗುರುವಾರ ೬, ವಿಜಯ ಕರ್ನಾಟಕದಲ್ಲಿ 'ಕನ್ನಡ ಸೌರಭ' ಎಂಬ ಗಣಕಯಂತ್ರದಲ್ಲಿ ಕನ್ನಡ ಅಕ್ಷರಗಳ ಪರಿಚಯ ಅವುಗಳ ಬರವಣಿಗೆಯಿಂದ ಉಚ್ಚಾರವನ್ನೂ ತಿಳಿಸುವ ರಚನೆಯ ಕನ್ನಡ ಸೌರಭ ಎಂಬ ವಿಷಯವನ್ನು ಆರ್.ಮಂಜುನಾಥ ಪರಿಚಯಿಸಿದ್ದಾರೆ."[೯]

"೨೦೦೮ ಮಂಗಳವಾರ ಡಿಸೆಂಬರ್, ೯ ಕರುನಾಡ ಸಂಜೆಯಲ್ಲಿ ಖ್ಯಾತ ಸಾಹಿತಿ ಪ್ರೊ. ದೊಡ್ಡರಂಗೇಗೌಡ ಅವರು 'ಕನ್ನಡ ಕಲಿಯಲು ಕನ್ನಡ ಸೌರಭದ' ಸಂಚಿಕೆ."[೧೦]

"೨೦೦೮ ಡಿಸೆಂಬರ್ ೧೪ ಉದಯವಾಣಿಯಲ್ಲಿ ಸಾಪ್ತಾಹಿಕ ಸಂಪದದಲ್ಲಿ ಅ.ಆ.ಇ.ಈ ಕನ್ನಡದ ಅಕ್ಷರಮಾಲೆ ಬಿ.ವಿ.ಅನುರಾಧ ಅವರ ಲೇಖನ."[೧೧]

"೨೦೦೮ ಶುಕ್ರವಾರ ಡಿಸೆಂಬರ್ ೧೯ರಲ್ಲಿ ಈ ಸಂಜೆ ದಿನಪತ್ರಿಕೆಯಲ್ಲಿ 'ಕನ್ನಡ ಕಲಿಯೋದು ಸುಲಭ' ಕೋ.ಶಿ. ಜಗದೀಶರ ಲೇಖನ."[೧೨]

"೨೦೦೯ ಜುಲೈ-ಆಗಷ್ಟ ಮಾಸಿಕ ಪತ್ರಿಕೆಯಾದ ಜ್ಞಾನ ಜಗತ್ತು ಎಂಬ ಪುಸ್ತಕದಲ್ಲಿ 'ಕನ್ನಡ ಸೌರಭ' ಎಂಬ ಲೇಖನವನ್ನು ಎಸ್.ದತ್ತಾತ್ರಿಯವರು ವಿವರಿಸಿದ್ದಾರೆ."[೧೩] "೨೦೧೧ ಮಂಗಳವಾರ ನವ್ಹೆಂಬರ್ ೮ ಪ್ರಜಾವಾಣಿ"[೧೪] ದಿನಪತ್ರಿಕೆಗೆ. "೨೦೧೨ ಗುರುವಾರ ಮೇ ೧೭, ವಿಜಯವಾಣಿ ದಿನಪತ್ರಿಕೆಯ ಸಂಚಿಕೆ"[೧೫] "೨೦೧೨ ಸೋಮವಾರ ಮೇ ೨೮ ಪ್ರಜಾವಾಣಿ ಮೆಟ್ರೋದ ಸಂಚಿಕೆ," "೨೦೧೨ ಮೇ೨೦ ವಿಜಯ ಕರ್ನಾಟಕದ ಸಂಚಿಕೆಯಲ್ಲಿ ಗಣಕದಲ್ಲಿ"[೧೬] ಘಮ್ಮೆಂದಿದೆ ಕನ್ನಡ ಸೌರಭ ಎಂಬ ಲೇಖನವನ್ನು ಹ.ಚ.ನಟೇಶ್ ಬಾಬು ತಿಳಿಸಿದ್ದಾರೆ"[೧೭] "೨೦೧೩ ಶುಕ್ರವಾರ ಮೇ ೧೦ ಪ್ರಜಾವಾಣಿ ಮೆಟ್ರೋ ಬೆಂಗಳೂರು ದಿನಪತ್ರಿಕೆಯಲ್ಲಿ ಕೊಳಲು ಕುಂಚದಲ್ಲಿ ರಾಧಾ ಮಾಧವ, ಭಾವ, ಲೇಖನವನ್ನು ರೂಪಶ್ರೀ ಕಲ್ಲಿಗನೂರ್ ಇವರು ಬರೆದಿದ್ದಾರೆ."[೧೮]

೨೦೧೩ ಬಾನುವಾರ ಮೇ ೧೩ರ ವಿಜಯ ಕರ್ನಾಟಕದ ನಮ್ಮ ಬೆಂಗಳೂರು ಎಂಬ ದಿನ ಪತ್ರಿಕೆಯಲ್ಲಿ "ಮೋಡಿ ಮಾಡಿದ", "ಕೊಳಲಗಾನ ಚಿತ್ರಯಾನ"ದಲ್ಲಿ ಪ್ರಖ್ಯಾತ ಕೊಳಲು ವಾದಕ. ಪ್ರವೀಶ್ ಗೋಡ್ಖಿಂಡಿಯರ ಕೊಳಲುಗಾನಕ್ಕೆ ಕಲಾವಿದರು. ರಾಧೆ-ಕೃಷ್ಣರ ಭಾವನೆಗಳನ್ನು ಕುಂಚದ ಮೂಲಕ ಹಿಡಿದಿಟ್ಟಿರುವ ಬಾಗೂರು ಮಾರ್ಕಂಡೇಯ ಅವರ ಕುರಿತು ಕೆ.ಎಸ್.ನಿಸಾರ್ ಅಹಮದ್ ಮತ್ತು ಚಲನ ಚಿತ್ರ ನಿರ್ದೇಶಕ ಪಿ.ಶೇಷಾದ್ರಿಯವರ ಲೇಖನ ಮೂಡಿ ಬಂದಿದೆ."೨೦೧೪ ಜನೆವರಿ, ೩೦ 'ಸುಧಾ' ಈ ವಾರದ ಪತ್ರಿಕೆಯಲ್ಲಿ 'ನನ್ನ ಬಗ್ಗೆ ಓದಿ' ಎಂಬುದನ್ನು ಎನ್.ರಾಮನಾಥ್ ಬರೆದಿದ್ದಾರೆ.[೨೦] ಇನ್ನು ಇವರ ಕುರಿತು ಸಾಕಷ್ಟು ಲೇಖನಗಳು ಇದ್ದು ಇಷ್ಟನ್ನು ಮಾತ್ರ ಸಂಗ್ರಹಿಸಿ ಬಳಸಿಕೊಳ್ಳಲಾಗಿದೆ ಹಾಗೂ ಇವರು ಸಹ ಕವಿತ್ವವನ್ನು ಮತ್ತು ಚಿತ್ರತ್ವದ ಗ್ರಂಥ ಮಾಲೆಗಳನ್ನು ಸ್ವಯಂ ಬಿಡುಗಡೆ ಮಾಡಿದ್ದು ಇವುಗಳನ್ನು ಅಧ್ಯಯನದ ಅಗತ್ಯಕ್ಕೆ ತಕ್ಕಂತೆ ಬಳಸಿಕೊಳ್ಳಲಾಗಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಪ್ರಬಂಧವನ್ನು ಏಳು ಅಧ್ಯಯಗಳಾಗಿ ವಿಂಗಡಿಸಿಕೊಂಡು ಪ್ರತಿಯೊಂದು ವಿಷಯದ ಕುರಿತು ಸಂಕ್ಷಿಪ್ತವಾದ ಮಾಹಿತಿಯನ್ನು ನೀಡಲು ಪ್ರಯತ್ನಿಸಲಾಗಿದೆ.

* ಮೊದಲನೆಯ ಅಧ್ಯಾಯದಲ್ಲಿ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವಿಧಾನ ಆಕರ ಸಾಮಗ್ರಿಗಳ ವಿವರವನ್ನು ಕೊಡಲಾಗಿದೆ.
* ಎರಡನೆಯ ಅಧ್ಯಾಯದಲ್ಲಿ ಬಾಗೂರಿನ ಸಾಂಸ್ಕೃತಿಕ ಪರಿಸರ, ಕಲಾವಿದರ ಹುಟ್ಟು, ಬಾಲ್ಯ, ಪ್ರಾಥಮಿಕ ಶಿಕ್ಷಣದಲ್ಲಿ ಚಿತ್ರಕಲೆಗೆ ಅವರ ಒಲವು, ಮಾಧ್ಯಮಿಕ ಶಿಕ್ಷಣ ಕಲಾಶಿಕ್ಷಣ, ಈ

ನಡುವಿನ ಗುಣಾವಗುಣ ಚಟುವಟಿಕೆಗಳ ಕುರಿತು ಮತ್ತು ವೃತ್ತಿ ಜೀವನದ ಬಗ್ಗೆ ವಿವರಣೆಯನ್ನು ನೀಡಲಾಗಿದೆ.

* ಮೂರನೆಯ ಅಧ್ಯಾಯದಲ್ಲಿ ಕಲಾವಿದರ ಕಲಾಕೃತಿಗಳನ್ನು ವರ್ಗೀಕರಿಸಿಕೊಂಡು ವಿಮರ್ಶಾತ್ಮಕವಾದ ಅಧ್ಯಯನವನ್ನು ಕೈಗೊಳ್ಳಲಾಗಿದೆ.

* ನಾಲ್ಕನೆಯ ಅಧ್ಯಾಯದಲ್ಲಿ ಅವರ ಚಿಂತನಾ ಸಾಹಿತ್ಯಗಳು, ಶಿಶುಸಾಹಿತ್ಯ, ಕವನ ಸಂಕಲನಗಳು ಹಾಗೂ ಭಾವ ಗೀತೆಗಳನ್ನು ಚರ್ಚಿಸಿ ವಿವೇಚನೆ ಮಾಡಲಾಗಿದೆ.

* ಐದನೆಯ ಅಧ್ಯಾಯದಲ್ಲಿ ಬಾಗೂರು ಮಾರ್ಕಂಡೇಯ ಅವರ ಚಿತ್ರಕಲೆ ಮತ್ತು ಸಾಹಿತ್ಯದ ಪ್ರಭಾವ, ಪ್ರೇರಣೆ, ತಂತ್ರ ಶೈಲಿಯನ್ನು ವಿವರಿಸಲಾಗಿದೆ.

* ಆರನೆಯ ಅಧ್ಯಾಯದಲ್ಲಿ ಕಲಾವಿಧರ ಸಾಧನೆಗೆ ಸಂದಿರುವ ಪ್ರಶಂಸಾ ಬರಹಗಳು ಮತ್ತು ಪ್ರಶಸ್ತಿ ಗೌರವಗಳ ವಿಷಯವನ್ನು ಹಿಡಿದಿಡಲಾಗಿದೆ.

* ಏಳನೆಯ ಅಧ್ಯಾಯವು ಸಮಾರೋಪವಾಗಿದ್ದು ಒಟ್ಟಾರೆ ಅಧ್ಯಯನದ ಫಲಿತಗಳನ್ನು ಇದರಲ್ಲಿ ನೀಡಲಾಗಿದೆ.

ಅಧ್ಯಯನದ ವ್ಯಾಪ್ತಿ :

ಕಲಾವಿದ ಮಾರ್ಕಂಡೇಯ ಅವರ ಹೆಸರು ನಮ್ಮ ನಾಡು ಮಾತ್ರವಲ್ಲದೇ ಹೊರ ರಾಜ್ಯಗಳಲ್ಲೂ ಹರಡಿದೆ. ಇವರ ಕಲಾಕೃತಿಗಳೂ ಸಹ ದೇಶದ ಹೊರ–ಒಳಗೂ ಕಲಾ ಗ್ಯಾಲರಿಗಳಲ್ಲಿ, ಶ್ರೀಮಂತ ವರ್ಗದವರಲ್ಲಿ ಮತ್ತು ಮಠಮಾನ್ಯಗಳಲ್ಲಿ ಒಟ್ಟಾರೆಯಾಗಿ ಮೇಲ್ವರ್ಗದಿಂದ ಕೆಳ ಸ್ಥರದ ಸಾಮಾನ್ಯರವರೆಗೂ ಇವರ ಕಲಾಕೃತಿಗಳ ಸಂಗ್ರಹವಿದ್ದು, ಕಲೆಯ ಮಿತಿ ಮತ್ತು ಅಧ್ಯಯನದ ಮಿತಿಯನ್ನು ಪರಿಗಣಿಸಿ ಕರ್ನಾಟಕದಲ್ಲಿರುವ ಅವರ ಕಲಾಕೃತಿಗಳು, ಅವ ಮನೆಯಲ್ಲಿರುವ, ಗಣ್ಯ ಮಾನ್ಯರಲ್ಲಿರುವ ಮತ್ತು ಇತರೆಡೆಯಲ್ಲಿ ಸಂಗ್ರಹವಾಗಿರುವ ಎಲ್ಲವನ್ನು ಆಧರಿಸಿ 'ಅವರ ಜೀವನ, ಸಾಧನೆ ಮತ್ತು ಕಲಾಕೃತಿಗಳನ್ನು' ಅಧ್ಯಯನಕ್ಕೆ ಒಳಪಡಿಸಲಾಗಿದೆ. ಕರ್ನಾಟಕ ಒಳಗೊಂಡಂತೆ ಅಧ್ಯಯನದ ವ್ಯಾಪ್ತಿ ಹರಡಿಕೊಂಡಿದೆ.

ಅಧ್ಯಯನದ ವಿಧಾನ

ವ್ಯಕ್ತಿಕೇಂದ್ರಿತ ಅಧ್ಯಯನ ಇದಾಗಿರುವುದರಿಂದ ಇಲ್ಲಿ ಎರಡು ರೀತಿಯ ಸಾಮಗ್ರಿಗಳನ್ನು ಬಳಸಿಕೊಳ್ಳಲಾಗಿದೆ.

೧) ಮೂಲ ಆಕರ ಸಾಮಗ್ರಿ

೨) ಆನುಷಂಗಿಕ ಆಕರ ಸಾಮಗ್ರಿ

ಈ ಎರಡೂ ಮೂಲಗಳಿಂದ ವಿಷಯ ಸಂಗ್ರಹ ಮಾಡಲಾಗಿದೆ.

೧) **ಮೂಲ ಆಕರ ಸಾಮಗ್ರಿ:** ಇದರಲ್ಲಿ ಮುಖ್ಯವಾದದ್ದು ಕ್ಷೇತ್ರ ಕಾರ್ಯ. ಇದರಲ್ಲಿ ಸಂದರ್ಶನ ಧ್ವನಿಮುದ್ರಣ, ಛಾಯಾಗ್ರಹಣ, ಪ್ರಕಟವಾದ ಗ್ರಂಥ ಹಾಗೂ ಲೆಖನಗಳನ್ನು ಸಂಗ್ರಹಿಸಿ ವಿವರ ಪಡೆಯಲಾಗಿದೆ.

ಸಂದರ್ಶನ: ಚಿತ್ರಕಲಾವಿದ ಬಾಗೂರು ಮಾರ್ಕಂಡೇಯ ಅವರ ಬಾಲ್ಯ ಶಿಕ್ಷಣಹಂತದಲ್ಲಿ ಕಲೆಯ ಕಡೆಗೆ ವಾಲಿದ ಅವರ ಚಿತ್ತ, ಪ್ರೇರಣೆ ನೀಡಿದ ಕೃತಿಗಳು, ಕೌಟುಂಬಿಕ ಹಿನ್ನಲೆ, ಧಾರವಾಡದಲ್ಲಿನ ಅವರ ಕಲಾಶಿಕ್ಷಣಾಭ್ಯಾಸದ ಕಲಾ ವಾತಾವರಣ, ಶಿಕ್ಷಕವೃಂದ, ಅಲ್ಲಿಯ ಗುಣಾವಗುಣಗಳ ವಿಷಯ ಕಲಾ ಚಟುವಟಿಕೆಗಳು ಶಿಕ್ಷಕರಾದಾಗಿನ ಅನುಭವಗಳು, ಅವರ ಚಿತ್ರಶೈಲಿ, ರೇಖಾ ವಿನ್ಯಾಸ, ವರ್ಣವಿನ್ಯಾಸ, ನಂತರ ಬೆಂಗಳೂರಿನ ಪುಸ್ತಕಾಲಯದಲ್ಲಿ ಕಲಾವಿದರಾಗಿ ಸೇವೆ ಸಲ್ಲಿಸುವಾದಾಗಿನ ಅನುಭವಗಳು ಮತ್ತು ಒಳಗಿನೊಳಗಿನ್ನೊಂದೆಂಬಂತೆ ಸಾಹಿತ್ಯದ ವಿವರವಾಗಿ ಅಧ್ಯಯನಕ್ಕೆ ಸಂಬಂಧ ಪಟ್ಟಂತೆ ಲೇಖನಗಳು, ವೃತ್ತಿ ಜೀವನದಲ್ಲಿನ ಸಹ ಮಿತ್ರರು ಹಾಗೂ ಕುಟುಂಬದವರನ್ನು ಸಂದರ್ಶಿಸಿ ಅವರಿಂದಲೂ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಅವರ ವ್ಯಕ್ತಿತ್ವದ ವಿವಿಧ ಮುಖಗಳನ್ನು ತಿಳಿದುಕೊಳ್ಳುವ ಉದ್ದೇಶದಿಂದ ಪ್ರಶ್ನಾವಳಿಯನ್ನು ಸಿದ್ದಪಡಿಸಿ ಅವರಿಂದ ಅಭಿಪ್ರಾಯ ಸಂಗ್ರಹಿಸಲಾಗಿದೆ.

ಛಾಯಾಗ್ರಹಣ: ಕಲಾವಿದರ ಸಂಗ್ರಹಾಲಯಕ್ಕೆ ಬೇಟಿಕೊಟ್ಟು ಹಳೆಯ ಮತ್ತು ಹೊಸದಾಗಿ ರಚಿಸಿದ ಕಲಾಕೃತಿಗಳನ್ನು ಮತ್ತು ಅವರು ಕಲಾವೃತ್ತಿಯನ್ನು ಪ್ರಾರಂಭಿಸಿದ ದಿನಗಳಿಂದ ಹಿಡಿದು ಇಂದಿನವರೆಗಿನ ಹಂತ ಹಂತವಾದ ರೇಖಾ ಚಿತ್ರಗಳನ್ನು ಛಾಯಾ ಚಿತ್ರಣ ಮಾಡಿಕೊಂಡು ಮುದ್ರಿಸಿಕೊಳ್ಳಲಾಗಿದೆ.

ಅನುಷಂಗಿಕ ಆಕರ ಸಾಮಗ್ರಿ: ಸಂಶೋಧನಾ ಪ್ರಬಂಧಗಳು ಪ್ರಕಟಿತ, ಅಪ್ರಕಟಿತ ಲೇಖನಗಳು ಸಂಪಾದನಾ ಗ್ರಂಥಗಳು, ಸಂಚಿಕೆಗಳು ಹಾಗೂ ಕಲಾ ಸಂಗ್ರಹಾಲಯಗಳಿಗೆ ಬೇಟಿನೀಡಿ ವಿಷಯವನ್ನು ಸಂಗ್ರಹಿಸಿಕೊಂಡು ತೌಲನಿಕವಾದ ಮಾದರಿಯಲ್ಲಿ ಈ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಟಿಪ್ಪಣಿಗಳು

೧. ಡಾ. ಎಸ್.ಸಿ.ಪಾಟೀಲ : ವರ್ಣಸಂಚಯ, ಚೀತ್ರಾಕ್ಷಿ: ಪುಟ–೪೭

೨. ಡಾ. ಎಸ್.ಸಿ.ಪಾಟೀಲ (ಸಂ), ಲೇ. ಡಾ.ಬಿ.ಕೆ.ಹಿರೇಮಠ (ಲೇ), ಚಿತ್ರಾಕ್ಷಿ, ಕರ್ನಾಟಕದಲ್ಲಿ ಚಿತ್ರಕಲೆ ಬೆಳೆದುಬಂದ ದಾರಿ : ಪುಟ–೫

೩. ಶ್ರೀ ಪಿ.ಆರ್.ತಿಪ್ಪೇಸ್ವಾಮಿ : ಚಿತ್ರಕಲಾ ಪ್ರಪಂಚ, ಪುಟ–೫೨೫

೪. ಡಾ. ಲಕ್ಷ್ಮೀದೇವಿ ಗವಾಯಿ : ಕಲಾವಿದ ಎಂ.ಎ.ಚಟ್ಟಿಯವರು ಜೀವನ ಕಲಾಕೃತಿಗಳು ಒಂದು ಅಧ್ಯಯನ ಸಂಚಿಕೆ ಪುಟ–೪

೫. ಡಾ. ಎಸ್.ಸಿ.ಪಾಟೀಲ್ : ಕರ್ನಾಟಕದ ಜನಪದ ಚಿತ್ರಕಲೆ ಪುಟ–೩

೬ ಮಲ್ಲಿಕಾರ್ಜುನ ಸಿ. ಬಾಗೋತಿ : ಚಿತ್ರಕಲಾವಿದ ಜೆ.ಎಸ್.ಖಂಡೇರಾವ್ ಒಂದು ಅಧ್ಯಯನ ಪುಟ–೩

೭ ಪ್ರಜಾವಾಣಿ : ಗುರುವಾರ ೨೭.೦೨.೨೦೧೪ ಪುಟ–೫

೮. ಭಗವಾನ್ : ಬಹುಮುಖಿ ಬಾಗೂರ ಮಾರ್ಕಂಡೇಯ, ಪುಟ–೩

೯. ಆರ್. ಮಂಜುನಾಥ : ೨೦೦೮, ಗುರುವಾರ ೬, ವಿಜಯ ಕರ್ನಾಟಕ

೧೦. ಪ್ರೊ, ದೊಡ್ಡರಂಗೇಗೌಡ : ೨೦೦೮ ಮಂಗಳವಾರ ಡಿಸೆಂಬರ್, ೯ "ಕರುನಾಡ ಸಂಜೆ" ಪುಟ–೪

೧೧. ಬಿ.ಅನುರಾಧ ೨೦೦೮ ಡಿಸೆಂಬರ್, ೧೪ ಉದಯವಾಣಿ, ಪುಟ–೮

೧೨. ಕೋ.ಶಿ. ಜಗದೀಶ ೨೦೦೮ ಶುಕ್ರವಾರ ಡಿಸೆಂಬರ್ ೧೯ ಈ ಸಂಜೆ

೧೩. ಎಸ್. ದತ್ತಾತ್ರಿ ೨೦೦೯ ಜುಲೈ–ಆಗಷ್ಟ–ಜ್ಞಾನ ಜಗತ್ತು ಪುಟ ೫೪–೫೫

೧೪. ೨೦೧೧ ಮಂಗಳವಾರ ನವ್ಹೆಂಬರ್ ೮, ಪ್ರಜಾವಾಣಿ

೧೫. ೨೦೧೨ ಗುರುವಾರ ಮೆ ೧೭, ವಿಜಯವಾಣಿ

೧೬. ೨೦೧೨ ಮೇ, ೨೮, ಪ್ರಜಾವಾಣಿ ಮೆಟ್ರೋ

೧೭. ಹ.ಚ. ನಟೇಶ್‌ಬಾಬು : ೨೦೧೨ ಮೇ ೨೦ ವಿಜಯ ಕರ್ನಾಟಕ

೧೮. ರೂಪಶ್ರೀ ಕಲ್ಲಿಗನೂರ್ ೨೦೧೩ ಶುಕ್ರವಾರ ಮೇ೧೦, ಪ್ರಜಾವಾಣಿ ಮೆಟ್ರೋ ಬೆಂಗಳೂರು.

೧೯. ಕೆ.ಎಸ್.ನಿಸ್ಸಾರ್ ಅಹಮದ್ ಮತ್ತು ಪಿ.ಶೇಷಾದ್ರಿ, ಚಲನಚಿತ್ರ ನಿರ್ದೇಶಕರು : ೨೦೧೩ ಬಾನುವಾರ ಮೇ ೧೩ ವಿಜಯ ಕರ್ನಾಟಕ

೨೦. ಎನ್. ರಾಮನಾಥ : ೨೦೧೪ ಜನೆವರಿ ೩೦ ಸುಧಾ.

ಅಧ್ಯಾಯ ಎರಡು

ಬಾಗೂರು ಮಾರ್ಕಾಂಡೇಯ ಅವರ ಜನನ, ಬಾಲ್ಯ, ಪರಿಸರ, ಶಿಕ್ಷಣ ಮತ್ತು ವೃತ್ತಿ ಬದುಕು

ಅಧ್ಯಾಯ ಎರಡು

ಬಾಗೂರು ಮಾರ್ಕಾಂಡೇಯ ಅವರ ಜನನ, ಬಾಲ್ಯ, ಪರಿಸರ, ಶಿಕ್ಷಣ ಮತ್ತು ವೃತ್ತಿ ಬದುಕು

ಯಾವುದಾದರೂ ಒಂದು ಕ್ಷೇತ್ರದಲ್ಲಿ ಸಾಧನೆಗೈದ ವ್ಯಕ್ತಿಯೋರ್ವನ ಬಗ್ಗೆ ತಿಳಿಯಲು ಆತನ ಜನನದ ಸಂದರ್ಭ ಭೌಗೋಳಿಕ, ಪರಿಸರ ಕೌಟುಂಬಿಕ, ಸಾಮಾಜಿಕ, ಸಾಂಸ್ಕೃತಿಕತೆ ಪರಿಸರವನ್ನು ಒರೆಹಚ್ಚಿ ನೋಡಬೇಕಾಗುತ್ತದೆ. ಹ ಆಗಾದಾಗ ಮಾತ್ರ ಆತನ ಯಶಸ್ಸಿನ ಫಲಿತಗಳನ್ನು ಸರಿಯಾಗಿ ಗುರುತಿಸಲು ಸಾಧ್ಯವಾಗುತ್ತದೆ. ಅದಕ್ಕೆ ಉದಾಹರಣೆಯಾಗಿ ಸಾಹಿತಿಗಳು, ವಿಜ್ಞಾನಿಗಳು, ಕಲಾವಿದರಾದಿಯಾಗಿ ಸಾಕಷ್ಟು ಜನರನ್ನು ಹೆಸರಿಸಬಹುದು. ಅವರ ದಾರಿಯಲ್ಲಿಯೇ ಸಾಗಿಬರುತ್ತಿರುವ ಅನೇಕರು ಇದ್ದಾಗ್ಯೂ ಕೆಲವರು ಪ್ರಚಾರಕ್ಕೆ ಬಾರದೆ ತೆರೆಮರೆಯಲ್ಲಿಯೇ ಎಲೆ ಮರೆಯ ಕಾಯಿಯಂತೆ ಜೀವಿಸುತ್ತಿದ್ದಾರೆ. ಅಂತಹ ವ್ಯಕ್ತಿಗಳಲ್ಲಿ ಚಿತ್ರಕಲೆಗಳಲ್ಲಿಯೇ ತಮ್ಮ ಜೀವಿತದ ಕಾಲವನ್ನು ನೂಕಿದ ಕಲಾವಿದರು ಅನೇಕರು. ಈ ಸಾಲಿಗೆ ಸೇರಿಸಬಹುದಾದ ಹೆಸರು ಬಾಗೂರು ಮಾರ್ಕಾಂಡೇಯ ಅವರದು. ಮಾರ್ಕಾಂಡೇಯ ಅವರು ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿನ ಬಾಗೂರಿನವರು. ಚಿನ್ನಗೋವಿಂದಪ್ಪ, ಲಕ್ಷ್ಮಮ್ಮ ದಂಪತಿಗಳ ಏಕಮಾತ್ರ ಪುತ್ರರು.

ಐತಿಹಾಸಿಕವಾಗಿ ತನ್ನದೆಯಾದ ಮಹತ್ವ ಪಡೆದಿರುವ 'ಚಿತ್ರದುರ್ಗಕ್ಕೆ ಜಿನ್ಮೂಲಗಿರಿದುರ್ಗ, ಬೊಮ್ಮಚನೂರು, ಅಥವಾ ಬೆಮ್ಮತ್ತನೂರು, ಎಂದು ಕರೆಯುವರು. (ರೈಸ್ ಸಾಹೇಬರ ಮೈಸೂರು ಶಾಸನಗಳಲ್ಲಿ ಚಿತ್ರದುರ್ಗವೆಂಬ ಸಂಪುಟದ ಶಾಸನವನ್ನು ನೋಡಬಹುದು).'[೧] ಭೌಗೋಳಿಕವಾಗಿ ಏಳುಸುತ್ತಿನ ಕೋಟೆಯನ್ನು ಹೊಂದಿದ್ದು, ದುರ್ಗದ ಆಳ್ವಿಕೆಯಲ್ಲಿ ಮದಕರಿನಾಯಕನು ಪ್ರಖ್ಯಾತನಾಗಿದ್ದಾನೆ. ಹೀಗೆ ಪಾಳೆಯಗಾರರ ಆಳ್ವಿಕೆಯ ನಂತರ ಮೈಸೂರು ಅರಸರ ಆಳ್ವಿಕೆಗೆ ಒಳಪಟ್ಟ ಈ ನಾಡು ತನ್ನ ಒಡಲಲ್ಲಿ ಸಾಹಿತ್ಯ, ಚಿತ್ರಕಲೆ, ಜನಪದ ಕಲೆ, ನಾಟಕ, ಸಂಗೀತಗಳನ್ನು ತನ್ನ ಮುಡಿಯಲ್ಲಿ ತುಂಬಿಕೊಂಡು ಸಾಂಸ್ಕೃತಿಕವಾಗಿ ಬೆಳೆದಿದೆ. ಇಂತಹ ಸಾಂಸ್ಕೃತಿಕ ಜಿಲ್ಲೆಯಲ್ಲಿ ಬರುವ ಹೊಸದುರ್ಗ ತಾಲೂಕಿನ ಬಾಗೂರಿನಲ್ಲಿ ಜನಿಸಿದವರು ಕಲಾವಿದರಾದ ಮಾರ್ಕಾಂಡೇಯ

ಅವರು. ಇದು ಹೊಸದುರ್ಗದಿಂದ ಪಶ್ಚಿಮಾಭಿಮುಖವಾಗಿ ಪ್ರಯಾಣಿಸಿದರೆ ೧೦ ಕಿ.ಮೀ. ಅಂತರದಲ್ಲಿ ಗೋಚರಿಸುತ್ತದೆ. ಈ ಊರ ಕುರಿತಾಗಿರುವ ಜನಪದ ಗೀತೆಯೊಂದರಲ್ಲಿ ಈ ರೀತಿಯಲ್ಲಿ ವರ್ಣನೆಯಿದೆ.

ಬಾಗೂರು ಬಿಳಿ ಎಲೆ ಮಾರುವಾಗ
ಬೇಡಿದರೇನಾಯ್ತೋ ಜಾಣ, ಬೊಗಸೆ ಅಕ್ಕಿ ಹಾಕಬೇಕು
ಬಾಗೂರು ಸಂತೆಗೋಗಬೇಕು. ಬಾಗೂರಿಗೋಗಬೇಡ
ಬಳೆಯ ತೊಡಲು ಬೇಡಂತ ನಾನಂದಿನೇನೆ ತಂಗ್ಯಮ್ಮ
ನಿನ್ನ ನಾನಂದಿನೇನೆ. ಸಣ್ಣಕ್ಕಿ ಬಾಗೂರು ನೆನೆ ಕಾಲೆ ದುರ್ಗ್ಗ ಅಣಮದಕರಿ
ಹೊಳೆಸೀಮೆ ರಾಯರು ತನ್ನ ಅರಮನೆಗೆ ಹವಳಾದ ಬೀಗ ಹಾಕಿ
ಬಾಗೂರು ಸೀಮೆ ಸಲುವ್ಯಾರು

ಹೀಗೆ ಜನಪದ ಗೀತೆಗಳಲ್ಲಿ ಬಾಗೂರಿನ ಕುರಿತಾಗಿ ಬಂದಿರುವ ಚಿತ್ರಣಗಳನ್ನು ಗಮನಿಸಿದರೆ ಸಾಕು ಅದರ ವೈಭವದ ಮಹತ್ವದ ವೈಶಿಷ್ಟ್ಯಗಳು, ಐತಿಹಾಸಿಕ ಸ್ಥಾನಮಾನಗಳು ನಮಗೆ ಕೊಂಚವಾದರೂ ಕಲ್ಪನೆಗೆ ನಿಲುಕುತ್ತದೆ.

'ಬಾಗೂರಿನ ಹಳೆಯ ಹೆಸರು ಭಾಗ್ಯಪುರ ಅಥವಾ ಭಾಗ್ಯಪುರಿ. ಈ ಹಿಂದೆ ಗದ್ದೆಗಳಲ್ಲಿ ಸಣ್ಣಕ್ಕಿ ಬೆಳೆಯುತ್ತಿದ್ದುದ್ದರಿಂದ ಈ ಊರನ್ನು 'ಸಣ್ಣಕ್ಕಿ ಬಾಗೂರು' ಎಂದು ಕರೆಯುತ್ತಾರಂತೆ'[೨] ಎಂದು ಭಗವಾನ್ ಚರ್ಚಿಸಿದ್ದಾರೆ. ಕ್ರಿ.ಶ. ೧೧ನೇ ಶತಮಾನದಿಂದ ಮೊದಲ್ಗೊಂಡು ಮುಂದೆ ಐದಾರು ಶತಮಾನಗಳ ಕಾಲ ಸಂಪದ್ಭರಿತವಾಗಿ ಮೆರೆದ ಬಾಗೂರಿಗೆ ತನ್ನದೇಯಾದ ಚಾರಿತ್ರಿಕ ಅಂಶಗಳನ್ನು ತನ್ನಲ್ಲಿ ವಿಲೀನಿಸಿಕೊಂಡಿದೆ. ಒಂದು ಕಾಲಕ್ಕೆ ಬಾಗೂರಿನಲ್ಲಿ ಅಕ್ಕಿ, ಬಾಳೆ, ವೀಳ್ಯೆದೆಲೆ ಬೆಳೆಯುತ್ತಿದ್ದರಿಂದ 'ಸಣ್ಣಕ್ಕಿ ಬಾಗೂರು' ಎಂದು ಕರೆಸಿಕೊಳ್ಳುವ ಈ ಊರು ಅಂದಿನಿಂದಲೂ ಸಂತೆಗೆ ಹೆಸರುವಾಸಿಯಾಗಿದೆ.

ಭೌಗೋಳಿಕವಾಗಿ ಈ ಪ್ರದೇಶವು ಚೋಳ, ಹೊಯ್ಸಳ, ಮೊಘಲ, ವಿಜಯನಗರ, ಚಿತ್ರದುರ್ಗದ ಪಾಳೆಯಗಾರರು, ಮೈಸೂರು ಅರಸರು ಆಳಿದರೆಂದು ತಿಳಿಯುವುದು. ಇಲ್ಲಿ ಆಳಿದವರ ಸಾಹಸ, ಔದಾರ್ಯ, ದೈವಭಕ್ತಿ, ರಾಜಕೀಯ ನೈಪುಣ್ಯತೆ ಆದರ್ಶಯುತವಾಗಿದೆ. ಈ ಊರಿನಲ್ಲಿ ನೂರಾ ಒಂದು ದೇವಸ್ಥಾನಗಳು ಇದ್ದು ಅವುಗಳಲ್ಲಿ ಸಾಕಷ್ಟು ದೇವಾಲಯಗಳು ಹಾಳಾಗಿ ನಶಿಸಿಹೋಗಿವೆ. ಹಿಂದಿದನ್ನು ನೆನಪಿಸಲು ಶಿಥಿಲಾವಸ್ಥೆಯಲ್ಲಿರುವ ದೇವಾಲಯಗಳು ಕುರುಹುಗಳಾಗಿವೆ. ಅದರಲ್ಲಿಯೂ ಕೆಲವು ದೇವಾಲಯಗಳು ಇಂದಿಗೂ ಇದ್ದು ಅವು ತಮ್ಮ ಗತವೈಭವವನ್ನು ನೆನಪಿಸುತ್ತಿವೆ. ಶ್ರೀ ಚೆನ್ನಕೇಶವ ದೇವಸ್ಥಾನವು ಹೊಯ್ಸಳ ಅರಸರ ವಿಷ್ಣುವರ್ಧನ ನಿರ್ಮಿಸಿದ್ದು, ಇದರ ಬಳಿ ಇರುವ ತುಲಾಭಾರ ಸ್ಥಂಭ, ವಸಂತ ವಾಟಿಕೆ (ಮುಂದಿನ ಮಂಟಪ), ಕೈಸಾಲೆ, ಯಾಗಶಾಲೆ, ವೃಂದಾವನ

ಈ ದೇವಾಲಯದ ಹಿಂಬದಿಗೆ ಶ್ರೀಲಕ್ಷ್ಮೀ ದೇವಾಲಯವಿದೆ. ಹೊಯ್ಸಳ ಕಾಲದಲ್ಲಿ ನಿರ್ಮಾಣವಾಗಿರುವ ಇದನ್ನು ಸಂತೆಬೆನ್ನೂರಿನ ಪಾಳೆಗಾರ ಹನುಮಂತಪ್ಪನ ಮೊಮ್ಮಗ ರಾಜಪ್ಪ ನಾಯಕ, ಜೀರ್ಣೋದ್ಧಾರಗೊಳಿಸಿ ದೇವರಿಗೆ ದತ್ತಿಬಿಟ್ಟು ಕೊಟ್ಟಿದ್ದನು. ಇದರ ಮುಂಭಾಗ ೫೦ ಅಡಿ ಎತ್ತರದ ಏಕಶಿಲಾಸ್ಥಂಭವಿದೆ. ಇದನ್ನು ವಿಜಯನಗರದರಸ ವೀರ ಪ್ರತಾಪನ ಕಾಲದಲ್ಲಿ ಪ್ರತಿಷ್ಠಾಪಿಸಿದನೆಂದು ಈ ಸ್ಥಂಭದ ಬುಡದಲ್ಲಿರುವ ಶಾಸನವು ತಿಳಿಸುತ್ತದೆ. ಇದರ ತುತ್ತ ತುದಿಯಲ್ಲಿ ಗರುಡ ಮೂರ್ತಿ ಸುಂದರವಾಗಿದೆ. ಈ ದೇವಾಲಯದ ಸಂಕೀರ್ಣದಲ್ಲಿ ಕೋದಂಡರಾಮನ ವಿಗ್ರಹ, ಚಿನ್ನದ ಗರುಡವನ್ನು ಕಾಣಬಹುದು. ಹಾಗೆಯೇ ಚನ್ನಕೇಶವನ ಜಾತ್ರೆಯನ್ನು ಕಾಲಕ್ಕನುಗುಣವಾಗಿ ಪ್ರಸ್ತುತವಾಗಿಯೂ ಮಾಡಲಾಗುತ್ತಿದೆ. ಅದರಂತೆಯೆ ಮತ್ತೊಂದು ದೇವಾಲಯಗಳಾದ 'ಅಂತರಘಟ್ಟಮ್ಮ, ಚೌಡಮ್ಮ, ಭೂತರಾಯ, ಬಿಳಿಕೆಂಚರಾಯ, ಸೋಮಪ್ಪ, ಹಲ್ಕುರಮ್ಮ, ಕಟ್ಟೆಚೌಡಿ, ಹನುಮಂತರಾಯ, ದುರ್ಗಮ್ಮ, ಬೀರಪ್ಪ, ಬನಶಂಕ್ರಮ್ಮ, ಐತಾಪುರ ರಸ್ತೆಯಲ್ಲಿರುವ ಹನುಮಂತದೇವರು, ದುರ್ಗಮ್ಮ, ಪರಪ್ಪ, ಸ್ವಾಮಿ ಕಾಳೀಗುಡಿ ಮಸೀದಿ.'[೩] ಇವುಗಳ ಜೊತೆಗೆ ಸಣ್ಣಕ್ಕಿ ವೀರಣ್ಣ, ವೈಕುಂಟನಾರಾಯಣ, ಪ್ರಾಣನಾಥದೇವರು, ಉಚ್ಚಂಗೆಲ್ಲಮ್ಮ, ಬಸವಣ್ಣ, ಗುಳ್ಯಮ್ಮ, ಮುನಿಯಮ್ಮ, ಪಾಂಡುರಂಗ, ಕೋಡಿ ಮಲ್ಲೇಶ್ವರ ದೇವಾಲಯಗಳನ್ನು ನೋಡಬಹುದು. ಹಾಗೆಯೇ ಚರಂಡಿಮಠ, ವಿರಕ್ತಿಮಠ, ಅವಿರಕ್ತಮಠ, ಆರಾಧ್ಯಮಠ, ಮಂಡಲಿಮಠ, ಸೂಗೂರಯ್ಯನಮಠ ಒತ್ತಿತ್ತಿನ ಸ್ವಾಮಿಮಠ, ರೇವಣಪ್ಪನ ಮಠಗಳನ್ನು ಕಾಣಬಹುದು.

ಮಠಗಳಲ್ಲದೆ ಐತಿಹಾಸಿಕ ವೀರಗಲ್ಲು ಮಹಾಸತಿಕಲ್ಲುಗಳಾದ ಮೂಡಲ ಮುತ್ತಿನ ಕೆರೆಯ ಏರಿಯ ಮೇಲಿರುವ ಮಹಾಸತಿ ಕೆರೆಯ ಹಿಂಭಾಗದಲ್ಲಿರುವ ಬಿಳಿದೇವನ ಗುಡಿ (ಜೈನ ಸನ್ಯಾಸಿ ಸಮಾಧಿ), ಹಲ್ಕೂರಮ್ಮನ ಗದ್ದುಗೆ ಕೆರೆಯ ಹಿಂಭಾಗ, ಪಡುವಣ ಚೆನ್ನದ ಕೆರೆಯ ಪೂರ್ವಭಾಗಕ್ಕೆ ಏರಿಯ ಪಕ್ಕದಲ್ಲಿರುವ ಭೂವಮ್ಮ (ಮುಸಲ್ಮಾನರ)ನ ಗದ್ದುಗೆ, ಸೂಗೂರಮ್ಮನ ಗದ್ದುಗೆಗಳನ್ನು ಹೊಂದಿದೆ. ಹಾಗೆಯೇ ಬಸವನ ಬಾವಿ, ಕನ್ಯೆಕರ ಬಾವಿ, ಶಿಂಡಲಿಕನ ಬಾವಿ, ಗಂಗಾಧರೇಶ್ವರ ಬಳಿಯಲ್ಲಿನ ಹೊಂಡಗಳನ್ನು ಹೊಂದಿದ್ದು, ಸಾಹಿತಿಗಳ ಹಸ್ತಮುದ್ರಿಕೆಯಲ್ಲಿ ಶಾಬ್ಧಿಕ ರೂಪ ಪಡೆದು, ಸಂಗೀತ ಲೋಕವನ್ನು ದುಡಿಸಿಕೊಳ್ಳುವಂತೆ ಊರನ್ನು ಇಂದಿಗೂ 'ಮೂಡಲ ಮುತ್ತಿನ ಕೆರೆ, ಪಡುವಣದ ಚಿನ್ನದ ಕೆರೆಯಾಗಿಯೂ ಕಾಣಬಹುದು.'[೪] ಒಟ್ಟಾರೆಯಾಗಿ ಈ ಊರು, ಸರ್ವಧರ್ಮಗಳ ಸಮನ್ವಯತೆಯನ್ನು ಸಾರುವ ಸಾಮರಸ್ಯಕ್ಕೆ ಪ್ರತೀಕವಾಗಿದ್ದು, ಇಂದಿಗೂ ತನ್ನ ಬಾಂಧ್ಯವದ ಬೆಸುಗೆಯನ್ನು ಜೀವಂತವಾಗಿರಿಸಿಕೊಂಡಿದೆ. ಇಂತಹ ಪರಿಸರದಲ್ಲಿ ಹುಟ್ಟಿ ಬೆಳೆದ ಕಲಾವಿದ ಮಾರ್ಕಾಂಡೇಯ ಅವರ ಬಾಲ್ಯ, ಜೀವನ, ಶಿಕ್ಷಣ, ವೃತ್ತಿ ಪ್ರವೃತ್ತಿ, ಹವ್ಯಾಸಗಳನ್ನು ತಿಳಿಯುವುದು ಅತ್ಯಂತ ಅವಶ್ಯಕವೆನಿಸುತ್ತದೆ.

ಬಾಲ್ಯ ಪರಿಸರ

ಚಿನ್ನಗೋವಿಂದಪ್ಪ, ಲಕ್ಷ್ಮಮ್ಮ ದಂಪತಿಗಳ ಮಗನಾಗಿ ಬಾಗೂರಿನಲ್ಲಿ ಜನಿಸಿದ

ಮಾರ್ಕಾಂಡೇಯರು ಇವರ ಕುಟುಂಬ ಮೂಲತಃ ಬಡತನದಿಂದ ಕೂಡಿದ್ದು, ತಂದೆ ಕೃಷಿಯನ್ನು ಅವಲಂಬಿಸುವುದರ ಜೊತೆಗೆ ಮೀನು ಹಿಡಿಯುವ ಕಸುಬನ್ನು ಅವಲಂಬಿಸಿ ಹಾಗೆಯೇ ತಾಯಿ ಮಾವಿನ ಮರಗಳನ್ನು ಗುತ್ತಿಗೆ ಪಡೆದು ಮಾವಿನ ಹಣ್ಣನ್ನು ಮಾರಾಟ ಮಾಡುತ್ತಾ ಬಡತನದಲ್ಲಿ ಜೀವನ ಸಾಗಿಸುತ್ತಿದ್ದರು. ಅಂತಹ ಕಡುಬಡತನದಲ್ಲಿ ಜೀವಿಸುತ್ತಿದ್ದ ದಂಪತಿಗಳು, ಮೈದಾ ಹಿಟ್ಟಿನಿಂದ ತಯಾರಿಸಿದ ದೋಸೆಯಿಂದ ತನ್ನೊಡಲ ಹಸಿವನ್ನು ನೀಗಿಸಿಕೊಂಡು ಗುಂಡಿ ಕಡಿದು ಮಣ್ಣನ್ನು ಹೊತ್ತು ಕುಟುಂಬದ ಆರ್ಥಿಕ ವ್ಯವಸ್ಥೆಯನ್ನು ಸರಿದೂಗಿಸುತ್ತಿದ್ದರಂತೆ. ಹೀಗೆ ಮಾಡಲು ಕಾರಣವೇನೆಂದರೆ ಇವರು ೨೨ ಎಕರೆ ಜಮೀನನ್ನು ಹೊಂದಿದ್ದು, ಜೋಡಿ ಎತ್ತುಗಳಿಂದ ಉತ್ತಿ ಬಿತ್ತಿ ಬೆಳೆಯುವ ಕಾಲದಲ್ಲಿ ಅವರ ಸಹೋದರ ಅವರ ಏಳಿಗೆಯಾಗಬಾರದೆಂದು ಕೆಲವೊಂದು ಅಸಮತೋಲನ ವ್ಯವಸ್ಥೆಯನ್ನು ಸೃಷ್ಟಿಸಿದಾಗ ನಾನು ಸ್ವ-ಕುಟುಂಬವನ್ನು ಹೊರ ಹಾಕಿಕೊಂಡು ಈ ರೀತಿಯ ಕಷ್ಟಪಡಬೇಕಾಯಿತು ಎನ್ನುತ್ತಾರೆ. ಈ ಕಷ್ಟಗಳ ಜೊತೆಯಲ್ಲಿ ಕಲೆಗಾಗಿಯೇ ಅಥವಾ ದುಡಿದ ಮೈ ವಿಶ್ರಾಂತಿಗಾಗಿಯೇ ನಾನು ನಾಟಕಗಳನ್ನು ಆಡುತ್ತಿದ್ದೆ. 'ರಾಮಾಯಣ, ಚಿತ್ರಕೇತು, ಲಂಕಾದಹನ, ಮಹಾರಾಜ ಹರಿಶ್ಚಂದ್ರ ಮುಂತಾದವು. ನಾರದನ ಪಾತ್ರ, ಹರಿಶ್ಚಂದ್ರ, ವಿಶ್ವಾಮಿತ್ರನ ಪಾತ್ರಗಳನ್ನು ಸಾಂಗವಾಗಿ ನಿಭಾಯಿಸಿದ್ದು, ಇಂತಹ ಸಮಯದಲ್ಲಿ ನನ್ನ ಮಗ ಮಾರ್ಕಾಂಡೇಯನನ್ನು ತನ್ನ ಹೆಗಲ ಮೇಲೆ ಕೂರಿಸಿಕೊಂಡ್ಹೋಗಿ ನಾಟಕ ನೋಡಲು ಅಣಿ ಮಾಡುತ್ತಿದ್ದೆ. ಬರುವಾಗ ಮಹಾಕಾವ್ಯದ ವಾಸನೆಯ ಮಾತುಗಳನ್ನು ಕೇಳಿಸುತ್ತಿದ್ದೆ. ಕಂದಪದ್ಯಗಳ ಗೀಳನ್ನು ತೋಡಿಸುತ್ತಿದ್ದೆ. ನಾನು ಮೂರನೇ ತರಗತಿಯನ್ನು ಅಭ್ಯಾಸ ಮಾಡಿದ್ದು, ನನ್ನ ಬಳ್ಳಿಗೆ ಎಲೆಗಳನ್ನು ಪೋಣಿಸಿದಂತೆ 'ಸ್ವಾಮಿ ದೇವನೆ ಲೋಕ ಪಾಲನೆ, ಇತರೆ ಭಕ್ತಿ ಮಾರ್ಗದ ಆಚಾರಗಳನ್ನು ತೊಡಿಸುತ್ತಿದ್ದೆ. ಸಮಾಜದ ನೀತಿಗ್ರಹಿಕೆಗಳನ್ನು ತಲೆಯಲ್ಲಿ ತುಂಬುತ್ತಿದ್ದರು. ಮಾರ್ಕಾಂಡೇಯನನ್ನು ಚಿಕ್ಕನಾಗಿದ್ದಾಗಿನಿಂದ ಹಿಡಿದು ೧೧-೧೨ ವರ್ಷದವರೆಗೆ ಹೊತ್ತುಕೊಂಡು ತಿರುಗಾಡುತ್ತಿದ್ದೆ. ತನ್ನಂತೆಯೇ ತನ್ನ ಮಗ ಮಾಡಕೂಡದು. ಈತನಗೆ ಚೆನ್ನಾಗಿ ಶಿಕ್ಷಣ ಕೊಡಿಸಿ ಡಾಕ್ಟರ್ ಮಾಡಬೇಕು ಎಂಬ ಹಂಬಲವನ್ನು ತನ್ನ ಹೆಗಲ ಮೇಲೆ ಹೊಂದಿದ್ದರಂತೆ."[3]

ಈ ರೀತಿಯಾದ ಎಲ್ಲಾ ಅನುಭವಗಳನ್ನು ತಂದೆಯಿಂದ ಏನೂ ಅರಿಯದ ಬಾಲ್ಯದಲ್ಲಿಯೇ ತಿಳಿಯಾದ ಮನಸ್ಸಿನಲ್ಲಿ ಮೂಡಿಸಿಕೊಂಡು ಅವರ ಮಡಿಲಲ್ಲಿ ಬೆಳೆಯತೊಡಗುತ್ತಿದ್ದಂತೆ ಶಾಲೆಯ ಮೆಟ್ಟಿಲೇರುವ ವಯೋಮಾನದ ಮುನ್ನ ಯಲ್ಲಮ್ಮನ ದೇವಸ್ಥಾನ ಕೂಲಿಮಠಕ್ಕೆ ಕಳುಹಿಸುತ್ತಿದ್ದರಂತೆ. ಆಗ ಮರಳಿನ ಮೇಲೆ ಬರಹಗಳು ಮೂಡಿಸುವುದು ಸಹಜವಾಗಿತ್ತಂತೆ. ನಂತರ ಬಾಲ್ಯದ ಚೇಷ್ಟೆಯಲ್ಲಿ 'ಬಾಣಪ್ಪನ ಕಲ್ಲಿನಲ್ಲಿ ಗಣೇಶನನ್ನು ಸೃಷ್ಟಿಸಿ ಮನೆಯಲ್ಲಿಟ್ಟು ಆರಾಧನೆ ಮಾಡುತ್ತಿದ್ದರಂತೆ. ಈ ಗಣೇಶ ಮೂರ್ತಿಯು ಮುಂದಿನ ಕೆಲಸ ಕಾರ್ಯಗಳಿಗ ವಿಘ್ನನಿವಾರಕನಾದಂತೆ. ೫-೬ ವಯಸ್ಸಿನಲ್ಲಿ ಆಂಜನೇಯನ ಚಿತ್ರ ಬರೆದು ಊರಿನ ಶರಣಮ್ಮನ ಗುಡಿಯಲ್ಲಿ ಗೋಡೆಗೆ ತಗುಲಿಹಾಕಿದ್ದನ್ನು ಎಲ್ಲಾ ಜನಸಾಮಾನ್ಯರು ನೋಡಿ ಬೆರಗಾಗಿದ್ದರಂತೆ. ವಿಶೇಷವಾಗಿ ಅದೇ ಊರಿನ ನನ್ನ ಸ್ನೇಹಿತನಾದ

ಜರಗಜ್ಜರ ಪರಪ್ಪ ಎಂಬುವವರು ಈತನನ್ನು ಧಾರವಾಡದ ಕಲಾಶಾಲೆಗೆ ಕಳುಹಿಸು ಎಂದು ಹೇಳಿದರು. ಇವೆಲ್ಲವುಗಳ ಜೊತೆಗೆ ಮಾರ್ಕಾಂಡೇಯ ಅವರು ಬಾಲ್ಯದಲ್ಲಿ ಗೋಲಿ, ಗಜ್ಜುಗ, ಚೆಂಡು ಆಟಗಳನ್ನು ರಾಜು, ಮುಸ್ಲಿಂ ಸ್ನೇಹಿತನಾದ ಐಯುಬ್, ಅತ್ತೆ ಮಗ ಶಿವಪ್ಪ ಇತರರ ಜೊತೆ ಆಡುತ್ತ ಪೇಚಾಟಕ್ಕೆ ಸಿಕ್ಕಿಕೊಂಡು ತಂದೆ ಕೈಯಲ್ಲಿ ಮೈತುಂಬ ಬಾಸುಂಡೆ ಬರುವಂತೆ ಬಡಿಸಿಕೊಂಡು ನಂತರ ಈ ಊಟ ನೀಡಿದ ಕೈಗಳು ಪುನಃ ನೋವಿನಿಂದ ಅವನ್ನು ಸವರಿ ಸಮಾಧಾನ ಪಡಿಸಿ ಹಸಿದ ಕಂದನ ಒಡಲಿಗೆ ಊಟ ಬಡಿಸಿ ಪುನಶ್ಚೇತನ ಮಾಡಿದ್ದನ್ನು ನೆನೆಸಿಕೊಳ್ಳುತ್ತಾರೆ.'[೬] ಹೀಗೆ ಹಳ್ಳಿಯಲ್ಲಿನ ಇತರ ಸರಿಕರಂತೆ ಆಡುತ್ತಾ, ಕುಣಿಯುತ್ತಾ ಬಾಲ್ಯವನ್ನು ಅನುಭವಿಸಿ ಬೆಳೆದ ಮಾರ್ಕಾಂಡೇಯ ಅವರಲ್ಲಿನ ಪ್ರತಿಭೆ ಶಾಲಾ ದಿನಗಳಲ್ಲಿ ಮತ್ತು ಅನಂತರವೂ ಬೆಳೆಯುತ್ತಲೇ ಸಾಗಿತು.

ಶಿಕ್ಷಣ:

ಅಪ್ಪ, ಅವ್ವಂದಿರು ಶಾಲೆಯ ಮುಖ ನೋಡದ ಅನಕ್ಷರಸ್ಥರಾದರೂ ತಮ್ಮಂತೆ ತಮ್ಮ ಮಗ ಆಗಬಾರದೆಂದು ತಾವು ಮಾಡಿದದ್ದನ್ನು ತಮ್ಮ ಮಕ್ಕಳ ಕೈಲಿ ಮಾಡಬೇಕೆಂಬ ಆಸೆಯಿಂದ ಕಷ್ಟಗಳನ್ನು ತಾವೆ ಉಂಟು ಪಾಟಿಚೀಲ ತಂದು ಹೊಸ ಉಡುಗೆ ತೊಡಿಸಿ, ಉದ್ದನೆಯ ತಲೆ ಕೂದಲಿಗೆ ಹರಳೆಣ್ಣೆ ಮೆತ್ತಿ ಬಾಚಿ ನಡೆಯಲಾರೆ ಎಂದಾಗ ಹೆಗಲ ಮೇಲೆ ಕೂರಿಸಿ ತಂದು ಈ ಊರಿನ ಪ್ರಾರಂಭಿಕ ವಿದ್ಯಾಕೇಂದ್ರವಾದ ಸರ್ಕಾರಿ ಶಾಲೆಯಲ್ಲಿ ಮಾರ್ಕಂಡೇಯ ಅವರನ್ನು ವಿದ್ಯಾಗುರುಗಳಾದ ಹನುಮಂತಪ್ಪನಲ್ಲಿ ಬಿಡುತ್ತಿದ್ದ ವಾಡಿಕೆ ಇವರ ಪಾಲಿಗೆ ಇತ್ತು'[೬] ಎನ್ನುತ್ತಾರೆ.

ಈ ವಿದ್ಯಾಗುರುಗಳ ಹತ್ತಿರ ಅ ಆ ಇ ಈ ತಿದ್ದಿದ್ದು, ತುಂಟತನ ಮಾಡಿ ಕೈಗಣ್ಣುಗಳ ಮೇಲೆ ರೋಲರ್ ನಿಂದ ಹೊಡೆತ ತಿಂದಿದ್ದು ಇವರಿಗೆ ಇನ್ನೂ ಸಹಿತ ನೆನಪಂತೆ. ಬಾಲ್ಯದ ತುಂಟತನ ಬಿಡದೆ ಆಗ ಇವರ ಸ್ನೇಹಿತರುಗಳಾದ ಐಯುಬು, ರಾಜು, ಅತ್ತೆಯ ಮಗ ಶಿವಪ್ಪ ಇನ್ನೂ ಇತರರೊಡಗೂಡಿ ಪಾಠ, ಪ್ರವಚನಕ್ಕೆ ಹಿಮ್ಮುಖ ತೋರಿಸಿ ಎದುರುಗಡೆಯ ಕೆರೆಯಲ್ಲಿ ಈಜಾಡಲು ಹೋಗಿದ್ದಾಗ ಇವರ ತಂದೆ 'ನನ್ನ ಮಗ ಊಟ ಮಾಡಿ ಹೋಗಿಲ್ಲ ಎನ್ನುವ ವಿಚಾರ ತಿಳಿದು ಪಕ್ಕದ ಬೀದಿ ಶಿವಣ್ಣನ ಮನೆಗೋಗಿ ಅವರು ತೋರಿಸಿದ ಕೆಲಸ ಪೂರೈಸಿ ನಾಲ್ಕಾಣೆಯ ಸಂಭಾವನೆಯನ್ನು ತೆಗೆದುಕೊಂಡು ತನ್ನೊಡಲನ್ನು ಲೆಕ್ಕಿಸದೆ ಪುಟ್ಟನ ಒಡಲಿನ ಸಿವಿಗಾಗಿ ಚಪ್ಪೆರೊಟ್ಟಿ, ಒಂದಾಣೆ ಪುರಿ, ಖಾರ, ಮತ್ತು ಅರ್ಧಾಣೆಯ ಜಗನ್ಮೋಹಿನಿಯ ತಿಂಡಿಯನ್ನು ತೆಗೆದುಕೊಂಡು ಶಾಲೆಯ ಕಡೆ ಕಾಲು ಹಾಯಿಸಿ ಶಾಲಾ ಕೊಠಡಿಗಳ ಕಿಟಕಿಗಳಲ್ಲಿ ನೋಡುತ್ತಿದ್ದರಂತೆ. ಏಕೆಂದರೆ ಆಗಿನ ಶಿಕ್ಷಣ ಮತ್ತು ಶಿಕ್ಷಣಕ್ಕಿದ್ದ ಗೌರವದಿಂದ ಶಾಲೆ ಎಂದರೆ ದೇವಾಲಯವಿದ್ದಂತೆ, ಭಯ-ಭಕ್ತಿಯ ವಾತಾವರಣವಿತ್ತು ಎಂದು ಹೇಳಬಹುದು. ಈ ಭಯದಿಂದ ತಂದೆ ಮಾಸ್ತರನ್ನು ಕೇಳಿದರೆ ಯಾರೇನೇಂದಾರೋ ಎಂದುಕೊಂಡರೂ ಎನ್ನುವ ತುಮಲದಿಂದ ಓರ್ವ ಹುಡುಗನನ್ನು

ನನ್ನ ಮಗ ಎಲ್ಲಿ ಎಂದು ಕೇಳಿದಾಗ ಬೆಳಿಗ್ಗೆ ಬಂದಾಗಿತ್ತು ಎಂದನಂತೆ. ಪುನಃ ಇಣುಕಿ ನೋಡಿದರೆ ಕಾಣದಿದ್ದಾಗ ಗಾಬರಿಯಿಂದ ತನ್ನ ಎದುರಿಗೆ ಬರುವ ಶಿಕ್ಷಕರನ್ನು ಕೇಳಿದರಂತೆ. ಆಗ ಎದುರುಗಡೆ ಕೆರೆಯಲ್ಲಿ ನೋಡಿ ಎಂದಾಗ ಚಿನ್ನಗೋವಿಂದಪ್ಪನ ಕಾಲು ಕೆರೆಯ ಕಡೆ ದಾವಿಸಿ, ಕೆರೆಯ ಬಯಲಲ್ಲಿ ತನ್ನ ಮಗ ಗೋಲಿ ಆಡುತ್ತಿರುವುದನ್ನು ನೋಡಿ ಹೆಗಲ ಮೇಲಿದ್ದ ಮಂಡಕ್ಕಿ ಖಾರದ ಟವಾಲು ಕೈಗೆ ಆಯುಧವನ್ನಾಗಿ ಬಳಸಿಕೊಂಡು ರುದ್ರಾವತಾರ ರೂಪಿತರಾಗಿ ಮಗನಿಗೆ ಎಲ್ಲೆಂದರಲ್ಲಿ ಏಟುಗಳನ್ನು ನೀಡಿದರಂತೆ. ನಂತರ ಮಗನಿಗೆ ಬುದ್ದಿಯನ್ನು ಹೇಳಿ 'ನಾನು ನಿನ್ನ ಮೇಲೆ ಏನೇನೋ ಆಸೆ ಇಟ್ಟುಕೊಂಡಿದ್ದೇನೆ. ಪುಂಡರ ಸಹವಾಸ ಮಾಡಬೇಡ, ಚೆನ್ನಾಗಿ ಶಿಕ್ಷಣ ಪಡೆದು ಸಮಾಜದಲ್ಲಿ ಒಳ್ಳೆಯ ವ್ಯಕ್ತಿಯಾಬೇಕು ನೌಕರಿ ಪಡೆಯಬೇಕು' ಎಂದು ಮೈದವಡುತ್ತ ಹೇಳಿದರಂತೆ. ಅಂದಿನ ಹೃದಯದ ಮಾತುಗಳು ತನ್ನಲ್ಲಿ ಸ್ವೀಕಾರ ಮಾಡಿಕೊಂಡು ಪುನಃ ಅವರೀರ್ವರಲ್ಲಿ ಹೃದಯಗಳು ಸಂಗಮವಾಗಿವೆ. ಈ ಸಂಗಮದ ಅರಿವಿನಿಂದ ಆರನೇ ತರಗತಿಯಿಂದ ಓದಲು ಹಿಂದಿ ಪಂಡಿತ ಮುರುಘೇಂದ್ರಪ್ಪನವರ ಮನೆಯಲ್ಲಿ ಬದುಕು ಮಾಡಿಕೊಂಡು ಅಣಿಯಾದರು. ಇವರು ನಾಲ್ಕರಿಂದ ಐದನೇ ತರಗತಿಗೆ ಬರುವಾಗ ಒಂದು ನೋಟ್‌ಬುಕ್, ಪೆನ್ಸಿಲ್ ಕೊಟ್ಟಿದ್ದರು. ಇದರಿಂದ ತೃಪ್ತನಾಗಿ ಕಲಿಯುತ್ತಿದೆ. ಕಾಲ ಕಳೆಯುತ್ತಿದ್ದಂತೆ 'ನನ್ನ ಊರಿಗೆ ಓರ್ವ ವ್ಯಕ್ತಿ ಬಂದು ರಾಧಾಕೃಷ್ಣರ ಚಿತ್ರವನ್ನು ಬರದಿದ್ದನು. ಅದನ್ನು ನೋಡಿ ನಾನು ಪ್ರೇರಣೆಗೊಂಡೆನು'[೮] ಎನ್ನುತ್ತಾರೆ. ಆಗ ಮಮ್ಮ ಅತ್ತೆಯ ಮಗ ಚಂದ್ರು ಸವಾಲೆಸೆದು ಇಂತಹ ಚಿತ್ರವನ್ನು ನೀನು ಬರೆಯಬಲ್ಲೆಯ ಎಂದಾಗ ಇದನ್ನು ಸವಾಲಾಗಿ ಸ್ವೀಕರಿಸಿಕೊಂಡು ಕಲಾ ಲೋಕಕ್ಕೆ ದುಮುಕಿದೆ ಎನ್ನುತ್ತಾರೆ. ವರ್ಷದವನಿರುವಾಗ ಕೆರೆಯಲ್ಲಿ ಸಿಗುವ ಎರೆ ಮಣ್ಣಿನಿಂದ ಗಣೇಶನ ಮೂರ್ತಿಯನ್ನು ಮಾಡುತ್ತಿದ್ದರಂತೆ. ಆಗ ರಚಿಸುತ್ತಿದ್ದ ಗಣೇಶನ ಮೂರ್ತಿ ಸರಳವಾಗಿದ್ದರೂ ನೋಡಲು ಅಷ್ಟೇನು ಚೆನ್ನಾಗಿಲ್ಲದ್ದಿದ್ದರೂ ಅದು ಆ ವಯೋಮಾನಕ್ಕೆ ಹಿರಿಮೆಯ ವಿಚಾರವೆನಿಸುತ್ತದೆ. ಆ ಗಣಪನ ಮೂರ್ತಿಯನ್ನು ಒಂದೆಡೆ ಗೂಡಲಿಟ್ಟು, ಅದಕ್ಕೆ ಹೂ ಮುಡಿಸಿ ಊದಿನಕಡ್ಡಿ ಹಚ್ಚಿ ಭಕ್ತಿಯಿಂದ ನಮಿಸಿ ನನಗೆ ವಿದ್ಯೆ ಬುದ್ದಿಯನ್ನು ಕೊಡಪ್ಪ ಎಂದು ಬೇಡುತ್ತಿದ್ದರಂತೆ. ಮೂರು ದಿನದ ಬಳಿಕ ಒಂದಿಷ್ಟು ಗೆಳೆಯರ ಜೊತೆಯಲ್ಲಿ ಆ ಮೂರ್ತಿಯನ್ನು ತಲೆಯ ಮೇಲಿರಿಸಿಕೊಂಡು ಕೆರೆಗೆ ಹೋಗಿ ನೀರಿನಲ್ಲಿ ಮುಳುಗಿಸಿ ತಾವು ನೀರಿನಲ್ಲಿ ಮಿಂದು, ಮನೆಯವರಿಗೆ ನೀರಿನಲ್ಲಿ ಮುಂದಿದ್ದು, ಗೊತ್ತಾಗದಿರಲಿ ಎಂದು ಸ್ವಲ್ಪ ಹೊತ್ತು ಬಿಸಿಲಲ್ಲಿ ಕುಳಿತು ಮನೆಗೆ ಬರುತ್ತಿದ್ದ ದಿನಗಳು ಎಷ್ಟೋಂದು ಸುಂದರ ಅಲ್ಲವೇ? ಎಂದು ಬಾಲ್ಯದ ನೆನಪುಗಳನ್ನು ಮೆಲುಕು ಹಾಕುತ್ತಾರೆ."[೯]

ಸಣ್ಣ ವಯಸ್ಸಿನ ತಂದೆಯಂತೆ ನಾಟಕದ ಅಭಿರುಚಿಯನ್ನು ಹಚ್ಚಿಕೊಂಡು ರಾಜು, ಮೂರ್ತಿ ಸ್ನೇಹಿತರೊಡಗೂಡಿ ನಾಟಕ ಕಟ್ಟಲು ಮುಂದಾಗಿ ಹಣವನ್ನು ವ್ಯಯಮಾಡಿಕೊಂಡು ನಿರಾಸೆ ಮಾಡಿಕೊಂಡು ಮನನೊಂದಿದ್ದನ್ನು ನೆನಪಿಸಿಕೊಳ್ಳುತ್ತಾರೆ.[೧೦] ಹೀಗೆ ಸದಾ ಕಾಲವೂ ಕ್ರಿಯಾಶೀಲರಾಗಿ ಯಾವುದಾದರೂ ಒಂದು ಕೆಲಸವನ್ನು ಮಾಡುತ್ತಲೋ ಅವರ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ ಪ್ರೌಢ ಶಿಕ್ಷಣಕ್ಕೆ ಮುಂದಡಿ ಇಟ್ಟರು.

ಪ್ರೌಢಶಿಕ್ಷಣ :

ಇವರು ಎಂಟನೆ ತರಗತಿಯಲ್ಲಿ ಶಿಕ್ಷಕರು ಪಾಠಮಾಡುವಾಗ ಕೊನೆಯ ಬೆಂಚಿನಲ್ಲಿ ಕುಳಿತು ಪಾಠ ಕೇಳುತ್ತಾ ಜೇಬಿನಲ್ಲಿ ತುಂಬಿ ತಂದಿದ್ದ ತಿನಿಸುಗಳನ್ನು ತಿನ್ನುತ್ತಾ ಗಣಪನ ಚಿತ್ರವನ್ನೋ ಶ್ರೀ ಕೃಷ್ಣನ ಚಿತ್ರವನ್ನೋ ರಚಿಸುತ್ತಿದ್ದರಂತೆ. ಅಂತಹ ಸಂದರ್ಭದಲ್ಲಿ ಮೆಲ್ಲುವುದನ್ನು ನೋಡಿದ ಗುರುಗಳು ನಾನು ಹೇಳಿದ್ದನ್ನು ಕೇಳದೆ ಅದೇನು ತಿನ್ನುತ್ತಿರುವೆ, ಬರೆಯುತ್ತಿರುವೆ ಎಂದು ಪಾಠಕ್ಕೆ ಸಂಬಂಧಿಸಿದ ಪ್ರಶ್ನೆ ಕೇಳುತ್ತಿದ್ದರಂತೆ. ಅವರು ಸಕ್ಕರೆ ಕಡಲೆ, ಗುರುಗಳಿಗೆ ಗೊತ್ತಾಗದ ಹಾಗೆ ಕದ್ದು ಕದ್ದು ತಿನ್ನುತ್ತಾ ಗೆಳೆಯರಿಗೆ ಹಂಚಿದ್ದು ನಿಜವಾದರೂ ಪಾಠ ಕೇಳಿಸಿಕೊಳ್ಳುತ್ತಾ ಚಿತ್ರವನ್ನು ಬರೆಯುವುದು ಗುರುಗಳಿಗೆ ತಿಳಿದಿರಲಿಲ್ಲ. ಪ್ರಶ್ನೆ ಕೇಳಿದಾಕ್ಷಣ ಪಾಠ ಎಲ್ಲಿಯವರೆಗೆ ಸಾಗಿತ್ತು, ಯಾವ ಪ್ರಶ್ನೆ ಏನು ಉತ್ತರ ಎಂಬುದನ್ನು ಹೇಳಿದಾಗ ಅವರಿಗೂ ಅಚ್ಚರಿಯಾಗಿ ಶಿಷ್ಯನಿಗೆ ಒದೆಯುವ ಭಾಗ್ಯ ತಪ್ಪಿತಲ್ಲ ಎಂದುಕೊಳ್ಳುತ್ತಿದ್ದರೇನೋ ಮನದಲ್ಲಿ. ಆದರೆ ಅವರು ಬೆನ್ನು ತಟ್ಟಿದ್ದುದ್ದರಿಂದ ಸ್ಫೂರ್ತಿಗೊಂಡ ಬಾಗೂರರು 'ಕಾವ್ಯ ಮತ್ತು ಚಿತ್ರಕಲೆ ಎರಡನ್ನೂ ನಿಭಾಯಿಸಲು ಕಾರಣವಾಗಿದೆ'[೧೧] ಎಂದಿದ್ದಾರೆ. ಈ ಸಮಯದಲ್ಲಿನ ನನ್ನ ಗೆಳೆಯರ ಬಳಗ ವೈ.ಬಿ.ಹೆಚ್. ಯೋಗೀಶ್, ಬಿ.ಕೆ.ಶ್ರೀನಿವಾಸ, ಬಿ.ಜಿ. ಲತಾದೇವಿ, ಬಿ.ಎಸ್.ಪದ್ಮಾ, ಬಿ.ಟಿ. ಸುಜಾತ, ಪರಪ್ಪ, ಪ್ರಸುತ ಡಾಕ್ಟರ್, ಎನ್.ಜಿ.ನಾಗರಾಜ, ಎಂ.ಜಿ.ಹರೀಶ್, ಸರೋಜ, ಓಂಕಾರಮ್ಮ, ಮುಂತಾದವರು ಆಗಿದ್ದಾರೆ. ಹನುಮಂತಪ್ಪ, ಓಂಕಾರಪ್ಪ, ಮುರುಘೇಂದ್ರಪ್ಪ, ಭೈರಲಿಂಗಪ್ಪ, ಶಿವರುದ್ರಪ್ಪ, ಶ್ರೀಗಂಡಯ್ಯ, ಶರಣಪ್ಪ, ಕೆಂಗುಂಟೆ ಓಂಕಾರಪ್ಪ, ಇವರೆಲ್ಲ ಗುರು ವೃಂದವಾಗಿತ್ತು.

ಬಾಗೂರರು ಬ್ರಾಹ್ಮಣರ ಮದುವೆಯ ಮನೆಯ ಕೆಲಸದಲ್ಲಿ ಕೊಬ್ಬರಿಯನ್ನು ಕೆತ್ತಿ ಶೃಂಗರಿಸಲು, ಬೀಸಣಿಕೆಗೆ ಹೊಸ ಹೊಸ ರೂಪ ಕೊಡಲು ಆಗೆಲ್ಲಾ ಇವರಿಗೆ ಸಿಗುತ್ತಿದ್ದು, ರುಚಿಯಾದ ತಿಂಡಿ ತೀರ್ಥಗಳು ಮತ್ತು ಮನೆಯವರ ಪ್ರೀತಿ ವಿಶ್ವಾಸಗಳು. ಮದುವೆ ಮುಂಜಿಗಳಲ್ಲಿ ಮಾತ್ರವಲ್ಲ ಹಾಗಾಗ್ಗೆ ಇವರನ್ನು ನೆನೆಯುವಂತೆ ಕರೆಯುವಂತೆ ಮಾಡಿತ್ತು. ಮನೆಗೆ ಸುಣ್ಣ ಬಣ್ಣವಾದಾಗ ಯಾವುದೋ ಹಬ್ಬ ಬಂದಾಗ ಬಣ್ಣದಿಂದ ನೆಲೆಗೋಡೆಗಳನ್ನು ಸಿಂಗರಿಸುತ್ತಿದ್ದರು. ಇದನ್ನು ನೋಡಿದ ಮಿತ್ರರು ಅದೇನೋ ಅಲ್ಲೋಗಿ ದುಡಿಯುತ್ತೀ.... ಏನ್ ಸಿಕ್ಕತ್ತೋಲ. ಅಂತ ಛೇಡಿಸಿದಾಗ ಇವರು ಮೂಕರಾಗುತ್ತಿದ್ದರಂತೆ. ಹೀಗೆ ಉತ್ತಮರ ಸಹವಾಸ ಸಂಸ್ಕೃತಿಗಳ ಪ್ರಭಾವ ನನ್ನ ಮೇಲಾಯ್ತು ಎನ್ನುತ್ತಾರೆ. 'ನಾನು ಎಸ್.ಎಸ್.ಎಲ್.ಸಿ. ಕಲಿಯುವ ಸಂದರ್ಭದಲ್ಲಿ ನನ್ನ ಗೆಳೆಯರು ಶ್ರೀಮಂತ ವರ್ಗದವರು ವಿಶೇಷ ಬೋಧನಾ ಶಾಲೆಗೆ ಹೋಗುತ್ತಿದ್ದರು. ನನ್ನ ಬಡತನದಿಂದ ಇದು ಅಸಾಧ್ಯವಾಯಿತು. ಸ್ವಂತಿಕೆಯಿಂದ ಓದುಬರಹ ಕಲಿತರೆ ಜಗತ್ತಿನಲ್ಲಿ ಬದುಕಲು ಸಾಧ್ಯ ಎಂಬುದನ್ನು ಅರಿತೆ. ಆಗ ನಾನು ಧಾರವಾಡದಿಮದ ಮಾಸಪತ್ರಿಕೆ ಅಥವಾ ಮ್ಯಾಗ್ಸಿನ್ ತರಿಸಿಕೊಂಡು ಚೆನ್ನಾಗಿ ಅಭ್ಯಾಸಿಸುತ್ತಿದ್ದೆ. ನನ್ನ ಚಿತ್ರಕಲೆಯನ್ನು ಗುರುತಿಸಿದ ನನ್ನೂರಿನವರಾದ ನಾ.ಕಾಳೇಶ್ವರ

ರಾವ್ ಅವರು ಮನೆಯಲ್ಲಿ ಕುವೆಂಪು ರಚಿಸಿದ ಮಲೆಗಳಲ್ಲಿ ಮಧುಮಗಳು, ಕಾನೂರು ಸುಬ್ಬಮ್ಮ ಹೆಗ್ಗಡತಿ, ರೂಪದರ್ಶಿ, ಶಾಂತಲ, ನೆನಪಿನ ದೋಣಿಯಲಿ, ಕಾರಂತರ ಹುಚ್ಚು ಮನಸ್ಸಿನ ಹತ್ತು ಮುಖಗಳು, ಯಂಡಮುರಿ, ವೀರೇಂದ್ರನಾಥರ ತುಳಸಿ ತುಳಸಿ ದಳ, ದುಡ್ಡು-ದುಡ್ಡು, ತ.ರಾ.ಸು ಅವರ ದುರ್ಗಾಸ್ತಮಾನ, ಹಂಸಗೀತೆ, ಕಂಬನಿ ಕೊಯ್ಲು, ರಕ್ತರಾತ್ರಿ, ಇಂತಹವುಗಳಿಂದ ಇನ್ನಷ್ಟು ಜ್ಞಾನಾರ್ಜನೆ ಪಡೆದು ಕಾವ್ಯ ರಚನೆಯಲ್ಲೂ ತೊಡಗಿಸಿಕೊಂಡು ಇವರೆಲ್ಲರಿಗೂ ನಾನು ಚಿರಋಣಿ. ಈ ಎಲ್ಲಾ ಜ್ಞಾನದಿಂದ ಎಸ್.ಎಸ್.ಎಲ್.ಸಿ. ಪಾಸಾದೆ ಎಂದು ನೆನೆಯುತ್ತಾರೆ.'[೨]

ಬಾಲ್ಯದ ಹಂತದಲ್ಲಿ ಬಾಗೂರರ ಕಲೆಯನ್ನು ಅರಿಯದೆ ಇವನೇನು ಚಿತ್ರ ಗೀಚೋನು ಎಂದು ಅವಹೇಳನ ಮಾಡುತ್ತಿದ್ದರೂ ಒಳಗಿನ ಛಲ ಭುಗಿಲೆದ್ದು, ಅಂತಹವರನ್ನು ತಿರಸ್ಕರಿಸುವ ಬದಲು ನಾನು ಏನಾದರೂ ಆಗಬೇಕು. ಈ ಕಲೆಯಲ್ಲಿ ಏನಾದರೂ ಸಾಧಿಸಬೇಕು ಎಂಬ ಛಲ ಹುಟ್ಟಿಸಿದ ಮಹಾನೀಯರುಗಳು ಎಂದು ಬಾವಿಸಿದೆ. ಇಂದಿನ ನನ್ನ ಸ್ಥಿತಿಗೆ ಅವರೇ ಪ್ರೇರಕರು, ಪೂರಕರು ಎಂದು ಸ್ಮರಿಸಿಕೊಳ್ಳುತ್ತಾರೆ.

ವಿದ್ಯಾರ್ಜನೆಯ ಸಂದರ್ಭದಲ್ಲಿ ಎನ್.ಸಿ.ಸಿ., ಎನ್.ಎಸ್.ಎಸ್. ಮತ್ತು ಸ್ಕೌಟ್ಸ್-ಗೈಡ್ಸ್‌ಗಳಂತಹ ಸೌಲಭ್ಯಗಳಿಂದ ವೀರರ ಚರಿತ್ರೆ, ಮಹಾನೀಯರ ಉದಾರ ಗುಣಗಳು ಕಾಣಿಸತೊಡಗಿದ್ದು, ಓದಿನ ಜೊತೆಗೆ ಹಲವು ಆಯಾಮಗಳನ್ನು ಕಲಿತರು ತರಗತಿಯಲ್ಲಿಯೇ ಲೀಡರ್ ಆಗಿ ರಾಯಚೂರಿನ ಒಂದು ಸ್ಕೌಟ್ಸ್ ಮತ್ತು ಗೈಡ್ಸ್ ಸಮಾರಂಭಕ್ಕೆ ಹೊಸದುರ್ಗದಿಂದ ಹೋಗುವ ಅವಕಾಶ ಸಿಕ್ಕಾಗ ಗುರು ರಾಘವೇಂದ್ರರಾಯರು ಕಂಡ ಮನ ಧನ್ಯವೆಂದುಕೊಂಡರಂತೆ. ಈ ಸ್ಕೌಟ್ಸ್‌ನಿಂದ ಅರಿವಾದ ಮತ್ತೊಂದು ವಿಚಾರ ಸೇವೆಗೆ ತಾರತಮ್ಯವಿಲ್ಲ ಎಂತಹ ಕೆಲಸ ಬಂದಾಗಲೂ ಮನಸ್ಸು ಮುದಡದಿರಲು ಕಾರಣವಾಯಿತು ಎಂದಿದ್ದಾರೆ. ಕಾಯಕದಲ್ಲಿ ಭಗವಂತನನ್ನು ಕಾಣಬೇಕೆಂಬ ವಿಚಾರ ಸ್ಕೌಟಿನ ಸಹವಾಸದಿಂದ ತಿಳಿದಾಗ ನನ್ನ ಮನಸ್ಸಿಗೆ ನೆಮ್ಮದಿಯಾಯಿತೆಂದು ಸಮಾಧಾನವೆನಿಸಿಕೊಳ್ಳುತ್ತಾರೆ. ಇವರ ವಿದ್ಯಾಭ್ಯಾಸದ ಆ ಎಳೆತನದ ದಿನಗಳ ಹಿಂದಿನ ಕಥೆಗಳು ಅನೇಕ, ಪಡೆದ ಜ್ಞಾನ ಅಪಾರ.

ಪ್ರೌಢ ಹಂತದ ಶಿಕ್ಷಣ ಮುಗಿಸಿದಾಗ ನನಗೆ ಕಲಾಕ್ಷೇತ್ರದಲ್ಲಿ ಓದಲು ಅನುವು ಮಾಡಿಕೊಟ್ಟವರು. ಎಂ.ಎಂ. ಮಲ್ಲನಗೌಡ, ನಾ. ಕಾಳೇಶ್ವರರಾವ್ ಮತ್ತು ಪರಪ್ಪ. ೧೯೮೧ರಲ್ಲಿ ಧಾರವಾಡದ ಭಾರತೀಯ ಕಲಾ ಕೇಂದ್ರದಲ್ಲಿ ಅವರ ಗೆಳೆಯರಾದ ಎಂ.ಜೆ.ಪಟೇಲ್ ಜೊತೆ ನೋಂದಾಯಿಸಿಕೊಂಡು ತನ್ನ ತಂದೆಯ ಸ್ನೇಹಿತರಾದ ವಿರೂಪಾಕ್ಷಪ್ಪ ಎಂಬ ದೇವಾಂಗದವರ ಮನೆಯಲ್ಲಿ ತಂಗಿದ್ದರು. ಇವರು ಬೆಲ್ಲದ ವ್ಯಾಪಾರವನ್ನು ಮಾಡುತ್ತಿದ್ದರು. ಇದರಿಂದ ಆಂತರಿಕವಾಗಿ ನನಗೆ ಬೇಸರವೂ ಇತ್ತು. ಏಕೆಂದರೆ ವಿದ್ಯಾರ್ಜನೆಗೆ ಕಾಲ ಸಾಕಾಗುತ್ತಿಲ್ಲವೆಂದು. ಹೀಗೆ ಹೊಸದಾಗಿ ಸೇರಿದಾಗ ಅಲ್ಲಿಯ ಭಾಷೆ, ಭೌಗೋಳಿಕ ವಾತಾವರಣ ನನ್ನಲ್ಲಿ ಏನೋ ಹೊಸತನದ ಛಾಯೆಯನ್ನು ಸೃಷ್ಟಿ ಮಾಡಿತು. ಕಾಲೇಜು ಪ್ರಾಂಶುಪಾಲರಾದ ಸಿ.ಸಿ.ಪಾಟೀಲರು ಆತ್ಮೀಯತೆಯಿಂದ ಕಂಡು ಪ್ರೋತ್ಸಾಹಿಸುತ್ತಿದ್ದರು. ನಾನು ಒಂದು ದಿವಸ ಕಾಲೇಜಿಗೆ

ತಡವಾಗಿ ಹೋದರೆ ಬರುತ್ತಾ ಬರುತ್ತಾ ರಾಯರ ಕುದುರೆ ಕಿವಿ ಉದ್ದವಾಗುತ್ತಿದೆ ಎನ್ನುತ್ತಿದ್ದರು. ಇದು ನನ್ನೋರ್ವನಿಗೆ ಮಾತ್ರ ಅನ್ನುತ್ತಿದ್ದರು ಎನಿಸುತ್ತಿತ್ತು. ಇದನ್ನು ಒಂದು ಸಾರಿ ಪ್ರಶ್ನೆಯಾಗಿ ಅವರಲ್ಲಿಟ್ಟಾಗ ನಿನ್ನನ್ನು ಕಂಡರೆ ನನಗೆ ಇಷ್ಟ. ನೀನು ಚೆನ್ನಾಗಿ ಚಿತ್ರ ಬರೆಯುತ್ತಿಯಾ. ಇನ್ನೂ ಹೆಚ್ಚಿನದಾಗಿ ಅಭ್ಯಾಸ ಮಾಡಲಿ ಎಂಬ ಸಲಹೆಯ ಸೂಚನೆಯ ಮಾತು ಅದು ಎಂದು ಹೇಳಿದರು. ಈ ವಿಷಯವನ್ನರಿತ ನಾನು ಅಂದಿನಿಂದ ಶ್ರದ್ಧೆಯಿಂದ ಕಲಿತೆ. ಅವರೆಂದರೆ ಇಂದಿಗೂ ಗೌರವ ಮತ್ತು ಋಣಿಯಾಗಿದ್ದೇನೆ ಎಂದು ನೆನಪಿಸಿಕೊಳ್ಳುತ್ತಾರೆ.

ಕಲೆಗೆ ಇನ್ನೋರ್ವ ಶಿಕ್ಷಕರಾದ ಜೆ.ವಿ. ಕಮ್ಮಾರ, ಎಸ್.ಸಿ.ಪಾಟೀಲ. ಡಾ. ಎಸ್.ಸಿ. ಪಾಟೀಲರು ಆಗ ಕಲಾ ಶಿಕ್ಷಣವನ್ನು ಅರೆಕಾಲಿಕ ಶಿಕ್ಷಕರಾಗಿ ಬೋಧಿಸುತ್ತಿದ್ದರು. ನಾನು ದಿನಚರಿಯನ್ನು ಹಾಕಿಕೊಂಡಿದ್ದು, ಬೆಳಿಗ್ಗೆ ಏಳುಗಂಟೆಯಿಂದ ಹನ್ನೆರಡು ಗಂಟೆಯವರೆಗೂ ಶಾಲಾ ಸಮಯ, ಹನ್ನೆರಡು ಗಂಟೆಯಿಂದ ಸ್ವಪಾಕ ತಯಾರಿಸಿಕೊಂಡು ಸೇವನೆ, ನಂತರ ಚಿತ್ರ ಬರೆಯುವುದು, ಸಂಜೆ ಐದು ಗಂಟೆಯಿಂದ ಏಳು ಗಂಟೆಯವರೆಗೆ ಹೊರಾಂಗಣ ಅಥವಾ ಬಸ್ ನಿಲ್ದಾಣದಲ್ಲಿ ಕಲಿಕೆಯ ಪೂರ್ವಾಧಾರಿತ ರೇಖಾಚಿತ್ರ ಅಥವಾ ಸ್ಕೆಚ್ ಹಾಕುವುದು, ಇದಾದ ನಂತರ ಧಾರವಾಡದ ಸೆಂಟ್ರಲ್ ಲೈಬ್ರರಿಯಲ್ಲಿ ಹಳೆ ಪುಸ್ತಕ ಮಾರಾಟದ ಸಂದರ್ಭದಲ್ಲಿ ಪುಸ್ತಕ ಖರೀದಿ ಮಾಡುವುದು.

ರಾತ್ರಿ ಸಮಯ ಕನಿಷ್ಟ ಹನ್ನೆರಡು ಗಂಟೆಯವರೆಗೆ ಚಿತ್ರರಚನೆ ಮಾಡುತ್ತಿದ್ದೆ. ಆಗ ನನ್ನ ಸ್ನೇಹಿತರಾದ ಕೆ.ಕೆ. ಮಕಾಳಿ, ಮಕಲ್ದಾರ್, ಉಮೇಶ್ ಹಿರೇಮಠ ಇವರೊಂದಿಗೆ ಕಾಲ ಕಳೆಯುತ್ತಾ ಪ್ರತಿ ಶಾಲಾ ಚಟುವಟಿಕೆಗಳಲ್ಲಿ ನನ್ನದೊಂದು ಹಸರು ತುಂಬಿರುತ್ತಿತ್ತು. ಇದನ್ನು ನೋಡಿ ಕೆಲವರು ಕಹಿ ಭಾವನೆಯನ್ನು ನನ್ನ ಮೇಲೆ ಇಟ್ಟಿದ್ದಿರಬಹುದು. ಹಾಗಾಗಿ ನಾನು ನನ್ನ ತಂದೆಗೆ ಪತ್ರ ಬರೆಯುತ್ತಿದ್ದೆ. ಅವರೂ ಸಹ ನನಗೆ ಈ ರೀತಿಯ ನೀತಿ ಬೋಧನೆಗಳ ರೂಪಿತ ಪತ್ರ ಬರೆಯುತ್ತಿದ್ದರು.

ಒಂದು ಸೂಳಲಿ ಕೆಟ್ಟೆತೆಂದು ನೊಂದುಕೊಳ್ಳದೆ

ಮುಂದೆ ಮರಳಿ ಯತ್ನವ ಮಾಡು

ಸಂದೇಹವಿಲ್ಲವದು ಸಿದ್ಧಿಸುವುದು

ಕುಂದಿಲ್ಲ ಕೈಗೂಡದಪ್ಪದಿಂದ ನೊಂದುಕೊಳ್ಳದೆ

ಮುಂದೆ ಮರಳಿಯತ್ನವ ಮಾಡು

ಸಂದೇಹವಿಲ್ಲದಿದ್ದರೂ ಸಿದ್ಧಿಸುವುದು.

ಅಂದರೆ ಒಮ್ಮೆ ಕೆಟ್ಟೆತೆಂದು ಹಿಂಜರಿಯಬೇಡ ಮರಳಿ ಯತ್ನವ ಮಾಡು ಎಂದು ಹೇಳುವ ಈ ನೀತಿ ಬೋಧನೆಯನ್ನು ಇನ್ನು ಹಲವು ಪತ್ರಗಳಲ್ಲಿ ಮಹಾಕಾವ್ಯಗಳ ನೀತಿ ವಿಷಯಗಳನ್ನು ತಿಳಿಸುತ್ತಿದ್ದರು. ಇದನ್ನು ನಾನು ಅರ್ಥೈಸಿಕೊಂಡು ಹೆಚ್ಚಿನದಾಗಿ ಕಲೆಯಲ್ಲಿ ತೊಡಗುತ್ತಿದ್ದೆ ಎನ್ನುತ್ತಾರೆ.

ಈ ಪತ್ರಗಳನ್ನು ಬರೆಯುವುದರ ಜೊತೆಗೆ ನನ್ನನ್ನು ನೋಡಲು ಬರುತ್ತಿದ್ದರು. ಬಂದಾಗ ನನ್ನ ಕಷ್ಟದ ವಿಷಯವಾದ ವಿರೂಪಾಕ್ಷಪ್ಪ ನನ್ನನ್ನು ಬೆಲ್ಲ ಮಾರಲು ಹಚ್ಚುತ್ತಾರೆ. ನನಗೆ ಬೇರೆ ನಿವಾಸ ಮಾಡಿಕೊಡು ಎಂದು ತೋಡಿಕೊಂಡೆ. ನಂತರ ಒಂದೂವರೆ ವರ್ಷ, ಎರಡು ವರ್ಷದ ನಂತರ ಬೇರೆ ರೂಮ್ ಮಾಡಿಕೋ ಎಂದು ತಿಳಿಸಿದರು. ನಂತರ ಆಗಾಗ ಮೀನಿನ ಕಸುಬಿನಿಂದ ಹಣವನ್ನು ಪೋಸ್ಟ್‌ಮಾಡುತ್ತಿದ್ದರು. ಈ ಹಣವನ್ನು ಶಿಕ್ಷಣಕ್ಕೆ ಸದುಪಯೋಗಪಡಿಸಿಕೊಂಡು ಉಳಿದುದ್ದನ್ನು ನಿಭಾಯಿಸಲು ನನಗೆ ಸಹಾಯವಾಗಿ ಸಂಪಾದಕರಾದ ಶಿವಕುಮಾರ ಅವರ 'ಅಪರಂಜಿ' ಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದೆ. ನಂತರ ಕೆ.ಪಿ.ಸಿ.ಸಿ. ಅಧ್ಯಕ್ಷರಾಗಿದ್ದ ಆಸ್ಕರ್ ಪರ್ನಾಂಡೀಸ್ ಅವರಿಗೆ ಸಹಾಯ ಮಾಡುವಂತೆ ಹೊಸದುರ್ಗ ತಾಲ್ಲೂಕಿನ ಇಳಕಲ್ ವಿಜಯಕುಮಾರ್ ಅವರು ಶಿಫಾರಸ್ಸು ಮಾಡಿದ್ದರು. ಅದರಂತೆ ನನಗೆ ಆರ್ಥಿಕವಾಗಿ ಸಹಾಯವೂ ದೊರೆಯುತ್ತಿತ್ತು. ಇವುಗಳ ಜೊತೆಗೆ ಧಾರವಾಡದ ಅಂಗಡಿಗಳ, ಬೋರ್ಡ್‌ಗಳನ್ನು ರಾತ್ರಿಯಲ್ಲಿ ಬರೆದು ಬಂದಂತಹ ಹಣದಲ್ಲಿ ಡ್ರಾಯಿಂಗ್ ಪೇಪರ್ ಬ್ರಷ್ ಮತ್ತು ಬಣ್ಣಗಳನ್ನು ಕೊಂಡು ನಿಟ್ಟುಸಿರು ಬಿಟ್ಟಿರುವುದಿದೆ.

"ನನಗೆ ಕಲೆ ಎಂದರೆ ತುಂಬಾ ಇಷ್ಟ ಇದಕ್ಕೋಸ್ಕರವಾಗಿ ನಾನು ಹೆಚ್ಚಿನದಾಗಿ ಕೃಷಿ ಮಾಡಬೇಕು. ಎಂಬ ಹಂಬಲ ನನ್ನಲ್ಲಿ ತುಡಿಯುತ್ತಿತ್ತು. ಇದರಂತೆಯೇ ರಾತ್ರಿ ೧೨ ಗಂಟೆಯವರೆಗೆ ಅಭ್ಯಾಸದಲ್ಲಿ ತೊಡಗುತ್ತಿದ್ದೆ. ಆ ಸಮಯದಲ್ಲಿ ನಾಡಿನ ಖ್ಯಾತ ಬಿ.ವಿ. ವೈಕುಂಠರಾಜು ಅವರ ಅರಣಿ ಪತ್ರಿಕೆ, ರಾಜಪತ್ರಿಕೆಯ ಎರಡನೆ ರಕ್ಷಾಪುಟವಾಗಿ ಒಂದು ವರ್ಷ ಕಾಲ ಚಿತ್ರ ಬಳಕೆ ಮಾಡಿಕೊಂಡರು. ಹಾಗೆಯೇ ಅರೆಕಾಲಿಕ ಉಪನ್ಯಾಸಕರಾದ ಎಸ್.ಸಿ.ಪಾಟೀಲರ ಕೃತಿಯಾದ 'ಬಾರೋಕ್' ಕಲೆ ಎಂಬುದಕ್ಕೆ ಮುಖಪುಟ ರಚನೆ, ನಂತರ ಮಂಗಳ ವಾರಪತ್ರಿಕೆಗೆ ಕಾರ್ಟೂನ್, ಗೃಹಶೋಭ ಮಾಸಿಕ ಪತ್ರಿಕೆ ಇಲ್‌ಸ್ಟ್ರೈಟ್, ವರ್ಣಕಥಾಚಿತ್ರ, (ಸುಧಾ, ತರಂಗ, ತಷಾರ್) ಇವುಗಳೆಲ್ಲದರ ಜೊತೆಯಲ್ಲಿ ಹಾಲ್‌ಬಾವಿ ಸ್ಕೂಲ್ ಆರ್ಟ್‌ನ ಪ್ರಿನ್ಸಿಪಾಲರಾದ ಸುರೇಶ್ ಅವರು ನನ್ನಲ್ಲಿಯೇ ರಕ್ಷಾಪುಟ ವಿನ್ಯಾಸವನ್ನು ಮಾಡಿಸುತ್ತಿದ್ದರು. ಇಂತಹ ಸಮಯದಲ್ಲಿ ಬೆಂಗಳೂರಿನಿಂದ ಓರ್ವ ಕಲಾಸಕ್ತರು ನನ್ನನ್ನು ನೋಡಲು ಬಂದಾಗ ಮುಖಾಮುಖಿಯಾಗಿ ನನ್ನನ್ನೆ ಕೇಳಿದರು. ಆಗ ನಾನು ಅವರು ಎಲ್ಲೋ ಹೋಗಿದ್ದಾರೆ ಎಂದು ಹೇಳಿಕಳುಹಿಸಿದೆ. ಏಕೆಂದರೆ ಆ ಸಮಯದಲ್ಲಿ ಏನೂ ಅರಿಯದ ವರ್ಣಿಸಲಾರದ ಸಂತೋಷವೂ ಅಥವಾ ನಾನು ಅಷ್ಟರ ಮಟ್ಟದಲ್ಲಿದ್ದೇನೆಯೇ ಎಂಬ ಚಿತ್ತ ಬಾಸವೇನೋ ಗೊತ್ತಿಲ್ಲ' ಎನ್ನುತ್ತಾರೆ ಮಾರ್ಕಾಂಡೇಯ.

ಕಲಿಕಾ ಸಮಯದಲ್ಲಿ ಪ್ರೌಢಶಾಲಾ ಶಿಕ್ಷಕರಾದ ಎಂ.ಜೆ. ವಾಚೇದ್‌ಮಠ ಅವರೊಡನೆ ಸ್ಕೆಚ್ ಮಾಡಲು ಹೋಗುತ್ತಿದ್ದೆ. ಆಗಿನ ನನ್ನ ಸ್ನೇಹಿತರು ಉಮೇಶ್ ಹಿರೇಮಠ, ಕೆ.ಕೆ. ಮಕಾಳಿ, ಮಕಲ್ದಾರ್‌ರೊಡಗೂಡಿ ಅಧ್ಯಕ್ಷರಾಗಿದ್ದ ಸಿದ್ದನಗೌಡ ಪಾಟೀಲರಿಂದ ಬಸ್ ನಿಲ್ದಾಣದಲ್ಲಿ ಸ್ಕೆಚ್ ಮಾಡಲು ಒಪ್ಪಿಗೆಯನ್ನು ಪಡೆದದ್ದು, ಸ್ಕೆಚ್ ಮಾಡಲು ಅಥವಾ ಹೆಚ್ಚಿನದಾಗಿ ಅಭ್ಯಾಸ ಮಾಡಲು ಅನುಕೂಲವಾಯಿತು ಎನ್ನುತ್ತಾರೆ. ಈ ಹಂತದಲ್ಲಿ ಆಂಗ್ಲ ಭಾಷೆಯ ಮಾಗ್ಸಿನ್ ಆದ Spootlinkನಲ್ಲಿ ಬರುವ ಚಿತ್ರಗಳನ್ನು

ನಕಲು ಮಾಡಿ ಸಂತೋಷಿಸಿದ್ದ ನನ್ನ ನೆನಪು ನನ್ನಲ್ಲಿ ಬಿತ್ತಿದೆ. ಆಗಿನ ಸಮಯದಲ್ಲಿ ಸರ್ಕಾರಿ ಚಿತ್ರಕಲಾ ಶಾಲೆ, ಸ್ಕೂಲ್ ಆಫ್ ಆರ್ಟ್, ಭಾರತೀಯ ಕಲಾಕೇಂದ್ರಗಳು, ಕಲಾಕ್ಷೇತ್ರದಲ್ಲಿ ವಿದ್ಯಾರ್ಥಿಗಳನ್ನು (ನಮ್ಮನ್ನು) ಸ್ಪರ್ಧಾತ್ಮಕವಾಗಿ ಕಲಿಯುವಂತೆ ಮಾಡಿರುದವುದರ ಜೊತೆಗೆ ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಸ್ಕಾಲರ್‌ಶಿಪ್ ಬರುವಂತೆ ಕಲಿಕೆ, ನನಗೆ ಲಭಿಸಿತು. ಕಲಿಕಾ ಸಮಯದಲ್ಲಿ ಭಾವಚಿತ್ರ, ಪೂರ್ಣಚಿತ್ರಗಳನ್ನು ಸಹಪಾಠಿಗಳು ಕದ್ದು ನನಗೆ ಕಡಿಮೆ ಅಂಕಗಳು ಲಭಿಸುವಂತೆ ಮಾಡುತ್ತಿದ್ದರು. ಈ ಮೇಲೇಳಿದೆ ಚಟುವಟಿಕೆಗಳ ಜೊತೆಗೆ ಕವನ, ಕಾವ್ಯ ರಚನೆಯನ್ನು ಮಾಡುತ್ತಿದ್ದೆ.

ಉದಾಹರಣೆಗೆ ಧಾರವಾಡ ಈ ನೆಲದ ಮಣ್ಣ ಋಣ:

"ಧಾರವಾಡದ ಈ ನೆಲದ ಮಣ್ಣ ಋಣ
ನನ್ನೀ ದೇಹದ ಕಣ ಕಣ್ಣ ಹೋಬಣ
ಮರೆಯಲಿ ಹೇಗೆ ಮುಚ್ಚಿಟ್ಟು ಒಳಗಣ್ಣ

ಮಾತಿಗೆ ಹೊಸ ಅರ್ಥ ಚಿತ್ರವಾಗುತ್ತ ಬಿತ್ತರಿಸುತ್ತ ಗತ್ತ
ಭಾವ ಮಾಗುತ್ತ ಕುಹು ಎನ್ನಲನುವುಗೊಳಿಸಿದ ಕೀರ್ತಿ
ಪ್ರೀತಿ ಪ್ರಣಯದಂತಿದೆ ಇನ್ನೂ ನನ್ನ ಎದೆಯೊಳಗೆ ಸ್ಫೂರ್ತಿ
ಅದೇ ಬೆಳಕ ಛಾಯೆ ಪ್ರಜ್ವಲದ ದೇದೀಪ್ಯಮಾನ ಸಮ್ಮಾನ

ಚಿತ್ರಾಕ್ಷರದ ಭಾಷೆ ಸಂಸ್ಕೃತಿಯ ಸಲುಗಂಧದ ದೊಡ್ಡತನ
ಸೌಜನ್ಯಕ್ಕೆ ಸರಣೆನ್ನದಿರಲಾದೀತೆ ಪುನೀತತೆ ಮಾತೃತ್ವಕಾಣ
ಮುಟ್ಟಿದ್ದೆಲ್ಲ ಸ್ವರ್ಣ ವರ್ಣ ಮಾಧುರ್ಯ ಸ್ವರ ಸೌರಭ
ಪಸರುವ ನರುಗುಂಪಿನ ಹೂಬನ ಇಲ್ಲಿಯ ಜನರ ಮನ

ಗಂಡು ಭಾಷೆಯ ಪೌರುಷದ ಒಳಗೆ ಮೃದುತ್ವದ ಬಂದ
ಚೆಂದ ತುಂಬಿದ ಕಣ್ಣು ಮಿಂಚುವಲ್ಲಿ ಆತ್ಮಾಯಮಾನದ ಚೆಂದ
ಹಣಕ್ಕಿಂತ ಗುಣ ಸೌಂದರ್ಯದ ಖನಿ ಪ್ರತಿ ಹೃದಯ ಕಾಣ
ಲಲಿತ ಕಲೆಗಳಲಿ ಮಯೂರ, ನರ್ತನವಾಗಿ ಚೆಲ್ಲುವರಿದಿದೆ ನೋಡಣ್ಣ

ಕೌಶಲಿಕೆ ಗರಿಗೆದರಿ ಕಲಾಕುಸರಿ ಮಾಂತ್ರಿಕತೆಗೆ ಹೊಂಬಣ್ಣ
ಮಂತ್ರ ಮುಗ್ಧತೆಯಲಿ ಭಾವ ಮಿಡಿಸುವ ಮಹೋನ್ನತೆಗೆ ಜೀವಗಾನ
ಮರೆಯಧನುಭವಗಳ ರಸಗಟ್ಟಿ ಕೊಡುವ ಸಿರಿವಂತಿಕೆಯ ಸೋಪಾನ
ನೆನೆದಷ್ಟು ಖುಷಿಕೊಡುವ ಸಂಭ್ರಮದ ರೆಕ್ಕೆ ಸಿಕ್ಕಿಸುವ ನಾಡಿಗೆ ನನ್ನ ನಮನ.

ಈ ರೀತಿಯಾದ ಅಭ್ಯಾಸದಲ್ಲಿ ತೊಡಗಿಕೊಂಡ 'ಮನದ ವಿಕಾಸಕ್ಕೆ ಅತ್ಯುತ್ತಮ ಮಾನದಂಡ ಚಿತ್ರಕಲೆ' ಎಂದು ಕಂಡುಕೊಂಡೆ. ಧಾರವಾಡ ಕಲಾ ಕೇಂದ್ರದಲ್ಲಿ ಕಲಾಶಿಕ್ಷಣವನ್ನು ಪೂರೈಸಿ ಬೆಳಗಾವಿ

ಉಮಾ ಕಲಾಮಂದಿರದಲ್ಲಿ ಎ.ಎಂ. ಮುಗಿಸಿದೆ. ನಂತರ ಉನ್ನತ ಶಿಕ್ಷಣಕ್ಕಾಗಿ ಬರೋಡಕ್ಕೆ ಹಾರುವ ಆಸೆ ಇತ್ತು. ಆದರೆ ಅದು ಕೈಗೂಡಲಿಲ್ಲ ಎನ್ನುತ್ತಾರೆ.

ವಿದ್ಯಾರ್ಥಿ ಹಂತದಲ್ಲಿ ರಚಿಸಿದ ಕಲಾಕೃತಿಗಳು

ಪರಿಸರದ ಕುರಿತಾಗಿ ಮತ್ತು ಇದುರಿಂದುಂಟಾಗುವ ದುಷ್ಪರಿಣಾಮಗಳನ್ನು ಹೆಚ್ಚಾಗಿ ಚಿತ್ರಿಸುತ್ತಿದ್ದೆ. ಆಗ ಜಲವರ್ಣದಿಂದ ಹೆಚ್ಚಾಗಿ ಮಾಡುತ್ತಿದ್ದು ಆರ್ಥಿಕತೆಯ ಹಿನ್ನೆಲೆಯಿಂದ ತೈಲವರ್ಣವನ್ನು ಕಡಿಮೆ ಬಳಸುತ್ತಿದ್ದೆ. ಅತಿಯಾಗಿ ಚುಕ್ಕೆ ಚಿತ್ರ, ಇಂಕು ಮತ್ತು ಪೆನ್ನುಗಳಿಂದ ೪೦೦ ಕ್ಕಿಂತ ಹೆಚ್ಚು ಚಿತ್ರ ಬರೆದೆ. ಒಂದೊಂದು ಚಿತ್ರಬರೆಯಲು ೮–೧೦ ದಿವಸಬೇಕಿತ್ತು ಎನ್ನುತ್ತಾರೆ. ಅವುಗಳಲ್ಲಿ ಪ್ರಮುಖವು ಕುವೆಂಪು, ಬೇಂದ್ರೆ, ದೀಪಸುಂದರಿ, ಕುಣಿವ ಮುನ್ನ, ತಾಯಿ–ಮಗು, ವ್ಯಕ್ತಿಚಿತ್ರಗಳು, ನೈಸರ್ಗಿಕ ಚಿತ್ರಗಳು, ವಿನ್ಯಾಸಗಳು, ಇನ್ನೂ ಮುಂತಾದವು. ಆ ಸಮಯದಲ್ಲಿ ನನ್ನ ಕಲಾಕೃತಿಯನ್ನು ಲಲಿತಕಲಾ ಅಕಾಡೆಮಿಯು ರೂ. ೨೫೦೦ಕ್ಕೆ ಖರೀದಿಸಿತು. ಆಗ ಪಿ.ಆರ್.ತಿಪ್ಪಸ್ವಾಮಿಯವರು ಇದ್ದರು.

ನಾನು ಮೊದಲು ನೈಜ ಚಿತ್ರಗಳನ್ನು ರಚಿಸುತ್ತಿದ್ದೆ. ನಂತರ ನವ್ಯ ಕಲೆ ಸಾಂಪ್ರದಾಯಕದಲ್ಲಿ ವಾರ್ಲಿ, ಹೀಗೆ ಕಲಾತ್ಮಕ ದೃಷ್ಟಿಕೋನದಲ್ಲಿ ನಾನು ಕಲಾಕೃತಿಗಳನ್ನು ರಚನೆ ಮಾಡುತ್ತಿದ್ದೆ. ಶಾಲಾ ಪ್ರವಾಸ ಸಮಯದಲ್ಲಿ ಚಿತ್ರದುರ್ಗ, ಬೇಲೂರು, ಹಳೆಬೀಡು, ಐಹೊಳೆ, ಪಟ್ಟದಕಲ್ಲು, ಬಾದಾಮಿ ಮತ್ತು ನನ್ನೂರಾದ ಬಾಗೂರು, ನೀರಗುಂದದ ಪ್ರಕೃತಿಯ ಚಿತ್ರಗಳನ್ನು ರಚಿಸುತ್ತಿದ್ದೆ. ಆಗ 'ವಾರ್ಷಿಕ ಸ್ಮರಣ ಸಂಚಿಕೆ' ಪುಸ್ತಕದಲ್ಲಿ ನನ್ನ ಕಲಾಕೃತಿಗಳು ಮುದ್ರಣಗೊಳ್ಳುತ್ತಿದ್ದವು ಎಂದು ನೆನಪಿಸಿಕೊಳ್ಳುತ್ತಾರೆ.

ಕೆಲವು ಪ್ರದರ್ಶನಗಳು:

ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದ ಪಿ.ಆರ್. ತಿಪ್ಪೇಸ್ವಾಮಿಯವರ ಸಾರಥ್ಯದಲ್ಲಿ ಚಿತ್ರದುರ್ಗ ವಾಸವಿ ಸಂಘದವರಿಂದ ಪ್ರದರ್ಶನ, ಹೊಸದುರ್ಗ ಲಯನ್ಸ ಮತ್ತು ಪಾರ್ಲ್ಸ್‌ಮೀರ್ ಅಸೋಷಿಯನ್ಸ್ ಮತ್ತು ಲಯನ್ಸ್ ಸಂಸ್ಥೆ ಸಹಯೋಗದೊಂದಿಗೆ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಲಲಿತಕಲಾ ಅಕಾಡೆಮಿ ಕಾರ್ಯದಲ್ಲಿ ಪಾಲ್ಗೊಳ್ಳುವಿಕೆ, ತುಮರಿ, ಬೆಂಗಳೂರು, ಜಯಪ್ರಕಾಶನಗರ, ಜಾನಪದ ಜಗತ್ತು ಇನ್ನೂ ಮುಂತಾದ ಕಡೆ ಪ್ರದರ್ಶನಗೊಳಿಸಿದ್ದಾರೆ. ಹೀಗೆ ಓದುವ ಸಂದರ್ಭದಲ್ಲಿ ಅನೇಕ ಕಷ್ಟಗಳ ಮಧ್ಯೆ ಗೊತ್ತಿಲ್ಲದ ಪ್ರದೇಶಕ್ಕೆ ಹೋಗಿ ಅಲ್ಲಿನ ಮೂದಲಿಕೆಗಳನ್ನು ಸ್ವೀಕರಿಸಿ ಅವುಗಳನ್ನು ತನ್ನ ಸಾಧನೆಯ ಮೆಟ್ಟಿಲುಗಳಾಗಿ ಮಾಡಿಕೊಂಡು ಇಂದು ಕರ್ನಾಟಕ ಮಾತ್ರವಲ್ಲದೆ ದೇಶಾದ್ಯಂತ ಕುಂಚದ ಮುಖೇನವಾಗಿ ಗುರುತಿಸಿಕೊಂಡುದನ್ನು ಸ್ಮರಿಸುತ್ತಾರೆ.

ವೃತ್ತಿ ಬದುಕು

'ಐದನೇ ವರ್ಷದ ಕಲಾ ತರಗತಿಯನ್ನು ಅಧ್ಯಯನ ಮಾಡುತ್ತಿರುವಾಗ ದಸರಾ ರಜೆಗೆ ಊರಿಗೆ ಬಂದಿದ್ದ ಬಾಗೂರರಿಗೆ ಬೆಂಗಳೂರಿನ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಅಧೀಕ್ಷಕರಾಗಿದ್ದ

ನನ್ನೂರಿನವರಾದ ಚೆಲುವಯ್ಯಂಗಾರವರು ಬಂದಿದ್ದರು. ಆಗ ಮಾರ್ಕಾಂಡೇಯವರನ್ನು ನೀನು ಏನು ಮಾಡುತ್ತಿದ್ದಿಯಾ ಎಂದು ಪ್ರಶ್ನಿಸಿದಾಗ ಇವರು ಓದಿದ ವಿಷಯವನ್ನು ಅವರಲ್ಲಿ ಬಿನ್ನಹಿಸಿಕೊಂಡಾಗ ಈ ಚಿತ್ರಕಲಾ ಶಿಕ್ಷಕ ಹುದ್ದೆಗೆ ಅರ್ಜಿ ಆಹ್ವಾನಿಸಿದ್ದಾರೆ. ಅರ್ಜಿ ಹಾಕಿದ್ದೀಯಾ ಎಂದಾಗ ಇಲ್ಲವೆಂಬಂತೆ ತಲೆ ಅಲ್ಲಾಡಿಸಿದ ಬಾಗೂರರಿಗೆ ನೋಡು ನಾನು ನಾಳೆ ಬೆಂಗಳೂರಿಗೆ ಹೋಗುತ್ತಿದ್ದೇನೆ. ಒಂದು ಅರ್ಜಿ ಹಾಗೂ ಉಳಿದ ದಾಖಲೆಗಳನ್ನು ತಂದುಕೊಂಡು ಎಂದರು. ಅದರಂತೆ ಇವರು ಮರುದಿನ ಅವರ ಕೈಲಿ ನೀಡಿದರು. ಇದಾದ ನಂತರ ಆರು ತಿಂಗಳ ಬಳಿಕ ಸಂದರ್ಶನಕ್ಕೆ ಕರೆ ಬಂದಿತು. ಸಂದರ್ಶನಕ್ಕೆ ಹಾಜರಾಗಿ ಎಂಬ ಸೆಲೆಕ್ಷನ್ ಆದೆ. ಆಗ ನನಗೆ ಉನ್ನತ ಶಿಕ್ಷಣವನ್ನು ಬರೋಡದಲ್ಲಿ ಮಾಡಬೇಕು ಎಂಬ ಆಸೆಗೆ ನೀರೆರಚಿದಂತಾಗಿ ದುಗುಡಗೊಂಡೆ. ಆಗ ನನ್ನ ಮಾವ ಎ.ಬಿ. ಪರಮೇಶ್ವರಪ್ಪನವರು ನನಗೆ ಸಲಹೆಯನ್ನು ಇಟ್ಟು ಬಂದಿರುವ ಕೆಲಸಕ್ಕೆ ಹೋಗು, ಕೈಬಿಡಬೇಡ ಎಂದಾಗ ಅಕ್ಟೋಬರ್ ೨, ೧೯೮೮ರಲ್ಲಿ ದಾವಣಗೆರೆ ತಾಲೂಕು, ಅರಸಾಪುರು ಎಂಬ ಊರಲ್ಲಿ ಸರ್ಕಾರಿ ಪ್ರೌಢ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕನಾಗಿ ವೃತ್ತಿಬದುಕನ್ನು ಪ್ರಾರಂಭಿಸಿದೆ ಎನ್ನುತ್ತಾರೆ.'

ವೃತ್ತಿ ಪ್ರಾರಂಭದ ದಿನ ಹೋದಾಗ ಹೋಟೆಲ್‌ನಲ್ಲಿ ಉಳಿದುಕೊಂಡು ವಿಜ್ಞಾನ ಬೋಧನಾ ಶಿಕ್ಷಕರಾದ ಮಹೇಶಪ್ಪ ಎಂಬುವರೊಡನೆ ಗುಡಸಲಿನ ಹೋಟಲ್‌ನಲ್ಲಿ ಮಂಡಕ್ಕಿ, ಟೀ ಸೇವನೆ ಮಾಡಿ ಶಾಲೆಯ ಒಂದು ಕೋಣೆಯಲ್ಲಿ ಉಳಿದುಕೊಂಡೆನು. ಆ ಊರಿನ ಜನಪ್ರೀತಿ, ವಿಶ್ವಾಸ ಗಳಿಸಿಕೊಂಡೆ. ಶಾಲೆಯ ಲಂಬಾಣಿ ತಾಂಡಾ ಮಕ್ಕಳಿಗೆ ಯೋಗ ಶಿಕ್ಷಣ, ಶೈಕ್ಷಣಿವಾಗಿ ಚಂಚಲತೆಯಿಂದ ಕೂಡಿದ ಮಕ್ಕಳಲ್ಲಿ ಏಕಾಗ್ರತೆ ಮೂಡಿಸುವುದು ಮತ್ತು ಎಸ್.ಎಸ್.ಎಲ್.ಸಿ.ಯಲ್ಲಿ ದರ್ಜೆಯಲ್ಲಿ ಉತ್ತೀರ್ಣರಾಗುವಂತೆ ಆರ್ಥಿಕವಾಗಿ ಅಸಬಲತೆಯನ್ನೊಂದಿದ ಮಕ್ಕಳಿಗೆ ಸಹಾಯಕ್ಕಾಗಿ ತಪಿಸುತ್ತಿದೆ. ಈ ಎಲ್ಲ ಶಾಲಾ ಕಾರ್ಯನಿಯೋಗಿಗಳ ಜೊತೆಗೆ ಹೊರ ಪತ್ರಿಕೆಗಳಲ್ಲಿ ಸಂಪರ್ಕ ಇಟ್ಟುಕೊಂಡು, 'ಅಪರಂಜಿ' ಪತ್ರಿಕೆ, ರಾಜು ಪತ್ರಿಕೆ, ಚುಕ್ಕೆ-ಚಿತ್ರ, ವ್ಯಂಗ್ಯ ಚಿತ್ರಗಳನ್ನು ಕಳುಹಿಸುತ್ತಿದ್ದರು. ಇವುಗಳ ಜೊತೆಗೆ ಸಾಹಿತ್ಯದ ಕಾರ್ಯವೂ ನಡೆಯುತ್ತಿತ್ತು. ತಾರೆ ಜಮೀನ್‌ಫರ್, ಸಿನಿಮಾ ಬರುವುದಕ್ಕೂ ಮುಂಚೆ 'ಮಗು ಮತ್ತು ಚಲಿಸುವ ರೇಖೆ' ಎಂದು ಫ್ರಜಿಸಿದ್ದೆ ಎಂದು ತಿಳಿಸುತ್ತಾರೆ. ಶಾಲಾ ಸಮಯ ಮುಗಿದರೂ ಹಗಲು ರಾತ್ರಿ ಎನ್ನದೆ ಚಿತ್ರಕಲೆಯನ್ನು ಮಕ್ಕಳಿಗೆ ಕಲಿಸಿ ಚಿತ್ರಕಲೆಯ ಮುಖಾಂತರ ಮುಖ್ಯವಾಹಿನಿಗೆ ಕರೆತರುವುದೇ ನನ್ನ ಗುರಿಯಾಗಿಸಿಕೊಂಡು ಶ್ರಮಿಸಿದೆ. ಇಂತಹ ಸಮಯದಲ್ಲಿ ಬೆಂಗಳೂರಿನ ಡಿ.ಎಸ್.ಇ.ಆರ್.ಟಿ. ಯಿಂದ ಪಠ್ಯಪುಸ್ತಕಕ್ಕೆ ಚಿತ್ರರಚನೆ ಮಾಡಲು ಬಂತು. ಅದರಂತೆ ಒಂದು ದಿವಸ ಕೆಲಸ ನಿರ್ವಹಿಸಿದೆ.

ಎರಡನೆ ದಿವಸ ನಿರ್ದೇಶಕರಾದ ಯು.ಆರ್. ಅಚ್ಯುತರಾವ್ ಅವರು ನಿಮ್ಮನ್ನು ಇಲ್ಲಿಯೆ ತಾತ್ಕಾಲಿಕವಾಗಿ ನೇಮಿಸಿಕೊಳ್ಳಲಾಗುತ್ತದೆ ಎಂದಾಗ ಬಾಗೂರರು ಪೂರ್ಣಾವಧಿಯಲ್ಲಿ ನೇಮಿಸಿಕೊಳ್ಳುವುದಾದರೆ ಮಾತ್ರ ಕೆಲಸ ನಿರ್ವಹಿಸುವೆ ಇಲ್ಲವಾದರೆ ಬೇಡವೆಂದಾಗ, ಮೂರು ದಿನಗಳಲ್ಲಿ ವರ್ಗಾವಣೆಯ ಪತ್ರದ ಮುಖಾಂತರ ಪಠ್ಯಪುಸ್ತಕ ನಿರ್ದೇಶನಾಲಯಕ್ಕೆ ೧೯೯೨-೯೩ ಅಕ್ಟೋಬರ್ ತಿಂಗಳಿನಲ್ಲಿ ನಿಯೋಜಿಸಲಾಗುತ್ತದೆ. ಇಲ್ಲಿಂದ ನನಗೆಲ್ಲ ಚೆನ್ನವಾಯಿತು ಎನ್ನುತ್ತಾರೆ.

ಪಠ್ಯ ಪುಸ್ತಕಕ್ಕೆ ಚಿತ್ರ ರಚಿಸಲು ಬಾಗೂರರಿಗೆ ಮೊದಲ ಪತ್ರ ಬಂದಾಗ ದೂರದ ದಾವಣಗೆರೆಯಿಂದ ಬೆಂಗಳೂರಿಗೆ ಬಂದಿದ್ದರು. ಆಗ ನಿರ್ದೇಶಕರಾದ ಶ್ರೀ ಅಚ್ಯುತರಾವ್, ನಿರ್ದೇಶಕರಾದ ಶ್ರೀ ಡಿ. ಜಗನ್ನಾಥರಾವ್‌ರವರಿದ್ದರು. ಇವರು ಚಿತ್ರರಚನೆಗಾಗಿ ಬಿ.ಪಿ. ವಾಡಿಯಾ ರಸ್ತೆಯಲ್ಲಿದ್ದ ಗಿರಿಜಾಂಬ ಮುಕುಂದ ಬಾಲಕೀಯರ ಪ್ರೌಢಶಾಲೆಯ ಮೊದಲ ಮಹಡಿಯಲ್ಲಿದ್ದ ಪಠ್ಯಪುಸ್ತಕ ನಿರ್ದೇಶನಾಲಯಕ್ಕೆ ಬಂದಿದ್ದರು. ಬೆಂಗಳೂರು ಹೊಸದು. ಅಧಿಕಾರಿಗಳು ಹೊಸಬರು. ಹೊಸ ಪರಿಸರ, ಹೊಸ ವಾತಾವರಣದಲ್ಲಿ ಪಠ್ಯಪುಸ್ತಕಕ್ಕೆ ಚಿತ್ರ ರಚಿಸಬೇಕಾಗಿದ್ದು ಶ್ರೀ ಡೊ. ಜಗನ್ನಾಥರಾವ್ ಎಂದಿದ್ದರು. ರಾಜಕೀಯ ಮಾಡಬೇಡ, ನಮ್ಮ ಪಠ್ಯಪುಸ್ತಕಕ್ಕೆ ಒಳ್ಳೆಯ ಚಿತ್ರಗಳನ್ನು ರಚಿಸಿಕೊಡಿ ಎಂದಿದ್ದರು. ಈ ಹಿಂದೆ ನಾ. ಕಾಳೇಶ್ವರರಾವ್ ಅವರ ಮಾರ್ಗದರ್ಶನದಡಿ ಡಿ.ಎಸ್.ಇ.ಆರ್.ಟಿ. ನಿರ್ದೇಶಕರಾದ ಶ್ರೀ ಯು.ಆರ್. ಅಚ್ಯುತರಾವ್ ಅವರಿಗೆ ಒಂದು ಚಿತ್ರಮಯವಾದ ಪತ್ರ ಬರೆದಿದ್ದರಿಂದ ಆ ಪತ್ರ ನೋಡಿದ ಮೂರು ದಿನದಲ್ಲೇ ಬಾಗೂರರಿಗೆ ಪಠ್ಯಪುಸ್ತಕಗಳಲಿ ಚಿತ್ರವಿನ್ಯಾಸ ಮಾಡಲು ಆದೇಶ ಬಂದಿತ್ತು. ಹಾಗಾಗಿ ಬೆಂಗಳೂರಿನ ಪಠ್ಯಪುಸ್ತಕ ನಿರ್ದೇಶನಾಲಯಕ್ಕೆ ಬಂದಿದ್ದರು.

ಹಿಂದೆಲ್ಲ ಪಠ್ಯಪುಸ್ತಕಕ್ಕೆ ಐದಾರು ಜನರನ್ನು ಕಲಾವಿದರನ್ನು ಕಲಾಶಿಕ್ಷಕರನ್ನು ಕರೆಯಿಸಿ ಚಿತ್ರ ರಚಿಸುತ್ತಿದ್ದ ಕಾಲವದು. ಆದರೆ ನಿರ್ದೇಶಕರು ಬಾಗೂರರನ್ನು ಕರೆಯಿಸಿದ ಮೇಲೆ ಚಿತ್ರಗಳನ್ನು ರಚಿಸಿದ್ದು, ಅವರಿಗೆ ಒಪ್ಪಿಗೆಯಾಯಿತು. ಒಂದೇ ತಿಂಗಳಲ್ಲಿ ೧೫೦ ಪಠ್ಯಪುಸ್ತಕಗಳಿಗೆ ಚಿತ್ರ ವಿನ್ಯಾಸವನ್ನು ಮಾಡಿತೋರಿದರು. ಇಲಾಖೆಯ ನಿರ್ದೇಶಕರು, ಉಪನಿರ್ದೇಶಕರು ಮೆಚ್ಚಿಕೊಂಡರು. ಪತ್ರಿಕೆಗಳು ಪಠ್ಯಪುಸ್ತಕ ಪವಾಡವಾದುದು ಹೇಗೆ ಎಂದು ಬರೆದು ಹೊಗಳಿದವು. ಅಂತಹ ದಿನಗಳನ್ನು ನೆನೆದರೆ ಇಂದು ಅಚ್ಚರಿಯಾಗುತ್ತದೆ. ಏಕೆಂದರೆ ಆ ದಿನಗಳಲ್ಲಿ ಗಣಕಯಂತ್ರಗಳು ಇರಲೇ ಇಲ್ಲ. ಬರೆದ ಚಿತ್ರಗಳನ್ನು ಪುಟಗಳಿಗೆ ತಕ್ಕಂತೆ ಕತ್ತರಿಸಿ ಅಂಟಿಸಿ ಮುದ್ರಣಕ್ಕೆ ಅಣಿಮಾಡಬೇಕಿತ್ತು. ದಿನದ ೨೪ ಗಂಟೆಗಳು ಸಾಕಾಗುತ್ತಿರಲಿಲ್ಲ. ಇಂದು ನೆನೆದಾಗ ಅಷ್ಟೆಲ್ಲ ಕೆಲಸದ ಹೊಣೆ ನಿಭಾಯಿಸಿದ್ದರು ಎಂದು ಅಚ್ಚರಿಯಾಗುತ್ತದೆ.

ಉತ್ಸಾಹದಿಂದ ತೇಲಾಡುತ್ತಿದ್ದ ದಿನಗಳು ಅವು ಸಿಕ್ಕದ್ದನ್ನೆಲ್ಲ ಬರೆಯಬೇಕು. ಹೆಚ್ಚು ಹೆಚ್ಚು ಕಲಿಯಬೇಕು ಎಂಬ ಹಂಬಲ ತುಡಿತವು ಬಾಗೂರರನ್ನು ಹೆಚ್ಚು ಹೆಚ್ಚು ಚಿತ್ರರಚಿಸುವಂತೆ ಪ್ರೇರೇಪಿಸಿದ್ದವು. ಅಂತಹ ಮನಸ್ಥಿತಿಯನ್ನು ಯಾರು ಪಡೆಯುತ್ತಾರೊ ಅವರು ಚಿತ್ರಕಲಾವಿದರಾಗಿ ರೂಪುಗೊಳ್ಳುತ್ತಾರೆ. ಕಲಾವಲಯದಲ್ಲಿ ಚಿರಂತನವಾಗಿ ಕಲೆಯ ಉಸಿರಾಗಿ ಬೆರೆತು ಹೋಗುತ್ತಾರೆ ಎನ್ನುವುದಕ್ಕೆ ಇಂದಿನ ಬಾಗೂರರು ಉದಾಹರಣೆಯಾಗುತ್ತಾರೆ.

ಅಂದು ಅಚ್ಯುತರಾವ್‌ರವರು ಬಾಗೂರರನ್ನು ಪಠ್ಯಪುಸ್ತಕ ನಿರ್ದೇಶನಾಲಯಕ್ಕೆ ಕರೆಯಿಸಿಕೊಳ್ಳದೇ ಹೋಗಿದ್ದರೆ ಪ್ರತಿಭೆಯೊಂದನ್ನು ಎಲ್ಲೋ ಕಮರಿಹೋಗುತ್ತಿತ್ತೇನೋ ತಿಳಿಯದು. ಅದಕ್ಕೆ ಪ್ರತಿಭೆಯನ್ನು ಪ್ರೋತ್ಸಾಹಿಸಬೇಕು. ಪ್ರತಿಭೆಗಳನ್ನು ಗುರುತಿಸೋದು ಅವರಿಗೆ ಸಹಾಯ ಹಸ್ತವಿತ್ತು ಮೇಲೆತ್ತುವುದು,

ಹಿರಿಯ ಮನದವರ ಗುಣವಾಗುತ್ತದೆ. ಕರ್ನಾಟಕದಲ್ಲಿ ಚಿತ್ರಕಲಾ ಶಿಕ್ಷಕರಾಗಿ ಇರುವವರು ಎಷ್ಟೋ ಜನವಿರುವಾಗ ಬಾಗೂರರು ವಿಶೇಷವಾಗಿ ಗುರುತಿಸಲ್ಪಡುವುದು. ಅವರ ಪ್ರಜ್ಞೆಗೆ ಹಾಗೂ ಸಾಧನೆಯನ್ನು ಪರಿಗಣಿಸಿ ಎಂಬುದು ಮುಖ್ಯವಾಗುತ್ತದೆ. ಅದಾವುದೋ ಅತೀಂದ್ರಿಯ ಶಕ್ತಿಯು ಎಲ್ಲೋ ಇದ್ದವರನ್ನು ಮತ್ತೆಲ್ಲೋ ಇರಿಸಿ ನಾಡೇ ಗುರುತಿಸುವಂತೆ ಮಾಡುತ್ತದೆ. ಇಲ್ಲವೆಂದರೆ ಪಾತಾಳಕ್ಕೆ ತಳ್ಳಿ ನೋವುಗಳ ಸರಮಾಲೆಯನ್ನು ತೊಡಿಸಿ, ಕಾಡಿಸಿ ಅಳಿಸುತ್ತದೆ. ಎಲ್ಲಾ ಸುಕೃತವಿದ್ದರೆ ಮಾತ್ರ ಅಲ್ಲವೇ ಅಚ್ಯುತರಾವ್‌ರಂತಹ ಮಹನೀಯರು ಸಾವಿರ ಸಾವಿರವಾಗಲಿ ಎಂದು ಹಾರೈಸುತ್ತಾರೆ.

ಹೀಗೆ ಮಾರ್ಕಾಂಡೇಯ ಅವರು ಡಿ.ಎಸ್.ಇ.ಆರ್.ಟಿ. ಇಲಾಖೆಯಲ್ಲಿ ಚಿತ್ರರಚನಾಕಾರರಾಗಿ ಸೇವೆ ಸಲ್ಲಿಸುವುದರ ಜೊತೆಗೆ ಸದಾ ಕಲೆ, ಸಾಹಿತ್ಯ, ಸಂಗೀತ ಎಂಬ ಮಧುರ ಪ್ರಕಾರಗಳಲ್ಲಿ ನನ್ನ ಅನುಭವ, ಅನಿಸಿಕೆ, ಕಲ್ಪನೆಗೆ ಮೂರ್ತ ರೂಪ ಕೊಡುವ ಪ್ರಯತ್ನವನ್ನು ಸಮಾಜಕ್ಕೆ ಹಿತವೆನಿಸುವಂತೆ ಸಮಾಜಮುಖಿಯಾಗಿ ನಿರಂತರವಾಗಿ ಚಿತ್ರ ಕಾವ್ಯದ ಮೂಲಕ ಪ್ರಕಟಿಸುತ್ತಾ ಬರುವುದನ್ನು ಪ್ರಸ್ತುತವಾಗಿಯೂ ಕಾಣಬಹುದು.

ಟಿಪ್ಪಣಿಗಳು:

೧. ಎಂ.ಎಸ್. ಪುಟ್ಟಣ್ಣ : ಚಿತ್ರದುರ್ಗ ಪಾಳೆಗಾರರು, ೧೯೯೭, ಪುಟ ೧೧.

೨. ಭಗವಾನ್ : ಬಹುಮುಖಿ ಬಾಗೂರು ಮಾರ್ಕಾಂಡೇಯ, ೨೦೧೩, ಪುಟ ೧೧.

೩. ಭಗವಾನ್ : ಬಹುಮುಖಿ ಬಾಗೂರು ಮಾರ್ಕಾಂಡೇಯ, ೨೦೧೩, ಪುಟ ೧೧.

೪. ಚಿನ್ನಗೋವಿಂದಪ್ಪ (ಕಲಾವಿದರ ತಂದೆ) : ಸಂದರ್ಶನ, ದಿನಾಂಕ: ೦೧.೦೩.೨೦೧೪

೫. ಚಿನ್ನಗೋವಿಂದಪ್ಪ (ಕಲಾವಿದರ ತಂದೆ) : ಸಂದರ್ಶನ

೬. ಭಗವಾನ್ : ಬಹುಮುಖಿ ಬಾಗೂರು ಮಾರ್ಕಾಂಡೇಯ, ೨೦೧೩, ಪುಟ ೧೪.

೭. ಚಿನ್ನಗೋವಿಂದಪ್ಪ (ಕಲಾವಿದರ ತಂದೆ) : ಸಂದರ್ಶನ

೮. ಬಾಗೂರು ಮಾರ್ಕಾಂಡೇಯ : ಸಂದರ್ಶನ.

೯. ಭಗವಾನ್ : ಬಹುಮುಖಿ ಬಾಗೂರು ಮಾರ್ಕಾಂಡೇಯ, ೨೦೧೩, ಪುಟ ೧೭.

೧೦. ಚಿನ್ನಗೋವಿಂದಪ್ಪ (ಕಲಾವಿದರ ತಂದೆ) : ಸಂದರ್ಶನ

೧೧. ಭಗವಾನ್ : ಬಹುಮುಖಿ ಬಾಗೂರು ಮಾರ್ಕಾಂಡೇಯ, ೨೦೧೩, ಪುಟ ೧೮.

೧೨. ಬಾಗೂರು ಮಾರ್ಕಾಂಡೇಯ : ಸಂದರ್ಶನ.

ಅಧ್ಯಾಯ ಮೂರು

ಬಾಗೂರು ಮಾರ್ಕಾಂಡೇಯ ಅವರ ಕಲಾಕೃತಿಗಳು

ಅಧ್ಯಾಯ ಮೂರು

ಬಾಗುರು ಮಾರ್ಕಾಂಡೇಯ ಅವರ ಕಲಾಕೃತಿಗಳು

ಕಲಾವಿದ ಬಾಗೂರು ಮಾರ್ಕಾಂಡೇಯ ಅವರು ರಚಿಸಿರುವ ಹಲವು ಕಲಾಕೃತಿಗಳಲ್ಲಿ ವಿಶೇಷವಾಗಿ ಆಯ್ದ ಕೆಲವೊಂದು ಕಲಾಕೃತಿಗಳನ್ನು ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ. ಇನ್ನೂ ಅವರ ಸಮಗ್ರ ಕಲಾಕೃತಿಗಳನ್ನು ಸಂಗ್ರಹಿಸಿ ಅಧ್ಯಯನ ಮಾಡುವ ಅವಶ್ಯಕತೆ ಇದೆ. ಪರಂಪರೆ ಇಲ್ಲದೆ ಯಾವ ಕಲೆ, ಶಿಲ್ಪ, ಸಾಹಿತ್ಯ ಬೆಳೆಯುವುದಿಲ್ಲ. ಪರಂಪರೆ ಎನ್ನುವುದು ಕಟ್ಟಡಕ್ಕಿರುವ ಭದ್ರ ಬುನಾದಿಯಂತೆ ಎಂಬುದು ಬಾಗೂರ ಅವರ ಅನಿಸಿಕೆಯಾರುತ್ತದೆ. ಚಿತ್ರ ಕಲಾವಿದರಿಗೆ ಕಲಾಕೃತಿಗಳೆ ಕಿರೀಟವಿದ್ದಂತೆ. ಇವರು ನೀಡಿದ ಅಪರೂಪದ ದೇಣಿಗೆ ಸೂಕ್ಷ್ಮವಾದ ವಿಚಾರಿ ಸಂಯೋಜಿಸಿದ ಭಾವಚಿತ್ರಗಳು, ಐತಿಹ್ಯಚಿತ್ರಗಳು, ಚುಕ್ಕೆ ಚಿತ್ರಗಳು, ಮುಖಪುಟ ವಿನ್ಯಾಸ, ಭೂದೃಶ್ಯ, ಚಿತ್ರಣಗಳು ಸೌಂದರ್ಯಯುತವಾದ ಸಂಯೋಜನಾ ಚಿತ್ರಣಗಳನ್ನು ತಮ್ಮ ವೃತ್ತಿಯ ಜೊತೆಗಿನ ಕಲಾ ಜೀವನದಲ್ಲಿ ರಚಿಸಿದ್ದಾರೆ. ಹೀಗೆ ಅವರು ರೂಪಿಸಿದ ಚಿತ್ರಗಳಲ್ಲಿ ವೈವಿಧ್ಯತೆಯ ಅಪಾರ ಜ್ಞಾನವನ್ನು ಕಲ್ಪಕತೆಯ ಚಿಂತನೆಯನ್ನು ಕಾಣುವುದರ ಜೊತೆಗೆ ಅವರಲ್ಲಿ ಹುದುಗಿದ್ದ ಬಹು ವ್ಯಾಪಕವಾದ ಕಲ್ಪನೆಯನ್ನು ನಾವು ಗುರುತಿಸಬಹುದಾಗಿದೆ. ಸಾಮಾನ್ಯವಾಗಿ ಒಬ್ಬೊಬ್ಬ ಕಲಾವಿದರು ಒಂದೊಂದು ಅಭಿವ್ಯಕ್ತಿಯಲ್ಲಿ ನೈಪುಣ್ಯತೆಯನ್ನು ಸಂಪಾದಿಸುವುದು ಸಹಜ. ಆದರೆ ಇವರು ಕಲೆ ಮತ್ತು ಕವಿತ್ವವನ್ನು ತಮ್ಮ ವೈಶಿಷ್ಟ್ಯದ ಶೈಲಿಯಾಗಿ ರೂಪಿಸಿಕೊಂಡು ಬಂದಿರುತ್ತಾರೆ.

ಬಾಗೂರ ಅವರು ರಚಿಸಿರುವ ಕಲಾಕೃತಿಗಳನ್ನು ರೇಖಾಚಿತ್ರ, ಚುಕ್ಕೆ ಚಿತ್ರ, ಭಾವಚಿತ್ರ, ನಿಸರ್ಗಚಿತ್ರ, ಸಂಯೋಜನಾ ಚಿತ್ರ, ರಕ್ಷಾ ಪುಟಗಳು, ಹೀಗೆ ಎಲ್ಲಾ ಭಾಗಗಳಲ್ಲಿ ಕಲಾಕೃತಿಗಳನ್ನು ರಚಿಸಿರುವುದು ಈ ಅಧ್ಯಯನದ ಶಿಸ್ತಿನಲ್ಲಿ ಕಂಡುಬರುತ್ತದೆ.

ರೇಖಾಚಿತ್ರಗಳು:

ರೇಖಾಚಿತ್ರಗಳನ್ನು ವರ್ಣಚಿತ್ರಗಳ ತಾಯಿ ಎಂದು ಭಾವಿಸಲಾಗಿದೆ. ನಮ್ಮ ಭಾರತೀಯ

ಚಿತ್ರಕಲೆ ಮೂಲತಃ ರೇಖಾ ಪ್ರಧಾನವಾದ ಶೈಲಿಯನ್ನು ಹೊಂದಿದೆ. 'ಕಲಾವಿದನೊಬ್ಬನನ್ನು ನಿಜಕ್ಕೂ ಬಯಲು ಮಾಡುವುದು ರೇಖಾಚಿತ್ರಗಳೇ. ಅದು ಅವನ ಪರಿವಿಡಿ ಇದ್ದಂತೆ ಎನ್ನಬಹುದು. ಕಲಾವಿದನನ್ನು ತಿಳಿದುಕೊಳ್ಳಲು ಅವನ ರೇಖಾಚಿತ್ರಗಳನ್ನು ವಿಶ್ಲೇಷಿಸುವುದು ಅತಿ ಮುಖ್ಯ ಅಂತೆಯೇ ಭಾರತೀಯ ಕಲೆಗಳಲ್ಲಿ ರೇಖೆಗಳ ಸಂವಹನಕ್ಕೆ ತಳಹದಿ'.[೧] ಭಾರತವೂ ಸೇರಿದಂತೆ ಪೌರಾತ್ಯ ಚಿತ್ರಗಳೆಲ್ಲ ರೇಖಾ ಪ್ರಧಾನವಾದುದೇ. ಕಲಾ ಶಾಲೆಗಳಲ್ಲಿ ಪ್ರಥಮವಾಗಿ ಸೂಚಿಸುವುದೇ ಜನನಿಬಿಡಿ ಪ್ರದೇಶಗಳಲ್ಲಿ ಜನರ, ಪ್ರಾಣಿಗಳ, ವಸ್ತು ಗಳ ಕ್ಷಿಪ್ರಗತಿಯ ಕರಡು ಚಿತ್ರ ರಚಿಸಬೇಕೇಂಬುದು. ಆದರೆ ಇದರ ಪ್ರಯೋಜನವನ್ನು ಇಂದಿಗೆ ವಿದ್ಯಾರ್ಥಿಯಾದವನು ಯಾವ ರೀತಿ ಬಳಸಿಕೊಳ್ಳುತ್ತಾರೆಂಬುದು ಬೇರೆ ವಿಷಯ. ಆದರೆ ಬಾಗೂರರು ಎ.ಎಸ್.ಐ.ಎಫ್‌ನ ಅಧ್ಯಕ್ಷರಾದ ಸಿದ್ಧನಗೌಡ ಪಾಟೀಲರಿಂದ (ಪರವಾನಗಿ) ಪರ್ಮಿಷನ್ ಪಡೆದು ಎಂ.ಜೆ. ವಾಚೇದ್‌ಮಠ್ ಅವರ ಜೊತೆ ಕರಡು ಚಿತ್ರ ರಚಿಸುತ್ತಿದೆ'[೨] ಎನ್ನುತ್ತಾರೆ.

'ರೇಖೆಗೆ ಸಂಗೀತದಂತೆ ಲಯಬದ್ಧತೆ ಇದೆ. ನೃತ್ಯದಂತೆ ಛಂಧೋಬದ್ಧ ಚಲನೆ ಇದೆ. ಕಾವ್ಯದಂತೆ ಅಂತರ್‌ಪ್ರೇರಣೆ ಇದೆ. ರೇಖೆಗಳ ಸಮ್ಮಿಳನದಲ್ಲಿ ಸಾಹಿತ್ಯ ಸಾಂಗತ್ಯವಿದೆ.'[೩] ಇಂತಹ ರೇಖೆಗಳ ಸಮ್ಮಿಳನದಿಂದ ಸ್ಪಷ್ಟವಾದ ಆಕೃತಿ ನಿಖರವೆನಿಸುವ ವಿವರಗಳು ಕಲಾವಿದನ ಆಂತರಿಕ ಕಲಾ ಪ್ರಜ್ಞೆಯನ್ನು ಸಹಜವಾಗಿ ಗುರುತಿಸಬಹುದಾದಂತಹ ರೇಖಾವಿನ್ಯಾಸ ಬಾಗೂರರಗಿದೆ. ಸೌಂದರ್ಯ ಪ್ರಜ್ಞೆಯ ಹಿನ್ನೆಲೆಯಲ್ಲಿ ನಿಸರ್ಗ, ವ್ಯಕ್ತಿ, ಸಮಾಜ ಇವುಗಳ ಸಂಬಂಧಗಳ ಸೂಕ್ಷ್ಮತೆಯನ್ನು ಅವರ ಚಿತ್ರಗಳ ಭಾವ ಸಂಚಾರದ ಮೂಲಕ ಗುರುತಿಸುತ್ತೇವೆ.

ಬಾಗೂರರ ಚಿತ್ರಗಳಲ್ಲಿ ರೇಖೆಗಳು ದೇಹ ರಚನೆಯ ನಿಯಮಗಳಿಗೆ ಯಥಾಸ್ಥಿತಿ ನಿರೂಪಣೆಯನ್ನು ಹೊಂದಿದ್ದು ಇನ್ನೂ ಕೆಲವು ಅಂಕನೆ ನಿಯಮಕ್ಕೆ ಬದ್ಧವಾಗಿರುವುದನ್ನು ಗುರುತಿಸಬಹುದು. ಇನ್ನೂ ಕೆಲವು ರೇಖೆಗಳಿಂದ ರಚಿತವಾದ ರೇಖಾಚಿತ್ರಗಳು ಸೃಜನಶೀಲತೆಯನ್ನು ವ್ಯಕ್ತಪಡಿಸುತ್ತವೆ.

ಬಾಗೂರು ಮಾರ್ಕಾಂಡೇಯ ಅವರು ಸಮಕಾಲೀನ ಕಲೆಯಲ್ಲಿ ರೇಖಾ ಚಿತ್ರಗಳನ್ನು ಅಭ್ಯಾಸಕ್ಕೋಸ್ಕರ ಹಾಗೂ ಸಂಯೋಜನಾ ಚಿತ್ರದ ಪೂರ್ವ ಸಿದ್ಧತೆಗೋಸ್ಕರವಾಗಿಯೋ, ರಚಿಸುವಂಥವುಗಳಾಗಿದ್ದು, ಹಲವಾರು ವಸ್ತುಗಳನ್ನು ಮನುಷ್ಯರ ವಿವಿಧ ಭಾವ ಭಂಗಿಗಳನ್ನು ವಿವಿಧ ಆಕೃತಿಗಳ ನೆರಳು ಬೆಳಕನ್ನು ರೇಖಾ ಚಿತ್ರದಿಂದ ಚಿತ್ರಿಸಿಕೊಂಡು ಅವುಗಳನ್ನು ತಮ್ಮ ವಿಷಯಕ್ಕೆ ತಕ್ಕಂತೆ ಆಯ್ದ ಸಂಯೋಜನೆಗೆ ಅನುಗುಣವಾಗಿ ಹೊಂದಿಸಿ ಎಣಿಕೆಗೆ ನಿಲುಕದಷ್ಟು ರೇಖಾಚಿತ್ರಗಳನ್ನು ಚಿತ್ರಿಸಿರುವುದನ್ನು ಪ್ರಸ್ತುತವಾಗಿ ನಾವು ಕಾಣಿಸಬಹುದು. ಹೇಗೆಂದರೆ ಇವರು ರೇಖಾಚಿತ್ರಗಳಲ್ಲಿ ಕೆ.ಕೆ. ಹೆಬ್ಬಾರ್ ಮತ್ತು ಎಂ.ಜೆ.ವಾಚೆದ್‌ಮಠ್ ಅವರ ಪ್ರಭಾವ ನನ್ನ ಮೇಲೆ ಇದೆ'[೪] ಎಂದು ಹೇಳುತ್ತಾರೆ. ಆದ್ದರಿಂದ ಇವರಿಗೆ ಸರಿಸಾಟಿಯಾಗಿ ನಿಲ್ಲುವಂತಹ ರೇಖಾಚಿತ್ರಗಳನ್ನು ರಚಿಸಬೇಕು ಎಂಬ ಹಂಬಲ ಇವರಲ್ಲೇ ಅಲ್ಲ ಬೇರೊಬ್ಬರು ಪ್ರಭಾವಿತರಾದರೂ ಮಾಡುವ

ಕಾರ್ಯ ಇದೆ. ಆದ್ದರಿಂದ ಇವರು ಅವರಂತೆಯೇ ರೇಖಾಚಿತ್ರಗಳನ್ನು ರಚಿಸುವುದರ ಜೊತೆಗೆ ತನ್ನದೇ ರೇಖಾಭಿವ್ಯಕ್ತಿಯನ್ನು ಉಳಿಸಿಕೊಂಡು ಬರುತ್ತಿದ್ದಾರೆ ಎನ್ನಬಹುದು.

'ರೇಖೆ ಸಮತಲದ ಮೇಲೆ ಮೂರು ಆಯಾಮಗಳ ಸೂಚನೆ ಇಲ್ಲದೆಯೂ ರೂಪ ತಳೆಯಬಹುದು. ಲಯಬದ್ಧವಾಗಿ ಹರಿಯುವ ಮೂಲಕ ಅಥವಾ ಅಂಕುಡೊಂಕಾಗಿ, ವಕ್ರವಾಗಿ, ತಡೆ, ತಡೆದು ನಿಂತುಹೋಗಬಹುದು. ದಪ್ಪ, ತೆಳು, ನವಿರಾಗುಬಹುದು. ಅಥವಾ ಬೆಳಕಿನ ನೆರಳಿನ ಸೂಚನೆಯನ್ನು ನೀಡುವಂತೆ ಕಾಣಿಸಿ ಮರೆಯಾಗಬಹುದು. ಬಣ್ಣಗಳ ತೀಕ್ಷಣತೆಗನುಗುಣವಾಗಿ ವರ್ತಿಸಬಹುದು. ಹೀಗಾಗಿ ರೇಖೆಗೆ ಅದರದೇ ಚೈತನ್ಯವಿದೆ. ವೈವಿಧ್ಯಮಯ ವರ್ತನೆಯಿದೆ. ಸ್ವಂತ್ರ ವ್ಯಕ್ತಿತ್ವವಿದೆ.'[೫]

ಇಂತಹ ಸ್ವತಂತ್ರ ವ್ಯಕ್ತಿತ್ವ ಹೊಂದಿದ ರೇಖಾಚಿತ್ರಗಳನ್ನು ಬಾಗೂರರು ತಮ್ಮ ಪ್ರತಿಭೆಗೆ ತಕ್ಕಂತೆ ರೂಪ ಕೊಟ್ಟಿದ್ದಾರೆ. ಇವರು ರಚಿಸಿದ ರೇಖಾಚಿತ್ರಗಳಲ್ಲಿ ಅಧ್ಯಯನಕ್ಕಾಗಿ ಕೆಲವು ಆಯ್ಕೆಯಾದವು. 'ರಾಧಾ ಮಾಧವರ ಒಲುಮಿಯೆ ಚಿತ್ತಾರ' ಎಂಬ ಕವನಾಧಾರಿತ ವಿಷಯಗಳನ್ನೊಳಗೊಂಡ ರೇಖಾ ಚಿತ್ರಗಳನ್ನು ಇಲ್ಲಿ ನೋಡುತ್ತೇವೆ.

ರಾಧಾ ಮಾಧವರ ಸರಣಿ ಚಿತ್ರಗಳು:

ಈ ಅಧ್ಯಯನದಲ್ಲಿ ಕೆಲವು ರೇಖಾ ಕಲಾಕೃತಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದ್ದು, ಇವುಗಳ ಒಟ್ಟು ವಿವರಣೆಯನ್ನು ನೀಡಲಾಗಿದೆ. 'ರಾಧಾ ಮಾಧವರ ಪ್ರೇಮ' ೨ x ೨ ಅಡಿಯ ಕ್ಯಾನ್ವಾಸ್‌ನ ಮೇಲೆ ಅರಳಿರುವ ರೇಖಾಚಿತ್ರಗಳಿಗೆ ಬಣ್ಣವಿಲ್ಲ. ಆದರೆ ನೋಡುಗನ ಮನದಲ್ಲಿ ರಂಗನ್ನು ಮೂಡಿಸಬಲ್ಲವು. ಭಾವನೆಗಳನ್ನು ಸೃಷ್ಟಿಸಬಲ್ಲವು. ವಿರಹವೇಧನೆ, ಕೃಷ್ಣ ಸಮೀಪ ಬಂದು ಕೊಳಲು ನುಡಿಸುವಾಗ ಆಕೆಯ ಆನಂದದ ಪರಿಶುದ್ಧವಾದ ಸ್ಥಿತಿಯಲ್ಲಿ ವ್ಯಕ್ತಪಡಿಸಿರುವುದನ್ನು ಇಲ್ಲಿ ಕಾಣುತ್ತೇವೆ. ಆಕೃತಿಗಳು ನೈಜತೆಯಿಂದ ಕೂಡಿದ್ದು ಭಾವನಾ ಪ್ರಧಾನವಾಗಿರುವುದಲ್ಲದೆ ಲಯ-ಚಲನೆಯಿಂದ ಕೂಡಿವೆ. ಈ ರೇಖಾಚಿತ್ರಗಳನ್ನು ತಮ್ಮ ವರ್ಣಚಿತ್ರಗಳಿಗೆ ತಕ್ಕಂತೆ ಸಂಯೋಜಿಸಿದ್ದು, ಪ್ರಮಾಣ ಬದ್ಧತೆಯ ಅವರ ನಿಪುಣತೆ ಕಾಣುತ್ತೇವೆ. ಹಾಗೂ ಇವರ ರೇಖಾಚಿತ್ರಗಳು ಕಾವ್ಯದಲ್ಲಿ ಮೂಡುವ ಪ್ರತಿಮೆಗಳಂತೆ ರೇಖಾವಿನ್ಯಾಸವನ್ನು ನಿರೂಪಿಸಿದ್ದಾರೆ. ಈ ರೇಖಾಚಿತ್ರಗಳಲ್ಲಿ ವ್ಯಕ್ತವಾಗಿರುವ ಜೀವಂತಿಕೆ ವೀಕ್ಷಕನಿಗೂ ಕಲಾವಿದನಿಗೂ ರಸಾನುಭೂತಿಯನ್ನು, ಆತ್ಮೀಯ ಸಂಬಂಧ ನಿರ್ಮಿಸುವಷ್ಟು ಪರಿಣಾಮಕಾರಿಯಾಗಿವೆ. ಇಲ್ಲಿಯ ರೇಖಾಚಿತ್ರದ ಸರಣಿಗಳ ಕುರಿತು ಭಾಮಾರವರು ರಾಧಾ ಮಾಧವರ ಒಲುಮೆಯ ಚಿತ್ತಾರ ಎಂಬ ಕವಿತೆಗಳ ಕೃತಿಯನ್ನು ಕಲಾಕ್ಷೇತ್ರಕ್ಕೆ ಧಾರೆಯರೆದಿದ್ದಾರೆ.

ಇವರ ರೇಖಾಚಿತ್ರಗಳ ವಿಷಯವಾಗಿ 'ಬಿ.ಕೆ. ಸುಮಿತ್ರರವರು ರಾಧಾಕೃಷ್ಣರ ಹಾಡಿನೊಂದಿಗೆ ರೇಖಾಚಿತ್ರ ಬರೆಯುವ ಅನೇಕ ಕಲಾವಿದರಲ್ಲಿ ಇವರು 'ಅಪರೂಪದ ಕಲಾವಿದ'ರು ಇವರು ನನ್ನ

ರೇಖಾಚಿತ್ರವನ್ನು ಬರೆದಿದ್ದಾರೆ. ನಮ್ಮ ರೇಖಾಚಿತ್ರ ಕಲಾವಿದರು ಬಹಳ ಕಡಿಮೆ ಅದರಲ್ಲಿ ಕೆ.ಕೆ. ಹೆಬ್ಬಾರ್, ಬಿ.ಕೆ.ಎಸ್. ವರ್ಮರ ಸಮಕ್ಕೆ ನಿಲ್ಲುವಂತವರು ಇವರು ಎಂದು ಹೇಳುತ್ತಾರೆ.'[೬]

೧. ಪ್ರತಿಕ್ಷಣ ಸಲಹುತಿಹ ತಾಯಿಗೆ ನಮನ

ಈ ಕಲಾಕೃತಿಯು ಕಡಿಮೆ ರೇಖೆಗಳಿಂದ ಕೂಡಿದ ನೈಸರ್ಗಿಕ ಕಲೆಯ ರೂಪದ ರೇಖೆಗಳಲ್ಲಿ ವಿಲೀನವಾಗಿರುವ ಓರ್ವ ಭಕ್ತನಿಗೆ ಆಶೀರ್ವದಿಸುವಂತಿದೆ. ಈ ಆಕೃತಿಯಲ್ಲಿ ಕಡಿಮೆ ರೇಖೆಗಳಿದ್ದರೂ ಆಸ್ವಾದಕರಿಕೆ ಪೂರ್ಣ ಪ್ರಮಾಣದ ಚಿತ್ರಣವನ್ನು ಮೂಡಿಸುವಂತಿದೆ. ದೇಹದ ಅಂಗಾಗಂಗಳಲ್ಲಿ ಪ್ರಮಾಣತೆ ನಿಖರವಾಗಿದ್ದು ಕಂಡುಬರುತ್ತದೆ. ಈ ಮಾತೆಯ ಉಳಿದರ್ಧ ಕೆಳಗಿನ ಶರೀರದ ಭಾಗ ಪ್ರಕೃತಿಯಲ್ಲಿ ಲೀನವಾಗಿರುವಂತೆ ಭಾಸವಾಗುತ್ತದೆ. ವರ್ಣ ಲೇಪಿತವಿಲ್ಲದಿದ್ದರೂ ರೇಖೆಗಳಿಂದ ತೊಡಿಸಿದ ಉಡುಗೆ ತೊಡುಗೆಗಳಲ್ಲಿ ಇದು ಇಂತಹ ಚಿತ್ರಣವೆಂದು ಹೇಳುವಷ್ಟು ಸಾಮ್ಯತೆಯನ್ನು ಹೊಂದಿದೆಯೆಂದು ಹೇಳಬಹುದು.

೨. ಕನ್ನಡದ ಆದಿಶಕ್ತಿ

ಕಡಿಮೆ ರೇಖೆಗಳಿಂದ ರಚಿತವಾದ ಈ ಕಲಾಕೃತಿಯನ್ನು ಯಾರು ನೋಡಿದರು ಇದು ಇಂತಹ ದೇವತೆ ಎಂದು ಹೇಳುವಷ್ಟು ಭಾವನೆಗಳನ್ನು ತುಂಬಿ ನಿಲ್ಲಿಸುತ್ತದೆ. ತಲೆಯ ಮೇಲೆ ಕಿರೀಟ, ಕೈಯಲ್ಲಿ ಕನ್ನಡದ ನೆಲದಲ್ಲಿ ರಾರಾಜಿಸುವ ಹಳದಿ, ಕೆಂಪು ವರ್ಣವುಳ್ಳ ಬಾವುಟ ಎಂದು ತಿಳಿದುಕೊಳ್ಳುವಷ್ಟು ಭಾವನೆಗಳನ್ನು ಕಟ್ಟಿ ಹಾಕುವಂತಿದೆ.

೩. ಹರಸು ತಾಯಿ ಕನ್ನಡಿಗರ

ಈ ಕಲಾಕೃತಿಯಲ್ಲಿಯೂ ಅತಿ ಕಡಿಮೆ ರೇಖೆಯುಳ್ಳವುಗಳಿಂದ ಸಂಯೋಜಿತಗೊಂಡ ಕನ್ನಡಾಂಬೆಯು ಕನ್ನಡಿಗರನ್ನು ಹರಸುತ್ತಿರುವ ದೃಶ್ಯವನ್ನು ಕಾಣಬಹುದು. ಕೈಯಲ್ಲಿ ಕನ್ನಡದ ಧ್ವಜ, ತಲೆಯಲ್ಲಿ ಕಿರೀಟ, ಶರೀರದ ಮುಖ್ಯಾಂಗಗಳ ಮೇಲೆ ಆಭರಣದ ರೇಖೆಗಳು ಖಚಿತತೆಯ ರೂಪವನ್ನು ತಿಳಿಸುವಂತಿದೆ.

ಈ ರೀತಿಯ ಕಲಾಕೃತಿಗಳಿಂದ ನಮಗೆ ತಿಳಿದುಬರುವ ವಿಷಯವೇನೆಂದರೆ ಬರೀ ಕವನ, ಕಾವ್ಯ, ಚಿತ್ರ ಬರೆಯುವುದರ ಜೊತೆಗೆ ಕನ್ನಡದ ಜಲ, ಭೂಮಿ, ಭಾಷೆಯನ್ನು ಉಳಿಸಿ ಬೆಳೆಸುವ ಪ್ರಯತ್ನವಾಗಲಿ, ಕನ್ನಡದ ತಾಯಿಯ ವಿಷಯವಾಗಿ ಗೌರವವಿರಲಿ... ಎಂಬುದನ್ನು ಸಾರುತ್ತಿದೆ ಎಂದು ಹೇಳಬಹುದು.

ಚುಕ್ಕೆ ಚಿತ್ರಗಳು

ಸ್ಥಿತಿ ಮಾತ್ರವಿದ್ದು, ಉದ್ದ-ಅಗಲ ಮತ್ತು ದಪ್ಪಗಳಿಲ್ಲದ ಆಕಾರಕ್ಕೆ ಬಿಂದು ಎನ್ನುತ್ತೇವೆ. ಅದಕ್ಕೆ ಚುಕ್ಕಿ ಎಂದೂ ಕರೆಯುತ್ತೇವೆ. ಚುಕ್ಕೆಗಳನ್ನು ಒಂದರ ಪಕ್ಕದಲ್ಲಿ ಒಂದನ್ನು ಇರಿಸಿ ರಚಿಸುವ

ಚಿತ್ರಗಳನ್ನು ಚುಕ್ಕಿ ಚಿತ್ರಗಳೆಂದು ಕರೆಯಲಾಗುತ್ತದೆ. ಹಿಂದಿನ ಕಾಲದಲ್ಲಿಯ ಚುಕ್ಕಿ ಚಿತ್ರಗಳ ಬಗ್ಗೆ ಸ್ವಲ್ಪ ಮಾಹಿತಿ ಸಿಗುತ್ತದೆ. ಪುರಾಣಗಳಲ್ಲಿ ಬಿಂದು ಯೋಜನಾ ಶೈಲಿ ಎಂಬ ಪ್ರಕಾರವೊಂದಿತ್ತು ಎಂಬುದನ್ನು ಓದಿ ತಿಳಿಯಬಹುದಾಗಿದೆ. ಆಗ ಅರಮನೆ, ಗುರುಮನೆಗಳಲ್ಲಿ, ಮಠಗಳಲ್ಲಿ ಕಾಣಬಹುದಾಗಿತ್ತು ಎಂಬ ಉಲ್ಲೇಖದಿಂದ ಹಿಡಿದು ಈ ಕಾಲದ ಪಾಶ್ಚಿಮಾತ್ಯರಲ್ಲಿಯೂ ಈ ಚಿತ್ರರಚನಾ ವಿಧಾನವಿದೆ. ಪೆನ್ಸಿಲ್, ಕ್ರಯಾನ್ಸ್, ಬಣ್ಣಗಳಂಥ ಮಾಧ್ಯಮದಿಂದ ಚಿತ್ರ ರಚಿಸುವುದು ಬಹಳಷ್ಟು ವರ್ಷಗಳಿಂದ ನಡೆದುಕೊಂಡು ಬಂದ ಕ್ರಿಯೆ. ಆದರೆ ಅಂತಹುದೇ ಚಿತ್ರಗಳನ್ನು ಕಪ್ಪು ಛಾಯೆಯನ್ನು ಮಾಧ್ಯಮವನ್ನಾಗಿ ಮಾಡಿಕೊಂಡು ಚುಕ್ಕೆಗಳ ಮೂಲಕ ಆಕಾರ ಕೊಡುವುದು ದೀರ್ಘ ಸಮಯ ತೆಗೆದುಕೊಳ್ಳುವ ತಾಳ್ಮೆಯ ಕೆಲಸ. ಈ ಕೆಲಸವನ್ನು ಮೂಲತಃ 'ಬಿಜಾಪುರ ಜಿಲ್ಲೆಯವರಾದ ಬುರ್ಣ್ಣಾಪುರ್ ಅವರು ಸಾಧನೆಗೈದಿದ್ದಾರೆ.'[೨] ಅದರಂತೆಯೇ ಬಾಗೂರು ಮಾರ್ಕಾಂಡೇಯ ಅವರೂ ಚುಕ್ಕೆ ಚಿತ್ರದಲ್ಲಿ ಸಾಧನೆಗೈದಿರುವ ಕಲಾವಿದರಾಗಿದ್ದಾರೆ.

ಈ ವಿಧಾನದಲ್ಲಿ ಚಿತ್ರ ರಚಿಸಬೇಕಾದರೆ ಚಿತ್ರವನ್ನು ಪೂರ್ವಭಾವಿಯಾಗಿ ಸೀಸದ ಕಡ್ಡಿಯಿಂದ ತೆಳುವಾಗಿ ರಚಿಸಿಕೊಂಡು ಅದರ ಮೇಲೆ ಚುಕ್ಕೆಗಳನ್ನಿಡುತ್ತಾ ಹೋಗಬೇಕು. ಎಲ್ಲೆಲ್ಲಿ ದಟ್ಟವಾದ ನೆರಳು ಬೇಕಾಗುತ್ತದೋ ಅಲ್ಲಿ ಹೆಚ್ಚಿನ ಪ್ರಮಾಣದ ಚುಕ್ಕೆಗಳನ್ನು ದೇಹದ ನೈಜ ಬಣ್ಣ ಬರಬೇಕಾದಲ್ಲಿ ನೀರಿನಂತಹ ತೆಳುವರ್ಣಗಳನ್ನು ಬಳಸಿ ನಿಖರವಾದ ರೂಪ ತರಬಹುದು. ಹಾಗೂ ಚಿತ್ರರಚನೆಗೆ ಹೆಚ್ಚು ನಯವಾದ ಕಾಗದ ಸೂಕ್ತ. ವೇಗವಾಗಿ ಚುಕ್ಕೆಗಳನಿಡುತ್ತಾ ಹೋಗಬಹುದು. ಈ ಚುಕ್ಕಿ ಚಿತ್ರ ಬೇಗ ಮುಗಿಯುವಂತದಲ್ಲ. ವರ್ಣಗಳನ್ನು ಲೇಪಿಸಿದಷ್ಟು ಸುಲಭವಲ್ಲವಾದ್ದರಿಂದ ತಾಳ್ಮೆ ಬಹಳಷ್ಟು ಮುಖ್ಯ ಎನ್ನುತ್ತಾರೆ.

ಬಾಗೂರರು ಚುಕ್ಕಿ ಮತ್ತು ಕುಂಚ ಕಲೆಯನ್ನು ಅದ್ಭುತವಾಗಿ ರೂಢಿಸಿಕೊಂಡು ಬಂದವರು. ಇವರ ಸಂಯೋಜನಾ ಚಿತ್ರಣಗಳ ಕೌಶಲ್ಯಕ್ಕೆ ಮಾರು ಹೋಗದ ಕಲಾಪ್ರೇಮಿಗಳಿಲ್ಲ. ನಿಸರ್ಗದ ರಮಣೀಯ ದೃಶ್ಯಗಳನ್ನು ನಾವು ಮರೆತುಬಿಡುತ್ತೇವೆ. ಆದರೆ ಇವರು ಪ್ರಕೃತಿಯ ಚಿತ್ರಗಳ ಮೂಲಕ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿ ಮಾಡುವ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ. ತಾವು ಗುರುತಿಸಿಕೊಳ್ಳುವುದಕ್ಕೆ ಇಂಕುಮಾದ್ಯಮದ ಚುಕ್ಕೆ ಚಿತ್ರಗಳನ್ನು ಸೃಷ್ಟಿಸುವ ಮಾರ್ಗ ಕಂಡುಕೊಂಡು ಚಿಕ್ಕಪುಟ್ಟ ಕಲಾವಿದರಿಂದ ರಾಜರವರೆಗೆ ಬಿಡಿಸಿದ ಚುಕ್ಕಿ ಚಿತ್ರಗಳು ಇಂದಿಗೂ ಹಚ್ಚಳಿಯದಂತಿದೆ ಎಂದು ಹೇಳಬಹುದು.

೧. ಗಣಪತಿಯ ಚಿತ್ರ

ಪ್ರಸ್ತುತ ಕಲಾಕೃತಿಯನ್ನು ಇಂಕು ಮಾಧ್ಯಮದಲ್ಲಿ ಸೃಜಿಸಲಾಗಿದೆ. ಇದರ ಅಭಿಮುಖದ ಸ್ವಲ್ಪ ಬಲಭಾಗದಿಂದ ಬೆಳಕಿನ ಛಾಯೆಯನ್ನು ಹಾಯಿಸಲಾಗಿದೆ. ಈ ಕಲಾಕೃತಿಯು ಹೊಯ್ಸಳ ಕಾಲದಲ್ಲಿ ಕುಸುರಿ ಕೆಲಸದಿಂದ ಕೂಡಿದ ಅಲಂಕೃತ ಆಭರಣಗಳಿಂದ ಕೂಡಿದಂತೆ ಕಾಣುತ್ತದೆ.

ಗಣೇಶ್ ಎಂದರೆ ವಿಘ್ನ ನಿವಾರಕ. ನಮ್ಮ ಹಿಂದೂ ಸಂಪ್ರದಾಯದಲ್ಲಿ ಗಣೇಶಚೌತಿಯಂದು ದೇವಲೋಕದಿಂದ ಭೂಲೋಕಕ್ಕೆ ಬರುವಂತೆ ಪುರಾಣಗಳಲ್ಲಿ ಉಲ್ಲೇಖವಿದೆ. ಗಣೇಶನ ಬಲಗೈಯಲ್ಲಿ ಮತ್ತು ಈತನ ಒಡಲಿಗೆ ಬಳ್ಳಿಯಂತೆ ಸುತ್ತುವರೆದಿರುವ ಆದಿಶೇಷನ ಕತ್ತಲು ಮತ್ತು ಬೆಳಕಿನ ಛಾಯೆಯ ಹೊಯ್ದಾಟಗಳು ಬಹಳ ತೀಕ್ಷ್ಣವಾಗಿದ್ದು, ಆಭರಣಗಳ ಮೈಯೊಳಿಕೆಗಳು ಅತೀ ಸೂಕ್ಷ್ಮತೆಯಿಂದ ಚಿತ್ರಿತವಾಗಿವೆ. ಮೂಶಕ ವಾಹನ ಈತನನ್ನು ಕೂರಿಸಿಕೊಂಡು ಹೊರಲಾರದ ಬಾರವನ್ನು ಒತ್ತುಕೊಂಡು ಹೋಗುತ್ತಿರುವಂತೆ. ಈ ಮೂಶಕನ ಪಾರ್ಶ್ವಗಳಲ್ಲಿ ಕೈಮುಗಿದು ನಿಂತಿರುವ ಓರ್ವ, ಇನ್ನೊಂದು ಕಡೆ ತನ್ನ ಕೈಯಲ್ಲಿ ಉಂಡೆಗಳನ್ನು ಮೇಲೆತ್ತಿ ಬಾಗಿ ಆಸನವಾಗಿರುವ ಚಿತ್ರಣದ ಛಾಯೆಯನ್ನು ಕಲಾಕೃತಿಯಲ್ಲಿ ಹಿಡಿದಿಡಲಾಗಿದೆ.

೨. ಡಾ. ರಾಜಕುಮಾರ್

ಕಲಾಕೃತಿಯನ್ನು ಇಂಕು ಮಾಧ್ಯಮದಿಂದ ಚಿತ್ರಿಸಿದ್ದು, ಚಿತ್ರದ ಬಲಬದಿಯಿಂದ ಎಡಬದಿಗೆ ಬೆಳಕಿನ ಛಾಯೆಯನ್ನು ಭಾವನಾತ್ಮಕವಾಗಿ ಹಿಡಿದಿಟ್ಟಿದೆ. 'ಭಕ್ತ ಪ್ರಹ್ಲಾದ' ಚಿತ್ರದಲ್ಲಿ ಗದೆ ಹೆಗಲ ಮೇಲಿಟ್ಟುಕೊಂಟು ವೀರಾವೇಶದಲ್ಲಿ ನಯನಗಳನ್ನಗಲಿಸಿ ಕೋಪ ಉಕ್ಕಿಸಿದ ಇವರನ್ನು ಚುಕ್ಕಿ ಚಿತ್ರದಲ್ಲಿ ಹಿಡಿದಿಟ್ಟಿದ್ದಾರೆ. ಕಾರಣ ಈ ಚಿತ್ರ ಬರೆದದ್ದಕ್ಕೆ 'ನನ್ನೂರಿನ ನಾ ಕಾಳೇಶ್ವರರಾವ್ ಅವರು ವಿಶೇಷ ಭಂಗಿಯ ಛಾಯಾಚಿತ್ರವೊಂದನ್ನು ಕೊಟ್ಟು ಇದನ್ನು ಚುಕ್ಕಿ ಚಿತ್ರದಲ್ಲಿ ಬರೆ ಎಂದರಂತೆ. ಅದನ್ನು ಚುಕ್ಕಿ ಚಿತ್ರದಲ್ಲಿ ಬಿಡಿಸಿದಾಗ ನಂತರ ನನ್ನ ಬದುಕಿನ ದಿಸೆಯೇ ಬದಲಾಯಿತು ಎನ್ನುತ್ತಾರೆ.[೮] ಜೊತೆಗೆ ಇವರು ಸಾಹಿತ್ಯದ ಅಭಿರುಚಿಯನ್ನು ಹಚ್ಚಿಕೊಂಡು ಬರವಣಿಗೆಗೆ ತೊಡಗಿದಾಗ ಕಾಳೇಶ್ವರರಾವ್ ಅವರು ನೀರೆರೆದು ಬೆಳೆಸಿದ್ದುದನ್ನು ಮರೆಯುವಂತಿಲ್ಲ. ಹಲವು ಬಾರಿ ಪ್ರತಿಭೆಗೆ ತಕ್ಕ ಪುರಸ್ಕಾರಗಳು ದೊರೆತವು. ಇಲ್ಕಲ್ ವಿಜಯಕುಮಾರ ಅಂಥವರನ್ನು ಪರಿಚಯ ಮಾಡಿಸಿದ್ದು ಕಲೆಯಲ್ಲಿ ಮುಂದುವರೆಯಲು ಕಾರಣ ಎಂದು ಅವರನ್ನು ಗೌರವದಿಂದ ನೆನೆಯುತ್ತಾರೆ.

೩. ಕೆ.ಎಸ್.ನಿಸಾರ ಅಹಮದ್

ಕವಿಗಳ ಬಗ್ಗೆ, ಕಲಾವಿದರ ಬಗ್ಗೆ, ಕರುನಾಡ ಬಗ್ಗೆ, ಸಂಸ್ಕೃತಿಯ ಬಗ್ಗೆ ಅಪಾರ ಗೌರವವಿರಿಸಿಕೊಂಡ ಇವರು ಕನ್ನಡದ ಸಾಹಿತಿಗಳಲ್ಲಿ ಒಬ್ಬರಾದ ಕೆ.ಎಸ್. ನಿಸ್ಸಾರ್ ಅಹಮದ್ ಅವರ ಭಾವಚಿತ್ರವನ್ನು ದಿನಾಂಕ: ೨೬.೦೯.೨೦೦೬ರಲ್ಲಿ ಇಂಕು ಮಾಧ್ಯಮದಿಂದ ತುಸು ನಗೆಯ ಭಾವನೆಯುಳ್ಳಂತ ಛಾಯೆಯನ್ನು ಬಿಂಬಿಸಿ ಯಥಾವತ್ತತೆಯ ಜೊತೆ ಕಲಾತ್ಮಕವಾಗಿ ಸೃಜಿಸಿದ್ದಾರೆ. ಇವರ ಜೊತೆ ಸಾಹಿತ್ಯಿಕವಾಗಿಯೂ ಪ್ರಸ್ತುತವಾಗಿಯೂ ಒಡನಾಟವಿರುವುದನ್ನು ಸ್ಮರಿಸಿಕೊಳ್ಳುತ್ತಾರೆ.

೪. ತಾಯಿ-ಮಗು

ಈ ಕಲಾಕೃತಿಯು ಇಂಕು ಮಾಧ್ಯಮದಲ್ಲಿ ರಚಿತವಾಗಿದ್ದು, ಕಲಾಕೃತಿಯಲ್ಲಿ ಬಲಭಾಗದಿಂದ ಎಡಭಾಗಕ್ಕೆ ಬೆಳಕಿನ ಛಾಯೆಯನ್ನು ಹಿಡಿದಿಡಲಾಗಿದೆ. ತಾಯಿ ಬಡತನದ ರೂಪದಲ್ಲಿದ್ದರೂ ತನ್ನ

ಮಗುವಿನೊಂದಿಗೆ ನಗುವ-ನಲಿವ ಆಕೃತಿಯ ಚೆಲುವು ಬಹಳ ಸಮೃದ್ಧವಾಗಿ ಕಾಣುತ್ತದೆ. ಈಕೆಯ ಸೆರಗಿನ ನೆರಿಗೆಯ ನೆರಳು, ಮಸ್ತಕದ ಮೇಲಿನ ಸಿಂಧೂರ ಸ್ಪಷ್ಟವಾದ ಮೈವಳಿಕೆಗಳಿಂದ ಕೂಡಿದೆ. ಹಾಗೂ ಈ ಮಗುವಿನ ಮುಂಚಾಚಿದ ಒಂದೊಂದು ಕೇಶದ ನೆರಳು, ಬಲಗೈ ಮೇಲಕೆತ್ತಿರುವುದು, ಕೈಯ ನೆರಳು ತನ್ನ ತಾಯಿಯ ಬಲಗೈ ಮೇಲೆ ಮುದ್ರಿತವಾಗಿರುವುದು ಸೌಂದರ್ಯಯುತವಾಗಿದೆ. ಒಟ್ಟಾರೆಯಾಗಿ ಮನುಜ ಕುಲದ ಅಂತಸ್ತು ಏನೇ ಇರಲಿ ಮನೆಯಲ್ಲಿ ಒಂದು ಚಿಕ್ಕ ಮಗುವಿದ್ದರೆ ನಮ್ಮ ಎಲ್ಲ ತಾಪತ್ರಯಗಳೂ ಗೌಣ ಎಂದು ಸಾರುವಂತಿದೆ. ತಾಯಿ ಮಗುವಿನ ನಡುವಿನ ಬಾಂಧವ್ಯದ ಬೆಸುಗೆ ಎಂದು ಹೇಳುವಂತಿದೆ. ಈ ಕಲಾಕೃತಿ ಈಗಿನ ಆಧುನಿಕ ಯುಗದ ಜಂಜಾಟಗಳು ತಾಯಿ ಮಗುವಿನ ನಡುವಿನ ಪ್ರೀತಿ ವಾತ್ಸಲ್ಯಗಳನ್ನು ಕಸಿದುಕೊಳ್ಳುತ್ತಿವೆ. ಈ ಚಿತ್ರವು ನಮ್ಮಲ್ಲಿ ಭಾವನಾತ್ಮಕ ಸಂಬಂಧಗಳನ್ನು ಬೆಸೆಯುವ ಕೊಂಡಿಯಂತಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

೫. ಡಾ. ವೀರೇಂದ್ರ ಹೆಗ್ಗಡೆ

ಈ ಕಲಾಕೃತಿಯನ್ನು ಇಂಕು ಮಾಧ್ಯಮದಿಂದ ಸೆರೆಹಿಡಿದಿದ್ದು, ಆಕೃತಿಯ ಬಲಭಾಗದಿಂದ ಕತ್ತಲು-ಬೆಳಕಿನ ಛಾಯೆಯನ್ನು ಭಾವನಾತ್ಮಕವಾಗಿ ಮುಗುಳ್ನಗೆಯ ರೂಪದಲ್ಲಿ ಇಡಿದಿಟ್ಟಿದ್ದಾರೆ. ಇವರು ಸಾಹಿತ್ಯಿಕ, ಸಾಂಸ್ಕೃತಿಕ, ಕೃಷಿಯ ಜೊತೆಗೆ ಧಾರ್ಮಿಕತೆಯಲ್ಲಿಯೂ ಕೃಷಿಯನ್ನು ಮಾಡುತ್ತಿದ್ದಾರೆ ಎನ್ನುವುದಕ್ಕೆ ಈ ಭಾವಚಿತ್ರ ತಿಳಿಸುವಂತಿದೆ. ಒಟ್ಟಾರೆಯಾಗಿ ಚಿತ್ರಕಲೆಯಲ್ಲಿಯೂ ಧಾರ್ಮಿಕತೆಯ ಪೂರಕಗಳನ್ನು ಕಟ್ಟಿಬೆಳೆಸಬೇಕೆಂಬ ಪಣ ಇವರದು ಎಂದು ಹೇಳಬಹುದು. ಇದು ಹೀಗೆ ಮುಂದುವರಿಯಲಿ, ನಮ್ಮ ಚಿತ್ರಕಲೆಯಲ್ಲಿಯೂ ಸಹ ಬೆಳೆಯಲಿ ಧರ್ಮ ಉಳಿಯಲಿ ಎಂದು ಹಾರೈಸಿಕೊಳ್ಳುತ್ತೇನೆ.

೬. ದೀಪದ ಹುಡುಗಿ

ದೀಪವನ್ನು ಕೈಯಿಂದ ಹಿಡಿದಿರುವ ಹುಡುಗಿಯ ಸುಂದರವಾದ ಭಂಗಿ ಈ ಕಲಾಕೃತಿಯಲ್ಲಿದೆ. ನೆರಳು ಬೆಳಕಿನ ಛಾಯೆಯನ್ನು ತುಟಿಗಳ ಮೇಲೆ ಕಣ್ಣಿನ ಮೇಲೆ, ಬಟ್ಟೆಯ ನೆರಿಗೆಯ ಮೇಲೆ, ಆಭರಣಗಳ ಮೇಲೆ, ಕೈ ಮೊಗದ ಮೇಲೆ, ಬಿದ್ದಿರುವ ಬೆಳಕನ್ನು ಯಥಾವತ್ತಾಗಿ ಮೂಡಿಸುವುದರ ಜೊತೆಗೆ ದೀಪವು ಬೀರುವ ಪ್ರಖರವಾದ ಬೆಳಕು ಬಳೆ ಹಾಗೂ ಹಿನ್ನೆಲೆಯಲ್ಲಿ ಎಂಥದ್ದೋ ಮಹತ್ತರವಾದ ಗಂಭೀರವಾದ ಸೌಂದರ್ಯದ ರೂಪವನ್ನು ನೋಡಿದಾಗ ಅಚ್ಚರಿಯ ಸಂತಸವು ನಮ್ಮ ಮನದಲ್ಲಿ ಮೂಡುವಂತಿದೆ. ಈ ಎಲ್ಲಾ ಚುಕ್ಕೆ ಕಲಾಕೃತಿಗಳಲ್ಲಿ 'ನನಗೆ ಅತೀ ಇಷ್ಟವಾಗುವ ಈ ಚಿತ್ರವು ಮೊದಲನೆಯದು ಎಂದರೆ ತಪ್ಪಾಗಲಾರದು'' ಎಂದು ತನ್ನ ಮನಸಿನಾಂತರಾಳದಿಂದ ಉಸುರಿಸುತ್ತಾರೆ. ಈ ಕಲಾಕೃತಿಯನ್ನು ದಿನಾಂಕ: ೦೪.೦೭.೨೦೧೨ರಂದು ರಚಿಸಿದ್ದು, ಇದಕ್ಕೆ

ಹೋಲಿಕೆಯಾಗಿ ಮೈಸೂರು ಅರಮನೆಯ ಜಗನ್ಮೋಹನ ಸಂಗ್ರಹಾಲಯದಲ್ಲಿ ಕಲಾವಿದ ಅಳದಂಕರ್ ಅವರು ವರ್ಣಗಳಿಂದ ರಚಿಸಿದ ಕಲಾಕೃತಿಯನ್ನು ಪ್ರಸ್ತುತವಾಗಿಯೂ ಕಾಣಬಹುದು.

೭. ಕೂತಿರುವ ಮಗುವಿನ ಚಿತ್ರ

ಈ ಕಲಾಕೃತಿಯನ್ನು ಇಂಕು ಮಾಧ್ಯಮದಿಂದ ರಚಿಸಿದ್ದು, ಕತ್ತಲು ಬೆಳಕಿನ ಛಾಯೆ ಮುಖಭಾವದ ಅಂಗ, ಅವಯವಗಳು ನಿಖರವೆನಿಸುವಷ್ಟು ಖಚಿತವಾಗಿ ಕ್ರೂಢೀಕರಿಸಿದ್ದು ಆಭರಣಗಳಲ್ಲಿಯೂ ಅಷ್ಟೇ ಸ್ಪಷ್ಟತೆಯ ಖಚಿತತೆಯನ್ನು ಕಾಣಬಹುದು. ಹಾಗೂ ಮುಖದಲ್ಲಿ ತುಸು ಸಂತೋಷದ ಮುಗ್ಧತೆಯನ್ನು ಇಟ್ಟಿದ್ದಾರೆ. ಮಗುವೊಂದು ದೇವರ ಸಮಾನ ಎಂದು ಹೇಳುವುದು ಅದಕ್ಕೆ ತಕ್ಕಂತೆಯೇ ಈ ಮಗುವಿನ ಚಿತ್ರಣವು ನಗುಮುಖದಿಂದ ನೋಡಿದ ಎಂತವರ ಮನಸ್ಸನ್ನು ಆಹ್ಲಾದಕರವಾಗಿಸುವಂತಿದೆ.

೮. ಒಂದು ಶಿಲ್ಪ

ಈ ಕಲಾಕೃತಿಯನ್ನು ಇಂಕು ಮಾದ್ಯಮದಿಂದ ರಚಿಸಿದ್ದಾರೆ. ನೆರಳು ಮತ್ತು ಬೆಳಕಿನ ಛಾಯೆಯನ್ನು ಎಡದಿಂದ ಬಲಭಾಗಕ್ಕೆ ಹಿಡಿದಿಟ್ಟಿದ್ದು, ಒಂದು ಸುಂದರವಾದ ಸೌಂದರ್ಯದ ರಸಾನುಭವವನ್ನು ಉಂಟುಮಾಡುವ ಶಿಲ್ಪದಂತಿದೆ. ಈ ಶಿಲ್ಪದಲ್ಲಿ ಅವರ ನಯನ ದೃಷ್ಟಿ ಜ್ಞಾನ ಸಾನಿಧ್ಯವನ್ನು ಸೇರುವ ಕಾರ್ಯದಲ್ಲಿ ತೊಡಗಿದಂತೆ ಕಾಣುತ್ತಿದೆ. ಎಡಬದಿಯ ಕಪೋಲದ ತುದಿಯ ನಾಸಿಕ ಬೆಳಕಿಗೆ ನಮ್ಮ ಮುಖವನ್ನು ಚಾಚಿದಾಗ ಎಲ್ಲೆಲ್ಲಿ ಬೆಳಕಿನ ಛಾಯೆ ಹಾಗೂ ತೆಳುವಾದ ಮತ್ತು ಗಾಢವಾದ ಕತ್ತಲು ಛಾಯೆಯನ್ನು ಹೇಗೆ ಸಂಯೋಜನೆಗೊಳ್ಳಬೇಕೋ ಅದಕ್ಕೂ ಒಂದು ಕೈ ಮೇಲೆ ಎಂಬಂತೆ ಛಾಯೆಗಳು ಕಂಡುಬರುತ್ತವೆ.

ಕಲಾವಿದರು ಚುಕ್ಕೆ ಚಿತ್ರವನ್ನು ರಚಿಸಲು ಎಂಟು ದಿನಗಳ ಸಮಯಾವಕಾಶ ಬೇಕಾಯಿತು ಎಂದಿದ್ದಾರೆ. ಏಕೆಂದರೆ ವರ್ಣಗಳಿಂದ ರಚಿಸುವ ಕಲಾಕೃತಿಗಳನ್ನು ನಮಗೂ ಅನಿಸಿದ ಸಮಯದಲ್ಲಿಯೂ ಮುಗಿಸಬಹುದು. ಆದರೆ ಚುಕ್ಕೆ ಚಿತ್ರಣಗಳು ವರ್ಣಗಳನ್ನು ಲೇಪಿಸಿದಷ್ಟು ಸುಲಭವಲ್ಲ. ಅವುಗಳ ರಚನಾಕ್ರಮ ಅಮೆ ನಡೆದಂತೆಯೇ ಸರಿ ಎಂದು ಹೇಳಬಹುದು. ಹಾಗಾಗಿ ಇದನ್ನು ರಚಿಸಲು ಸಮಯವನ್ನು ಹೆಚ್ಚಾಗಿ ಬೇಡುತ್ತದೆ.

೯. ಬಿಜಾಪುರದ ಭಂಗಿಮಹಲ್:

ಬಿಜಾಪುರದ ಭಂಗಿಮಹಲ್ ಕಲಾಕೃತಿಯನ್ನು ೦೪-೦೩-೨೦೧೨ರಂದು ಇಂಕು ಮಾಧ್ಯಮದಿಂದ ರಚಿಸಿದ್ದಾರೆ. ಇದು ಹಿನ್ನೆಲೆ ಮತ್ತು ಮುನ್ನೆಲೆಯ ಬೆಳಕಿನ ಛಾಯೆಯನ್ನು ಕಲ್ಪಿಸಿಕೊಡುತ್ತದೆ. ಮತ್ತು ಹತ್ತಿರದ ದೂರದ ಅರುವಿಕೆಯನ್ನೂ ಮೂಡಿಸುತ್ತದೆ. ಈ ಕಲಾಕೃತಿಯಲ್ಲಿ ಬಲಭಾಗದ ಒಳಗೋಡೆಯ ಮೇಲಿನ ವೀಕ್ಷಣ ಮತ್ತು ಗಾಳಿಯಾಡುವ ಕಿಟಕಿಗಳು ದಟ್ಟನೆಯ

ಕತ್ತಲೆಯಿಂದ ಕೂಡಿದ್ದು, ಅವುಗಳಿಂದ ಹೊರ ಚಾಚಿದ ಕಿಟಕಿಯ ಭಾಗಗಳು ಬೆಳಕಿನ ಛಾಯೆಯಿಂದ ಕೂಡಿದೆ. ಇಟ್ಟಿಗೆಯ ಆಕಾರ ಹಾಗೂ ಎಡಬದಿಯ ಮಹಲ್‌ನ ಆಕಾಶಕ್ಕೆ ಚಾಚಿರುವ ಗುಮ್ಮಟಗಳು ಬಹಳ ಸೊಗಸಾಗಿ ನೈಜರೂಪವನ್ನು ಪ್ರದರ್ಶಿಸುತ್ತಿವೆ. ಇದರ ಕೆಳಭಾಗದಲ್ಲಿ ಗೋಡೆಯ ಮೇಲೆ ಬೆಳೆದಿರುವ ದಟ್ಟನೆಯ ಸಸ್ಯಗಳೂ ನಿಮ್ಮ ಜೊತೆಗೆ ನಾವು ಒಬ್ಬರು ಎಂಬಂತೆ ಕಾಣುತ್ತಿವೆ. ಇದಲ್ಲದೆ ಮಹಲಿನ ಮುಂಭಾಗದಲ್ಲಿ ಓರ್ವ ಸೈಕಲ್ ಸವಾರಿ ಮಾಡುತ್ತಿರುವುದು ಈತನು ನೋಡುಗನಿಗೆ ಹತ್ತಿರವಿರುವುದರಿಂದ ಸ್ವಲ್ಪ ದಟ್ಟನೆಯ ಕಪ್ಪು ಚುಕ್ಕೆಗಳಿಂದ ಮೈಯೊಳಿಕೆಗಳನ್ನು ಪಡೆದುಕೊಂಡಿದ್ದು ಇನ್ನೋರ್ವ ದೂರವಾಗಿದ್ದು ಇವನ ನೆರಳು ಬಳಕಿನ ಛಾಯೆಯಲ್ಲಿ ಅತಿಯಾಗಿ ಬೆಳಕನ್ನು ಹಿಡಿದಿಟ್ಟುಕೊಂಡಿದ್ದಾನೆ. ಒಟ್ಟಾರೆಯಾಗಿ ಈ ಕಲಾಕೃತಿಯಿಂದ ನಾವು ಐತಿಹಾಸಿಕ ಸ್ಮಾರಕಗಳನ್ನು ಮುಂದಿನ ಪೀಳಿಗೆಯವರಿಗೆ ನಮ್ಮ ಇತಿಹಾಸದ ಪುಟದ ಮೈಲುಗಲ್ಲುಗಳು ಎಂಬುದನ್ನು ಸಾರಿ ಹೇಳಿ ಉಳಿಸಿಕೊಂಡು ಬರಬೇಕೆಂಬುದನ್ನು ಬಿಂಬಿಸುವಂತಿದೆ.

ವರ್ಣ ಭಾವಚಿತ್ರಗಳು

'ಬಾಗೂರುರ ಅಧ್ಯಯನ ಸಮಯದಲ್ಲಿ ಭಾವಚಿತ್ರ ರಚನೆಯು ಕಲಾಕಾರನ ವೃತ್ತಿಯ ಗೌರವಯುತವಾದ ಪ್ರಮುಖ ಅಂಗವಾಗಿತ್ತು. ಅಲ್ಲದೆ ಛಾಯಾಗ್ರಹಣದ ಅನ್ವೇಷಣೆಗೆ ಮೊದಲು ಭಾವ ಚಿತ್ರಚನೆಯೆಂಬುದು ಪ್ರತಿಯೊಬ್ಬ ಕಲಾವಿದನೂ ಮಾಡಲು ಕಲಿಯಬೇಕಾಗಿದ್ದ ಕೆಲಸವಾಗಿತ್ತು'[೧೦] ಎಂದು ತಿಳಿಸುತ್ತಾರೆ. ಹಾಗೆಯೇ ನಾನು ರಚಿಸುತ್ತಿದ್ದ ಭಾವಚಿತ್ರಗಳನ್ನು ನನ್ನ ಸ್ನೇಹಿತರು ಕಣ್ಮರೆ ಮಾಡುತ್ತಿದ್ದರು ಎಂದು ಸ್ಮರಿಸಿಕೊಳ್ಳುತ್ತಾರೆ. ಭಾವಚಿತ್ರಣ ಒಂದು ಕಷ್ಟಕರವಾದ ಕಲೆ. ಇದು ಎಲ್ಲಾ ಚಿತ್ರಗಳಂತೆ ಅಲ್ಲ. ರೂಪದರ್ಶಿಯನ್ನು ಕಣ್ಣಿಗೆ ಕಂಡಂತೆ ನೆರಳು–ಬೆಳಕು ಛಾಯೆ ಮೂಡಿಸಿ ಚಿತ್ರಿಸುವಲ್ಲಿ ಮನುಷ್ಯ ರೂಪದ ಸಾಮನ್ಯ ಚಿತ್ರವಲ್ಲ. ಚಿತ್ರಿಸಿದಂಥ ಚಿತ್ರ ರೂಪದರ್ಶಿಯನ್ನು ಹೋಲದಿದ್ದರೆ ಅದು ಒಳ್ಳೆಯ ಭಾವಚಿತ್ರವಲ್ಲ. ಆದರೆ ಇಲ್ಲಿ ಕೇವಲ ರೂಪದರ್ಶಿಯ ಹೋಲಿಕೆಯಷ್ಟೇ ಮುಖ್ಯವಲ್ಲ. ರೂಪದರ್ಶಿಯ ಅಂತಃಸತ್ವವನ್ನೇ ಹಿಡಿದಿಡುವ ವ್ಯಕ್ತಮಾಡುವ ಯತ್ನವಿರುತ್ತದೆ ಎನ್ನುತ್ತಾರೆ.

ಇಂತಹ ಅಕಾಡಿಮಿಕ್ ಶೈಲಿಯ ಭಾವಚಿತ್ರ ರಚನೆ ಕ್ರಮೇಣವಾಗಿ ಕಲಾಕ್ಷೇತ್ರದಿಂದ ಕಣ್ಮರೆಯಾಗುತ್ತಿರುವ ಸಂದರ್ಭದಲ್ಲಿ ಅದನ್ನು ಜೀವಂತವಾಗಿಟ್ಟು ತನ್ನದೇ ಆದ ಮಹತ್ವವನ್ನು ಕಲಾರಂಗಕ್ಕೆ ನೀಡಿರುವ ಕೆಲವೇ ಕಲಾವಿದರಲ್ಲಿ ಬಾಗೂರರು ಪ್ರಮುಖರೆನಿಸುತ್ತದೆ. ಭಾವಚಿತ್ರಗಳ ರಚನೆಯಲ್ಲಿ ನಿಮ್ಮ ಪಾತ್ರ ಮತ್ತು ಸಂದೇಶವೇನು? ಎಂದು ಕೇಳಿದಾಗ ಅವರು 'ನಾನು ಹೆಚ್ಚಾಗಿ ಜಲವರ್ಣದಿಂದ ಕುಂಚದ ಕಡಿಮೆ ಹೊಡೆತದ ಭಾವನೆಗಳ ಮುಖಾಂತರ ನೈಜರೂಪದ ವ್ಯಕ್ತಿ ಚಿತ್ರಗಳನ್ನು ಅತ್ಯಂತ ಕಡಿಮೆ ಸಮಯದಲ್ಲಿ ಅನಾವರಣಗೊಳಿಸುವುದು ಮತ್ತು ತಾಂತ್ರಿಕವಾಗಿ ಪಾಶ್ಚಿಮಾತ್ಯರ ಬಾಯಿ, ಮೂಗು, ಇತರೆಗಳನ್ನು ಪ್ರೀತಿಗೆ, ಅಪಘಾತಕ್ಕೆ ಹೋಲಿಕೆಯ ರಸವರ್ಣವಾದ

ಕೆಂಪು ವರ್ಣ ಲೇಪಿಸುವುದು ನನಗೆ ಇಷ್ಟ. ಜೊತೆಗೆ ಜೀವಕಳೆ ತುಂಬುವ ಕಲೆಗಾರಿಕೆ ಬರಬೇಕು. ಅದು ಅನುಭವ ಜನ್ಯ. ಆದರೆ ಇಂತಹ ತಾಳ್ಮೆ, ಶ್ರದ್ಧೆ ಇಂದಿನ ತಲೆಮಾರಿನ ಕಲಾವಿದರಲ್ಲಿ ಕಡಿಮೆಯಾಗುತ್ತಿದೆ ಎಂದು ಆಲಾಪಿಸಿಕೊಳ್ಳುತ್ತಾರೆ.'[೧೧]

೧. ಶಂಕರಲಿಂಗ ಭಾಗವತ್ ಸರಸ್ವತಿ:

ಈ ಕಲಾಕೃತಿಯನ್ನು ಜಲವರ್ಣದಿಂದ ಚಿತ್ರಿಸಿದ್ದರು. ಓರ್ವ ಗುರು ಒಂದು ಗುರುತುಪಡಿಸಿದ ಸ್ಥಳಾವಕಾಶದಲ್ಲಿ ಕೈಯಲ್ಲಿ ಕೋಲನ್ನು, ಕೊರಳಲ್ಲಿ ರುದ್ರಾಕ್ಷಿ ಮಣಿಗಳು, ಮಸ್ತಕದಲ್ಲಿ ವಿಭೂತಿ, ಪಾದಗಳಲ್ಲಿ ಮರದ ಪಾದುಕೆಗಳು, ಮೈಮೇಲೆ ಸ್ವಲ್ಪ ಭಾಗ ತೆರೆದಂತೆ ಉಳಿದ ಭಾಗ ಮುಚ್ಚಿಕೊಂಡಂತೆ ಉಡುಗೆಯ ಜೋಡಣೆ ಹಾಗೂ ಜಿಂಕೆ ಚರ್ಮವನ್ನು ತನ್ನ ಕೆಳಗೆ ಹಾಕಿಕೊಂಡು ಗಾಂಭೀರ್ಯತೆಯಿಂದ ಕೂಡಿದ ದೃಷ್ಟಿ ಹಾಯ್ದಂತೆ ಚಿತ್ರಿಸಿದ್ದು, ಭೂಮಿಯ ಮೇಲೆ ಒಂದು ಕುಂಡವನ್ನು ಕಾಣಬಹುದು. ಈ ಹಿನ್ನೆಲೆಯಾಗಿ ಹಳದಿ ಮತ್ತು ಹಸಿರು ಮಿಶ್ರಿತ ಗಾಢವಾದ ವರ್ಣವನ್ನು ಲೇಪಿಸಿ ಈ ಕಲಾಕೃತಿಯ ನಿಖರತೆಯನ್ನು ಕಾದಿಟ್ಟಿದ್ದಾರೆ.

೨. ಸ್ತ್ರೀ ಭಾವಚಿತ್ರ:

ಈ ಕಲಾಕೃತಿಯನ್ನು ಜಲವರ್ಣದಿಂದ ಚಿತ್ರಿಸಿದ್ದು, ಮುಖದ ಮೇಲೆ ದೀಪದ ಬೆಳಕು ಬಿದ್ದಂತೆ ಪ್ರಖರವಾದ ಶ್ರೀಮಂತಿಕೆಯನ್ನು ಕಾಣಬಹುದು. ನೆರಳು ಮತ್ತು ಬೆಳಕು ಎಡಬದಿಯಿಂದ ಬಲಬದಿಗೆ ಇಡಿದಿಟ್ಟಿದ್ದು, ನಯನಗಳಲ್ಲಿ ತೇಜಸ್ಸು, ಮಸ್ತಕದಲ್ಲಿ ಸಿಂಧೂರ, ಕರ್ಣದಲ್ಲಿ ಆಭರಣ ಹಾಗೂ ತೊಟ್ಟಿರುವ ಬಟ್ಟೆಗಳಲ್ಲಿ ಖಚಿತತೆಯ ದುಂಡತ್ವದ ಸೃಷ್ಟಿಕೆಯನ್ನು ಮತ್ತು ಹಿನ್ನೆಲೆ ಮುನ್ನೆಲೆಗಳ ವ್ಯತ್ಯಾಸದ ಅರುಹಿಕೆಯನ್ನು ಈ ಕಲಾಕೃತಿಯಲ್ಲಿ ಚಿತ್ರಿಸಿದ್ದಾರೆ.

೩. ಬಾಲಕನ ಭಾವಚಿತ್ರ

ಈ ಬಾಲಕನ ಆಕೃತಿಯು ಜಲವರ್ಣದಿಂದ ಕಡಿಮೆ, ಕುಂಚದ ಒರಸೆಗಳ ಹೊಡೆತವನ್ನು ಕೊಟ್ಟಿರುವುದರ ಜೊತೆಗೆ ಬಾಲಕನ ಆಕಾರದ ಭಾವನಾತ್ಮಕ ರೂಪವನ್ನು ತೆರೆದಿಟ್ಟಿದ್ದಾರೆ. ಈ ಹಿನ್ನೆಲೆಯಾಗಿ ತೆಳುವಾದ ಸಮೃದ್ಧತೆಯಿಂದ ಕೂಡಿದ ವರ್ಣದ ಸೆಳೆತಗಳನ್ನು ಕಾಣಬಹುದು.

ನಿಸರ್ಗ ಚಿತ್ರಗಳು

'ಗ್ರಾಮೀಣ ನೆಲಕ್ಕೆ ಅಥವಾ ಪ್ರಕೃತಿಗೆ ಹತ್ತಿರವಾದ ನೇರವಾದ ಅಭಿವ್ಯಕ್ತಿಗೆ ಭೂದೃಶ್ಯ ಎಂದು ೧೫-೧೬ನೆಯ ಶತಮಾನದಿಂದಲೇ ಕರೆಯಲಾಗುತ್ತಿದೆ. ಗ್ರಾಮೀಣ ದೃಶ್ಯ ಎಂಬರ್ಥದ ಡಚ್ ಪದದಿಂದ ಲ್ಯಾಂಡ್‌ಸ್ಕೇಪ್ ಪದ ಹುಟ್ಟಿಕೊಂಡಿದೆ. ದೃಶ್ಯಗಳ ಅಲಂಕೃತ ಚಿತ್ರಣಗಳಿಂದ ಇಂದು ನಾವು ಲ್ಯಾಂಡ್‌ಸ್ಕೇಪ್ ಎಂದು ಕರೆಯುವ ಭೂದೃಶ್ಯಗಳು ರೋಮನ್ನರ ಕಾಲದಿಂದಲೂ ಕಾಣಿಸಿಕೊಂಡಿವೆ. ಮದ್ಯಕಾಲೀನ ಯುಗದಲ್ಲೂ ಮುಂದುವರೆದ ಈ ಚಿತ್ರದ ವಿಭಾಗ ಕಾಲದ

ಪರೀಕ್ಷೆಯಲ್ಲಿ ಕೆಲಸವನ್ನಷ್ಟೇ ಉಳಿಸಿಕೊಂಡಿದೆ. ಆದರೆ ಭೂದೃಶ್ಯ ಚಿತ್ರಣ ತನ್ನದೇ ಆದ ಪೂರ್ಣ ಸ್ವತಂತ್ರ ಅಸಿತ್ವವನ್ನು ಕಂಡುಕೊಂಡಿದ್ದು, ಪುನರ್‌ಜ್ಜೀವನ ಕಾಲದಲ್ಲಿ. ಡಚ್ ಭಾವಚಿತ್ರಗಳ ಹಿನ್ನೆಲೆಯಲ್ಲಿ ಭೂದೃಶ್ಯಗಳನ್ನು ಚಿತ್ರಿಸಿ ಆನಂದಿಸುವ ಅಭ್ಯಾಸ ಆರಂಭವಾಗಿದ್ದು, ೧೬ನೇ ಶತಮಾನದಲ್ಲಿ. ಡಚ್ ಕಲಾವಿದರು ಭೂದೃಶ್ಯಗಳನ್ನೇ ವಿಶೇಷವಾಗಿ ಚಿತ್ರಿಸುವ ಪರಿಣಿತಿ ಪಡೆಯಲು ಪ್ರಯತ್ನಿಸಿದರು. ೧೭ನೇ ಶತಮಾನದಲ್ಲಿ ಡಚ್ ಕಲಾವಿದರಾದ ರೇಸ್‌ಡೇಲ್ ಮತ್ತು ಕಯ್ಪಿ ಹಾಗೂ ಪ್ರೆಂಚ್ ಸಂಜಾತರಾಗಿ ಇಟಲಿಯಲ್ಲಿ ನೆಲೆಗೊಂಡಿದ್ದ ಕ್ಲಾಡೆ ಮತ್ತು ಪೌಸ್ಸಿನ್ ಅಂದಿನ ಸಾಹಿತ್ಯದ ಸಂದರ್ಭಗಳ ಭೂದೃಶ್ಯಗಳನ್ನು ಚಿತ್ರಿಸಿದರು. ೧೮ನೆಯ ಶತಮಾನದಲ್ಲಿ ಪ್ರಾಮುಖ್ಯತೆ ಹೆಚ್ಚಿತು. ಭಾವಚಿತ್ರಗಳ ಹಿನ್ನೆಲೆಗೆ ಸುಂದರ ಭೂದೃಶ್ಯಗಳನ್ನು ಸಂಯೋಜಿಸಲ್ಪಟ್ಟಿರುತ್ತಿದ್ದವು. ಇಂಥ ಭೂದೃಶ್ಯ ವಿಭಾಗ ಇಟಲಿಯ ಕಲಾವಿದರಾದ ಕಾನಲೆಟ್ಟೋ, ಪಾನಿನಿ, ಗುಆರ್ಡಿ'[೨] 'ಜರ್ಮನಿಯ ಜಾಕೋಟ್, ಫಿಲಿಪ್–ಹಾಕೆರ್ಟ್, ಪ್ರಾನ್ಸಿನ ಹ್ಯೂಬರ್ಟ್, ರಾಬರ್ಟ್ ಮತ್ತು ಕ್ಲಾಡ್ ಜೋಸೆಫ್ ವೆರ್‌ನೆಟ್‌ರವರುಗಳಲ್ಲಿ ಕಾಣಿಸಿಕೊಂಡಿತು. ಭೂದೃಶ್ಯ ವಿಭಾಗದ ಸಂಪೂರ್ಣ ಫಲ ೧೮ನೆಯ ಶತಮಾನದ ಅಂತಿಮ ದಶಕಗಳಲ್ಲಿ ಹಾಗೂ ೧೯ನೆಯ ಶತಮಾನದ ಉದ್ದಕ್ಕೂ ಕಾಣಿಸಿಕೊಂಡಿತು. ೨೦ನೆಯ ಶತಮಾನದ ಆರಂಭದಲ್ಲಿ ಭಾರತದ ರಾಜರವಿವರ್ಮನ ತೈಲವರ್ಣ ಚಿತ್ರಗಳೇ ಅಲ್ಲದೆ ಓಲಿಯೋಗ್ರಾಫ್ ಕೃತಿಗಳಲ್ಲೂ ಭೂದೃಶ್ಯ ಕಲೆ ವೈಭವೀಕರಣಗೊಂಡಿದೆ. ಆದರೆ ಇಲ್ಲೂ ಮಾನವ ರೂಪಗಳ ಹಿನ್ನೆಲೆಯಲ್ಲಿ ಭೂದೃಶ್ಯಗಳು ಕಾಣಿಸಿಕೊಂಡವು. ಬಂಗಾಳದ ಪುನರುಜ್ಜೀವನ ಕಾಲದ ಕಲೆಯಲ್ಲೂ ನಂತರದ ಪಶ್ಚಿಮದ ಪ್ರಭಾವ ದೇಶೀಯ ಕಲಾವಿದರ ಮೇಲೂ ಆಯಿತು ಎಂದು ಹೇಳಬಹುದು.'[೩]

ಅಂದಿನಿಂದ ಭೂದೃಶ್ಯಗಳ ಚಿತ್ರಣ ಕಾರ್ಯ ಕರ್ನಾಟಕದಲ್ಲೂ ಕಲಾವಿದರ ಕೈಛಾಪುವಿನಿಂದ ಒಂದು ಹೊಸ ತಿರುವುಕಾಣಬಂದಿದೆ. ಅಂತಹ ಛಾಪನ್ನು ಬೀರಿದ ಕಲಾವಿದರಲ್ಲಿ ಒಬ್ಬರಾದ ಬಾಗೂರರನ್ನು ಉಲ್ಲೇಖಿಸುವುದರ ಜೊತೆಗೆ ಅವರ ಪ್ರಮುಖ ಕಲಾಕೃತಿಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಚಿತ್ರದುರ್ಗ ಕಲ್ಲುಬಂಡೆ, ನನ್ನ ಪ್ರವಾಸಿ ತಾಣವಾದ ಮನ್ನೂರು, ನೀರಗುಂದದ ನಿಸರ್ಗ ಚಿತ್ರಣದಲ್ಲಿ ಬಣ್ಣಗಳ ಸಂಯೋಜನೆ, ಚಿತ್ರಗಳ ಮುಖಾಂತರ ಸಮಾಜದ ಸ್ವಾಸ್ಥ್ಯವನ್ನು ಮನೋಧರ್ಮವನ್ನು ಈ ಚಿತ್ರದ ಮೂಲಕ ಕಾಪಾಡುವ ತಂತ್ರಗಾರಿಕೆಯನ್ನು ಹಿಡಿದಿಡಲಾಗಿದೆ ಎಂದಿದ್ದಾರೆ. ಇಲ್ಲಿ ಅಧ್ಯಯನಕ್ಕಾಗಿ ಆಯ್ದವುಗಳನ್ನು ಮಾತ್ರ ಕಾಣಬಹುದು.

೧. **ಬಾಗೂರಿನ ಚನ್ನಕೇಶವ ದೇವಸ್ಥಾನ:** ಈ ಕಲಾಕೃತಿಯು ಜಲವರ್ಣದಿಂದ ಸೆಳೆತಗೊಂಡ ಹಿನ್ನೆಲೆಯ ಗಗನದ ವರ್ಣದ ಬಳಕೆಯು ನೈಜ ಮತ್ತು ನವ್ಯತೆಯಿಂದ ಕೂಡಿದೆ. ದೇವಸ್ಥಾನದ ಮುಂಭಾದಲ್ಲಿ ದೊಡ್ಡದಾದ ಉಯ್ಯಾಲೆ ಕಂಬ, ಇದರ ಸ್ವಲ್ಪ ಹಿಂಭಾಗಕ್ಕೆ ಕಂಬಗಳಿಂದ ಕೂಡಿದ ದೇವಸ್ಥಾನ, ಹಿಂಬದಿಯ ಬಲಭಾಗದಲ್ಲಿ ಗೋಪುರಗಳು ಕಂಡುಬರುತ್ತವೆ. ಕಡಿಮೆ ವರ್ಣಗಳಿಂದ ರಚಿತವಾದರೂ ಆಕೃತಿಯು ನೈಜತೆಯಿಂದ ಹಿನ್ನೆಲೆ ಮುನ್ನೆಲೆಯ ಅಂತವನ್ನು ಸೂಚಿಸುವಂತ ಗುಣಗಳನ್ನು ಕಾಪಾಡಿಕೊಂಡು ಬಂದಿದೆ ಎಂದು ಹೇಳಬಹುದು.

ಈ ರೀತಿಯಾದ ದೇವಸ್ಥಾನಗಳನ್ನು ಕಲಾಕೃತಿಯಿಂದ ಸೆರೆಹಿಡಿದಿಟ್ಟರೆ ಇದು ಮುಂದೆ ಹಾಳಾದರೂ ಕಲಾಕೃತಿಯ ಉಳುವಿಕೆಯಿಂದ ಪುನರ್ ನಿರ್ಮಾಣ ಕಾರ್ಯವನ್ನಾದರೂ ಮಾಡಬಹುದು. ಅಥವಾ ಕಾಲಗತಿಸಿದಂತೆ ಇತಿಹಾಸದ ಕುರುಹುಗಳಂತೆ ಇದನ್ನು ಅವಲೋಕಿಸಬಹುದು ಎಂದು ಹೇಳಬಹುದು.

೨. ನೀರಗುಂದದ ಚಿತ್ರಣ: ಈ ನೀರಗುಂದ ಬಾಗೂರಿನ ಸಮೀಪದಲ್ಲಿದ್ದು ನೋಡುಗರಿಗೆ ಪ್ರಕೃತಿಯ ಆಸ್ವಾಧನೆಯನ್ನು ನೀಡುತ್ತದೆ. ಕಲಾಕೃತಿಯು ಜಲವರ್ಣದಿಂದ ರಚಿತವಾಗಿದ್ದು, ಮುನ್ನೆಲೆಯಾಗಿ ದೊಡ್ಡದಾದ ಕಟ್ಟಡ ಶಿಥಿಲಾವಸ್ಥೆಯಲ್ಲಿ ಕೂಡಿದ ಹಾಳಾಗಿ ನಿಂತಿರುವುದರ ಜೊತೆಗೆ ಚಿಕ್ಕ ಚಿಕ್ಕ ಪೊಟರೆ, ಗಿಡಗಳು ಇಲ್ಲಿ ರಚಿತವಾಗಿದೆ. ಹಿನ್ನೆಲೆಯಾಗಿ ದೂರದಲ್ಲಿ ದೃಷ್ಟಿಗೆ ಸಿಗುವಂತೆ ಒಂದು ಮನೆಯಿದ್ದು ಹಿನ್ನೆಲೆ ಮತ್ತು ಮುನ್ನೆಲೆಯ ಭಾಗದಲ್ಲಿ ಬಂಡೆಗಳಿಂದಾವೃತವಾದ ಸ್ಥಳಾವಕಾಶವನ್ನು ಇದರಲ್ಲಿ ಕಾಣಬಹುದು. ಕತ್ತಲೆ-ಬೆಳಕನ್ನು ಬಲಭಾಗದಿಂದ ಎಡಭಾಗಕ್ಕೆ ಹರಿದುಬಿಡಲಾಗಿದೆ.

ಸಂಯೋಜನಾ ಚಿತ್ರಗಳು

ಈ ಪದವು ದೃಶ್ಯಕಲಾ ಕ್ಷೇತ್ರದಲ್ಲಿ ಒಂದು ಔಚಿತ್ಯಪೂರ್ಣವಾದ ಅಂಶವಾಗಿದೆ. ಏಕೆಂದರೆ ಒಂದು ಕಲಾಕೃತಿಯನ್ನು ಉದಾಹರಣೆಗಾಗಿ ತೆಗೆದುಕೊಂಡರೆ ಕ್ಯಾನ್ವಸ್ ಒಳಗೊಂಡಂತೆ ಆಯ್ಕೆಯಾದ ವಿಷಯ ಬಳಸುವ ವರ್ಣ ಒಟ್ಟಾರೆ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕ್ಯಾನ್ವಸ್‌ನಲ್ಲಿ ಆಯ್ದ ವಿಷಯವನ್ನು ಜೋಡಣೆ ಮಾಡುವುದು ಎಂದರ್ಥ. ಹೀಗೆ ಜೋಡಣೆಯಾದ ವಿಷಯದಲ್ಲಿ ಎಲ್ಲಾ ರಸಗಳು ಆಸ್ವಾದನೆಯಿದ್ದು, ರಸರಹಿತವಾಗಿರಬಾರದು ಎಂದು ತಿಳಿದುಕೊಳ್ಳಬಹುದು. ಹಾಗೆ ಎಲ್ಲ ರಸಸಹಿತ ಕಲಾಕೃತಿಗಳನ್ನು ಕಲಾವಿದರಾದ ಬಾಗೂರರು ರಚಿಸಿದ್ದು ಇವರ ಕಲಾಕೃತಿಗಳು **ನವ್ಯ ಚಿತ್ರ**ಗಳಾಗಿದ್ದು, ಈ ಕೆಳಗಿನಂತಿವೆ.

'ಇವರ ಕಲಾಕೃತಿಗಳಲ್ಲಿ ಮೂರ್ತರೂಪ-ಅಮೂರ್ತರೂಪವಿದ್ದು, ಕಷ್ಟವೆನಿಸಬಹುದಾದ ಜಲವರ್ಣ ಚಿತ್ರಗಳು ಇವರ ಕೈಯಲ್ಲಿ ಅತ್ಯಂತ ನವುರಾಗಿ ಮೈದಳೆಯುತ್ತವೆ. ಮನಮೋಹಕವಾದ ವರ್ಣವೈಭವವನ್ನು ಸೃಷ್ಟಿಸುತ್ತವೆ. ವ್ಯಕ್ತಿ ಚಿತ್ರವೇ ಇರಲಿ, ದೃಶ್ಯ ಚಿತ್ರವೇ ಇರಲಿ, ಸಂಯೋಜನಾ ಚಿತ್ರವಿರಲಿ ಬಳಸುವ ಬಣ್ಣಗಳು ಪಕ್ವತೆಯನ್ನು, ನೈಜತೆಯನ್ನು ಯಥಾವತ್ತಾಗಿ ಪ್ರತಿನಿಧಿಸುವುದೇ ಅಲ್ಲದೆ ಚಿತ್ರಕ್ಕೆ ಇಂಬಾಗುವ ವೈಖರಿಯೂ ಹಿತವೆನಿಸುತ್ತದೆ. ನಮ್ಮ ಹಿರಿಯ ಕಲಾವಿದರಾದ ಎಂ.ಬಿ. ಪಾಟೀಲ, ಎಸ್.ಎಂ. ಪಂಡಿತ್, ಚಂದ್ರನಾಥ ಆಚಾರ್ಯರಂತೆ ರೆಂಬ್ರಾಂಟ್ ರೆಫೆಲ್ ಹಾಗೂ ಪೀಟರ್‌ಪಾಲ್ ರೂಬಿನ್ಸ್‌ನಂತೆ ಚಿತ್ರಿಸುವ ಕೌಶಲಿಕೆಯು ಬಾಗೂರರ ಕೈಗಳಿಗೆ ಅಭ್ಯಾಸದಲ್ಲಿ ದಕ್ಕಿರುವುದು ಕಂಡುಬರುತ್ತದೆ'[೪] ಎಂದು ತಿಳಿಸಿದ್ದಾರೆ.

'ಕಲೆ ಪ್ರಕಟವಾಗುವುದಕ್ಕೂ ಮುನ್ನ ಕಲಾವಿದ ಅನೇಕ ಮಾಧ್ಯಮಗಳಿಗೆ ಕಲ್ಪನೆಯ ಬೆನ್ನು ಹತ್ತಿ ಬಡವನಾಗುವುದಿದೆ. ವಿಶೇಷತೆಯೆಂದರೆ ಜಲವರ್ಣ ಕಷ್ಟಸಾಧ್ಯವಾದರೂ ತೈಲ ವರ್ಣದಂತೆ ದುಬಾರಿ ಹಣ ವಿನಿಯೋಗಿಸಬೇಕಾಗಿಲ್ಲ. ಅದಕ್ಕೆ ಜಲವರ್ಣ ಆಯ್ಕೆ ಮಾಡಿಕೊಂಡೆ ಎನ್ನುತ್ತಾರೆ. ಸಾಧಿಸುವ ಮನಸ್ಸುಳ್ಳವರಿಗೆ ಎಂಥದ್ದೆ ಕೆಲಸವೂ ಅಸಾಧ್ಯವಲ್ಲ. ಜಲವರ್ಣ ಸಂಯೋಜನೆ ಬಳಸುವ ಜಾಣ್ಮೆಯು ಚಿತ್ರಕಾರನ ಪಾಂಡಿತ್ಯವನ್ನು ನಿರೂಪಿಸುತ್ತದೆ ಎಂದು ನುಡಿಯುತ್ತಾರೆ.[೧೫]

ಉದಾಹರಣೆಗೆ ಪ್ರಸ್ತುತ ಅಧ್ಯಯನಕ್ಕೆ ಒಳಪಡಿಸಿಕೊಂಡಿರುವ ಕಲಾಕೃತಿಗಳಾದ 'ಬೇರುಗಳು' ಎಂಬ ಚಿತ್ರ ಸರಣಿಯಲ್ಲಿ ಬಳಸಿರುವ ವರ್ಣಗಳು ತಕ್ಷಣವೇ ವೀಕ್ಷಕನ ಗಮನ ಸೆಳೆದು ವಿಷಯವನ್ನು ಪ್ರತಿಧ್ವನಿಸುವಂತೆ ಮಾಡುತ್ತವೆ. ಅಲ್ಲದೇ ಒಂದರೊಳಗೊಂದು ಆಕಾರಗಳು ಮೇಳೈಸಿ ಕಲ್ಪನೆ ಇಂಬಾಗಿಸುತ್ತಾ ಹೊಸದೊಂದು ಭಾವವನ್ನು ನೋಡುಗನ ಮನದಲ್ಲಿ ಸೃಷ್ಟಿಸಿ ಕಲ್ಪನೆಯಲ್ಲಿ ವಿಹರಿಸುವಂತೆ ಮಾಡುತ್ತವೆ. ಚಿತ್ರಗಳು ಬಣ್ಣಗಳನ್ನು ಲೇಪಿಸಿಕೊಂಡು ಪಡೆಯುವ ಅರ್ಥ ವೈಶಿಷ್ಟ್ಯತೆಯು ಗಮನಾರ್ಹವಾಗುತ್ತದೆ. ಇಂಪ್ರೆಶನಿಸಂ ಶೈಲಿಯ ಮುಂದುವರೆದ ಭಾಗದಂತೆ ಕಂಡುಬಂದರೂ ಬಾಗೂರರು ತನ್ನ ತನದ ಪಾಂಡಿತ್ಯವನ್ನು ಮೆರೆಯುವಲ್ಲಿ ಸಮರ್ಥರೆನಿಸುತ್ತಾರೆ. ಆಕಾರಗಳನ್ನು ಸಂಯೋಜಿಸುವ ಒಟ್ಟಾಗಿ ಚಿತ್ರದ ವ್ಯಾಪಕ ಜಾಗೆಯನ್ನು ಅರ್ಥವತ್ತಾಗಿ ವ್ಯಾಪಿಸಿ ದೃಷ್ಟಿಯನ್ನು ಸೆಳೆಯುವ ಚಾತುರ್ಯವನ್ನು ತಮ್ಮ ಚಿತ್ರಗಾರಿಕೆಯಲ್ಲಿ ಬಣ್ಣ ಬಳಸುವುದರಲ್ಲಿ ಅನುಸರಿಸುವುದು ಅನುಭವಿಸವವರಿಗೆ ಮೆಚ್ಚಾಗುತ್ತದೆ.

ಪರಿಸರದ ಕುರಿತಾದ ಕೃತಿಗಳಲ್ಲಿ ಆರ್ತನಾದದ ದನಿಯಾಗಿ ಬಣ್ಣ ಬಳಸುವ ಇವರು ವಿಷಯದ ಆಂತರ್ಯಕ್ಕೆ ಕನ್ನಡಿ ಹಿಡಿದಂತಿವೆ. ಅಭಿವ್ಯಕ್ತಿಸುವ ಕೌಶಲ್ಯ, ದೂರದರ್ಶಿತ್ವ ಕರುಣೆಯನ್ನುಂಟುಮಾಡುವ ಚಿತ್ರಗಳ ವೈಕಲ್ಯತೆ, ನ್ಯೂನ್ಯತೆ, ಹಿನ್ನೆಲೆ, ಮುನ್ನೆಲೆ, ಒಟ್ಟಾಗಿ ಕಾಣುವ ಚಿತ್ರಸಂಯೋಜನೆಯು ದೃಢವಾಗಿ ಗೋಚರಿಸುವ ಸಾಮರ್ಥ್ಯವನ್ನು ನಿರೂಪಿಸುವಲ್ಲಿ ಸಿದ್ಧಿಯನ್ನು ಪಡೆದಿದ್ದಾರೆ.

ಕಷ್ಟವೆಂದು ಜಲವರ್ಣವನ್ನು ಅಭ್ಯಾಸ ಮಾಡದೆ ಹೋಗಿದ್ದಾರೆ. ಅದರ ಫಲ ಲಭ್ಯವಾಗುತ್ತಿರಲಿಲ್ಲವೆಂದೇ ಹೇಳಬೇಕು. ಜಲವರ್ಣದ ಬಳಸುವಿಕೆಯಲ್ಲಿನ ತಂತ್ರಗಾರಿಕೆ ಕುಂಚದ ಒಳಿತ, ಮಿಶ್ರಣಗೊಳಿಸುವ ಜಾಣ್ಮೆ, ಬಳಸುವ ಯೋಜನೆ, ಒಟ್ಟಾಗಿ ಚಿತ್ರವಾಗಿಸುವಲ್ಲಿ ತೆಗೆದುಕೊಳ್ಳಬಹುದಾದ ನಿರ್ಣಯವು ಕೃತಿಯಾಗಿ ಮೈದಳೆಯುವುದು ಮುದುಗೊಡುವ ಚಿತ್ರಾಕೃತಿಯಾಗುವುದು ನಿಜಕ್ಕೂ ರಸಿಕ ಜನಮನವನ್ನು ಗೆಲ್ಲುತ್ತದೆ. ಒಟ್ಟಾರೆ ಕಲಾರಸಿಕನಿಗೆ ಮುದ ನೀಡುವ ಜೊತೆಗೆ ಒಳಗಣ್ಣಿಗೆ ಹೊಸತೇನೋ ಗೋಚರಿಸುವಂತಹ ಈ ಪ್ರಯತ್ನಗಳಲ್ಲಿ ಸದಾ ನಿರತರಾಗಿರುವುದು ಗಮನಿಸಬಹುದು. ಈ ಒಳತುಡಿತ ಕಲಾವಿದನಿಗೆ ನಿರಂತರ ಹಾಗೂ ಅನಿವಾರ್ಯ ಎಂದಿದ್ದಾರೆ.

ಕೆಲವು ಕಲಾಕೃತಿಗಳ ವಿಶ್ಲೇಷಣೆ

'ಕಲಾವಿದ ಮಾರ್ಕಂಡೇಯ ಪರಿಶ್ರಮವಿರುವ ಉತ್ಸಾಹಿ. ಅಷ್ಟೇ ಭಾವುಕ, ಚಿತ್ರರಚನೆ, ಕಾವ್ಯರಚನೆ, ಛಾಯಾಗ್ರಹಣ ವಿಭಾಗದಲ್ಲಿ ಅವರ ಕೃಷಿ ನಡೆದಿದೆ. ಪ್ರೊ. ದೊಡ್ಡರಂಗೇಗೌಡರು ಹೇಳುವ ಮಾತಿನಲ್ಲಿ ಮಾರ್ಕಾಂಡೇಯ ಕುಂಚದೊಡನಾಡಿದವರು. ರಂಗನ್ನು ಮಾತನಾಡಿಸಿದವರು, ಗೆರೆಗಳಂತರಂಗ ಬಗೆದವರು. ನುಡಿಗಡಲ ಮುಡಿ ನೋಡಿ ಆಮೋಡಿ ಅರಿಯುವ ಕುತೂಹಲದಲ್ಲಿ ಅಸಂಖ್ಯ ಭಾವಗಳಿಗೆ ನುಡಿ ಹಂದರ ನಿರ್ಮಿಸುವ ತವಕ ತೋರಿದವರು. ಇವರ ಅದೇಷ್ಟೋ ಚಿತ್ರಗಳು ಒಂದಕ್ಕಿಂತ ಒಂದು ಸುಂದರ, ಅರ್ಥಪೂರ್ಣ. ಹಸಿರನ್ನು ನುಂಗಹೊರಟ ರಾಕ್ಷಸ ಬಾಹುಗಳು ಬಯಲಾದ ಕಾನನದ ರೋಧನ, ಕೊಡಲಿ, ಗರಗಸ ಹಿಡಿದ ಕಾಡುಗಳನ್ನು ಚಿತ್ರಿಸುತ್ತಲೇ ಪರಿಸರ ವಿನಾಶದ ಕ್ರೌರ್ಯ ಬಿಂಬಿಸುವ ಚಿತ್ರಗಳು, ಬಾಗೂರರು ಪರಿಸರದ ಚಿತ್ರರಚನೆಯಲ್ಲಿ ವಿಶೇಷ ಪರಿಣಿತಿಯನ್ನು ಹಿಡಿದಿಟ್ಟಿದ್ದಾರೆ'[೧೬] ಎಂದು ಹೇಳಿದ್ದಾರೆ.

ಈ ಮೇಲೇಳಿದ ಅಂಶಗಳನ್ನು ಇವರ ಕಲಾಕೃತಿಗಳಲ್ಲಿ ಕಾಣಬಹುದು. ಪರಿಸರದ ನಾಶದಿಂದ ಉಂಟಾಗುವ ಗುಣಾವಗುಣಗಳನ್ನು ಕಣ್ಣಿಗೆ ಕಟ್ಟುವಂತೆ ರಚನೆ ಮಾಡಿದ್ದು, ನೋಡುಗರನ್ನು ಭಾವುಕರನ್ನಾಗಿ ಮಾಡಿಸುವಂತಿದೆ. ಪ್ರಸ್ತುತ ಆಧುನಿಕ ಜಗತ್ತಿನಲ್ಲಿ ಮನು ಜೀವಿಸುವುದಕ್ಕೋಸ್ಕರ ಪರಿಸರವನ್ನು ಅವಲಂಬನೆ ಮಾಡಿದ್ದಾನೆ ಮತ್ತು ಅದನ್ನು ತನ್ನ ಹಿತಕ್ಕೋಸ್ಕರ ಇತಿ–ಮಿತಿ ಇಲ್ಲದೆ ಬಳಸಿಕೊಳ್ಳುವುದರಿಂದ ಪ್ರಕೃತಿ ವಿಕೋಪಗಳು ನಡೆಯುತ್ತಿವೆ. ಇದರಿಂದ ದಿನನಿತ್ಯದ ಜೀವನ ಅಸ್ತವ್ಯಸ್ಥವಾಗುತ್ತಿದೆ. ಆರೋಗ್ಯ–ಅನಾರೋಗ್ಯ ಎಲ್ಲವೂ ಬಂದೊದಗಿ ಜೀವದ ಏಳಿಗೆ ಅಸಾಧ್ಯ ಎಂಬ ಪೂರ್ಣ ಅಂಶಗಳನ್ನು ಈ ಕಲಾಕೃತಿಯಲ್ಲಿ ಹಿಡಿದಿಟ್ಟಂತಿದೆ. ಆದ್ದರಿಂದ ಈಗಲೂ ಪರಿಸರವನ್ನು ಪ್ರೀತಿಸೋಣ, ಬೆಳೆಸೋಣ ಎಂಬ ಉಕ್ತಿಯನ್ನು ಸಾರುವಂತಹ ಸಾರವನ್ನು ಇವು ತಿಳಿಸುತ್ತಿವೆ ಎಂಬುದನ್ನು ಈ ಅಧ್ಯಯನಕ್ಕೆ ಆಯ್ಕೆಮಾಡಿಕೊಂಡ ಕಲಾಕೃತಿಗಳಲ್ಲಿ ಕಾಣಬಹುದು.

ಬೇರುಚಿತ್ರ–೧: ಈ ಕಲಾಕೃತಿಯು ಬಹುವರ್ಣ ಲೇಪಿತ ಹಲವು ಕಡಿದ ಮರದ ಬುಡಗಳನ್ನು ಹೊಂದಿದೆ. ಬುಡದ ಮೇಲ್ಮೈ ಮೇಲೆ ಜೀವಿಗಳು ಅಹತಪಿಸುವಂತೆ, ಮುದುಡಿ ಅಸಹಾಯಕರಂತೆ ಕಾಣುತ್ತಿದ್ದು, ಆಕೃತಿಯ ಮೇಲ್ಭಾಗದಲ್ಲಿ ಪ್ರಕೃತಿಯಲ್ಲಿ ವಿಕೋಪವನ್ನುಂಟು ಮಾಡುವಂತ ರಾಕ್ಷಸ ಮುಂಡಗಳು ತನ್ನ ನಾಲಿಗೆಯನ್ನು ಹಾರಹಾಕಿ, ಪರಿಸರವನ್ನು ನುಂಗುವಂತಹ ವಿಚಾರವನ್ನು ಕಣ್ಣಿಗೆ ಒತ್ತುವಂತೆ ಕಟ್ಟಿಡಲಾಗಿದೆ. ಒಟ್ಟಾರೆಯಾಗಿ ಪ್ರಕೃತಿ ಹಾಳಾದರೆ ಜೀವಿಗೆ ಎಲ್ಲಾ ರೀತಿಯಲ್ಲೂ ಅನಾನುಕೂಲ ಕಟ್ಟಿಟ್ಟ ಬುತ್ತಿ. ಇದನ್ನು ರಕ್ಷಿಸಬೇಕು ಎನ್ನುವ ಹೊಣೆಯನ್ನು ಪ್ರತಿಯೋರ್ವರು ಚಿಂತಿಸಬೇಕು ಎಂದು ಹೇಳುವಂತಿದೆ.

ಬೇರುಚಿತ್ರ–೨: ಈ ಕಲಾಕೃತಿಯನ್ನು ಜಲವರ್ಣದಿಂದ ರಚಿಸಿದ್ದು, ಓರ್ವ ಬೃಹತ್ ಆಕಾರದ ಮನುಜೀವ ಪ್ರಕೃತಿಯನ್ನು ಸ್ವ–ಹಿತಕ್ಕೆ ಬಳಸಲು ಮುಂದಾದಾಗ ಇದರಿಂದ ನೋವುಂಡ

ಜೀವಿಗಳು ಆಕೃತಿಯ ಭೂತಾಳಿಕೆಯ ಮುಂಭಾದಲ್ಲಿ ಪರಿತಪಿಸುವಂತೆ ಅಥವಾ ನಾಶಮಾಡ ಹೊರಟ ಓರ್ವನನ್ನು ಪಡೆಯುವಂತೆ ಕಾಣುತ್ತದೆ. ಹಾಗೂ ಈ ಓರ್ವನ ಕೈಯಲ್ಲಿರುವ ಕೊಡಲಿಯ ಮೊನಚು ಭಾಗದಲ್ಲಿ ರಕ್ತಸುರಿಯುತ್ತಿರುವಂತೆ ಕಾಣುತ್ತಿದ್ದು ವೃಕ್ಷವನ್ನು ಕಡಿದರೆ ನರಜೀವಿಗೆ ಹಾನಿಮಾಡಿದಂತೆ ಎಂದು ಹೇಳುವಂತಿದೆ.

ಬೇರುಚಿತ್ರ-೩: ಈ ಕಲಾಕೃತಿಯು ಜಲವರ್ಣದಿಂದ ಸೃಜಿಸಿದ್ದು, ನೋಡುಗನಿಗ ಆಹ್ಲಾದವನ್ನುಂಟು ಮಾಡುವುದರ ಜೊತೆಗೆ ಅಂತರಾಳದ ಭಾವನೆಗಳನ್ನು ಕೆದುಕುವಂತೆ ಕಾಣುತ್ತಿದೆ. ಇದರಲ್ಲಿ ಕಡಿದ ಮರದ ಸಮತಟ್ಟಾದ ಮೇಲ್ಮೈ ಮೇಲೆ ಜೀವಿಗಳು ತಪಿಸಿರುವಂತೆ ಮತ್ತು ಆಹಾರದ ಕೊರತೆಯಿಂದಾಗಿ ಎಲೆಯನ್ನು ಭಕ್ಷಿಸುವಂತೆ ಕಾಣುತ್ತಿದ್ದು, ಈ ಕೊಂಬೆಗಳ ನಡುವೆ ಕಾರ್ಖಾನೆಯಲ್ಲಿ ಉಗುಳುವ ಇಂಗಾಲದ ಡೈಯಾಕ್ಸೈಡ್‌ನಂತೆ, ಗಗನಕ್ಕೆ ಚುಮ್ಮುತ್ತಿರುವ ಹೊಗೆ, ಇನ್ನೂ ಈಕಲಾಕೃತಿ ಭೂತಾಳಿಕೆ ಒಣಗಿದ ರೂಪದಲ್ಲಿದ್ದು, ಒಟ್ಟಾರೆಯಾಗಿ ಆಳಾದ ಪರಿಸರದಿಂದ ಉಂಟಾಗುವ ಅನಾನುಕೂಲವನ್ನು ಒತ್ತಿ ಹೇಳುವಂತಿದೆ.

ಬೇರುಚಿತ್ರ-೪: ಈ ಕಲಾಕೃತಿಯನ್ನು ಜಲವರ್ಣದಿಂದ ಸೆರೆಹಿಡಿದಿದ್ದು, ಓರ್ವ ಆಸೆಯುಳ್ಳ ಜೀವಿಯು ತನ್ನ ಸ್ವ ಹಿತಕ್ಕಾಗಿ ಬಳಸಿಕೊಂಡಾಗ ಮುಂದೆ ಜೀವಿಸಲು ಏನೂ ಸಿಗದೆ ಇದ್ದಾಗ ಅಸ್ಥಿಪಂಜರದಂತೆ ಚಿತ್ರಿಸುವ ಚಿತ್ರಣ ನೋಡುಗನನ್ನು ಭಾವುಕನನ್ನಾಗಿ ಮಾಡುವಂತಿದೆ. ಪರಿಸರದಿಂದ ನಮ್ಮ ಜೀವನೋಪಾಯಕ್ಕೆ ಎಷ್ಟು ಬೇಕು ಅಷ್ಟು ಪಡೆದು ಮುಂದಿನ ಪೀಳಿಗೆಗೆ ಉಳಿಸುವ ಸಾರವನ್ನು ಈ ಕಲಾಕೃತಿ ತಿಳಿಸುವಂತಿದೆ.

ಆಕ್ರಂದನ ಚಿತ್ರ-೧ : ಈ ಕಲಾಕೃತಿಯು ಅಮೂರ್ತ ರೂಪದಿಂದ ಕೂಡಿದ್ದು, ಜಲವರ್ಣದಿಂದ ಹಿನ್ನೆಲೆ-ಮುನ್ನೆಲೆಯನ್ನು ಸೂಕ್ಷ್ಮವಾಗಿ ಚಿತ್ರಿಸಲಾಗಿದೆ. ಇದರಲ್ಲಿ ಮೂರ್ತತೆ ಇಲ್ಲದಿದ್ದರೂ ಅಮೂರ್ತತೆಯಿಂದ ಇದು ವೀಕ್ಷಕನ ಮನಸ್ಸನ್ನು ತಣಿಸುವುದರ ಜೊತೆಗೆ ಯೋಚನಾಸಕ್ತಿ ಕಡೆಗೆ ಕರೆದೊಯ್ಯುವಂತಿದೆ. ಈ ಆಕೃತಿಯಲ್ಲಿ ಮುರುಕು ಮುರುಕಾದ ಒಣಗಿದ ಮರದ ತುಂಡುಗಳನ್ನು ಕಾಣುವುದರಿಂದ ಇಲ್ಲಿ ಪರಿಸರ ಹಾಳಾಗಿದೆ. ಆದ್ದರಿಂದ ಸಮೃದ್ಧತೆಯ ಆಹಲಾಪನೆಯಿಲ್ಲ. ಆದ್ದರಿಂದ ಆಕ್ರಂದಿಸುವುದು, ರೋಧಿಸುವುದು ಸಹಜವಾಗಿ ಕಾಣಬರುತ್ತದೆ. ಇದರಿಂದ ಎಚ್ಚೆತ್ತಕೊಳ್ಳಬೇಕು ಎಂಬ ಮಾತನ್ನು ತಿಳಿಸುವಂತಿದೆ.

ಚಿತ್ರ-೨ : ಈ ಕಲಾಕೃತಿಯು ಜಲವರ್ಣದಿಂದ ರಚಿತವಾಗಿದ್ದು, ಆಸ್ವಾದಕರಿಗೆ ಸೌಂದರ್ಯವನ್ನು ಕೊಡುವುದರ ಜೊತೆಗೆ ನೇರವಾಗಿ ಪರಿಸರ ವಿನಾಶದ ಅಂಚಿನ ತುಣುಕುಗಳನ್ನು ತಿಳಿಸುವಂತಿದೆ. ಈ ಜಗತ್ತು ಆಧುನಿಕರಣದಿಂದ ಕೂಡಿದ್ದು, ಕಾಡನ್ನು ನಾಶಮಾಡಿ ನಾಡನ್ನು ಸೇರುತ್ತಿದ್ದಾರೆ. ಇದರಿಂದ ಹಳ್ಳಿಗರೇ ಎಲ್ಲಾ ರೀತಿಯ ನೋವನ್ನು ಬಡತನವನ್ನು ಅನುಭವಿಸಬೇಕು. ಕಾಯಿಲೆ, ಒಟ್ಟಾರೆ ದಿನನಿತ್ಯದ ಬದುಕಿನಲ್ಲಿ ನೋವಿನ ಸರಮಾಲೆಯನ್ನು ಕಣ್ಣಿಗೆ ಕಟ್ಟುವಂತಿದೆ. ಆಧುನೀಕರಣ,

ಜಾಗತೀಕರಣ ನಮ್ಮನ್ನು ಎಲ್ಲಾ ಕಷ್ಟಗಳಿಗೆ ಎಡೆಮಾಡಿಕೊಡುವಂತಿದೆ. ಇದರಿಂದ ಮನುಜೀವ ಉಪಯುಕ್ತ ಜೀವನ ರೂಪಿಸಿಕೊಳ್ಳಲು ಪರಿಸರ ಬೆಳೆಸುವುದರ ಜೊತೆಗೆ ರಕ್ಷಣೆ ಮಾಡಿದರೆ ನಾವು ಸಮೃದ್ಧಿಯ ಹಾದಿಯನ್ನು ತುಳಿಯಬಹುದು ಎಂದು ಹೇಳುವಂತಿದೆ.

ಚಿತ್ರ-೩ : ಈ ಕಲಾಕೃತಿಯು ಜಲವರ್ಣದಿಂದ ರಚಿಸಲ್ಪಟ್ಟಿದೆ. ಈ ಕಲಾಕೃತಿಯೂ ಸಹ ಪರಿಸರದ ವಿಷಯವನ್ನೊಳಗೊಂಡಿದ್ದು, ಓರ್ವ ಪರಿಸರದ ಕುಟುಂಬ ಬಡತನದಲ್ಲಿ ಕೂತು ಹುಯಿಲುತ್ತಿವೆ. ಏಕೆಂದರೆ ಮೊದಲೆ ಪರಿಸರ ಹಾಳಾಗಿದ್ದು, ಕಾಲಕಾಲಕ್ಕೆ ಮಳೆಯಿಲ್ಲದ ಕಾರಣ, ನಾವು ಜೀವಿಸಲು ಆಹಾರ, ತೊಡುಗೆ, ಅಥವಾ ದಿನನಿತ್ಯದ ಬಳಕೆಯ ಅವಶ್ಯಕತೆಗಳು ಸಿಗುತ್ತಿಲ್ಲವೆಂದು ಚಿಂತಿಸುತ್ತಿವೆ. ಆಕೃತಿಯ ಹಿಂಬದಿಯಲ್ಲಿ ಒಣಭೂಮಿಯಿದ್ದು, ಬರದ ಛಾಯೆಯನ್ನು ಸೂಚಿಸುತ್ತದೆ. ಹಿನ್ನೆಲೆಯಲ್ಲಿ ಹಸಿರಿನ ಛಾಯೆಯೂ ಸಹ ಕೆಂಪಾಗಿ ಮುದುಡುತ್ತಿದೆ. ಇನ್ನು ಆಕೃತಿಯ ಬಲಭಾಗದಲ್ಲಿ ಆಧುನಿಕರಣದ ಕಾಲವಾಗಿದ್ದು, ಕೃತಕವಾದ ಹಸಿರು ಛಾಯೆ ಕಾಣಬರುತ್ತಿದೆ. ಹಾಗೂ ಆಕೃತಿಯ ಮುಂಭಾಗದ ಒಂದು ಮರದ ಮೇಲ್ಮೈ ಮೇಲೆ ಬೆಳೆದಿರುವಂತಹ ಬೂಷ್ಟನ್ನು ಭಕ್ಷಿಸಲು ತಾಮುಂದು ನಿಮುಂದು ಎಂದು ಜೀವಿಗಳು ಕಾಪಾಡುತ್ತಿವೆ ಎಂಬಂತೆ ಕಾಣುತ್ತಿದೆ.

ಒಟ್ಟಾರೆಯಾಗಿ ಈ ಆಕೃತಿಯಲ್ಲಿ ಪರಿಸರವೇ ತನ್ನ ಉಳಿವಿಗಾಗಿ ಏನು ಮಾಡಬೇಕು ಎಂಬ ಯೋಚನೆಯಲ್ಲಿ ತೊಡಗಿದಂತೆ ಕಾಣುತ್ತಿದ್ದು ಇದು ಬರಿ ಪರಿಸರದ ಯೋಚನೆಯಲ್ಲ, ಜೀವಿಯ ಯೋಚನೆಯು ಆಗಬೇಕು ಎಂದು ಹೇಳಬಹುದು.

ಚಿತ್ರ-೪ : ಈ ಕಲಾಕೃತಿಯು ಅಮೂರ್ತರೂಪದ್ದಾಗಿದ್ದು, ನೀಲಿವರ್ಣದಿಂದ ಹೆಚ್ಚಾಗಿ ಕೂಡಿದ್ದು, ಕಡಿದಂತ ಮರಗಳಲ್ಲಿನ ಬೇರುಗಳು ಒಣಗಿ, ತನ್ನ ಅಸ್ತಿತ್ವವನ್ನು ಕಳೆದುಕೊಂಡಂತಹ ವ್ಯವಸ್ಥೆಯು ಇದ್ದು, ಹಿನ್ನೆಲೆಯ ಸ್ಥಳಾವಕಾಶದಲ್ಲಿ ಒಣಗಿದ ಅಸ್ಥಿತ್ವವಿದೆ. ಈ ಕಲಾಕೃತಿ ಕಲಾಸಕ್ತರಲ್ಲಿ ಸೌಂದರ್ಯತೆಯನ್ನು ಕಂಡರೂ ತನ್ನ ಮನಸ್ಸಿನ ತುಮಲಗಳನ್ನು ಹೊರಹಾಕುವಂತೆ ಮಾಡುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ ಮುತ್ತು ಕಳೆದರೆ ಸಿಕ್ಕಿತು, ಹೊತ್ತು ಕಳೆದರೆ ಸಿಕ್ಕೀತೆ? ಎಂಬಂತೆ ಒಮ್ಮೆ ಆಳಾದ ಪರಿಸರವನ್ನು ಮರುಸೃಷ್ಟಿಸಲು ಸಾಧ್ಯವಿಲ್ಲ. ಅದನ್ನು ನಾವು ಕಾಪಾಡಬೇಕು ಎಂದು ಹೇಳುವಂತಿದೆ.

ರಕ್ಷಾಪುಟ ವಿನ್ಯಾಸ ಚಿತ್ರಗಳು

ರಕ್ಷಾಪುಟವೆಂದರೆ ಹೆಸರೇ ಹೇಳಿರುವಂತೆ ರಕ್ಷಣೆ ಎಂದಾಗುತ್ತದೆ. ಈ ರಕ್ಷಣೆಯ ಫಲಕದ ಮೇಲೆ ಒಡಲಿನ ವಿಷಯ ಕುರಿತು ವಿನ್ಯಾಸಗೊಳಿಸಿ ರಕ್ಷಣಾ ಪುಟ ಅಥವಾ ಮುಖಪುಟವನ್ನಾಗಿಸುವುದು ಎಂದರ್ಥ. ಈ ಮುಖಪಟದ ವಿನ್ಯಾಸವು 'ವಿಜಯನಗರ ಕಾಲದಲ್ಲಿ ಲಕ್ಕಣ್ಣ ದಂಡೇಶ ಮತ್ತು ಇತರರು ಪುರಾತನ ವಚನಕಾರರ, ಇತರರ ವಚನಗಳನ್ನು ಸಂಗ್ರಹಿಸಿ ಪುನರ್ ವ್ಯಾಖ್ಯಾನಿಸುವ ಬೃಹತ್ ಯೋಜನೆಯೊಂದಿಗೆ ಪ್ರಾರಂಭವಾದ 'ಹಸ್ತಪ್ರತಿ ರಚಿಸುವ ಕ್ರಾಂತಿ ಮುಂದಿನ ಶತಮಾನಗಳಲ್ಲಿ

ಅಸಂಖ್ಯ ವಚನ, ಪುರಾಣ ಇತ್ಯಾದಿ ವಿಷಯಗಳನ್ನೊಳಗೊಂಡ ಸುಮಾರು ಹಸ್ತಪ್ರತಿ ರಚನೆಗೆ ಕಾರಣವಾಯಿತು. ಹಸ್ತಪ್ರತಿಗಳನ್ನು ಸುರಕ್ಷಿತವಾಗಿಡಲು ಹಸ್ತಪ್ರತಿಕಾರರು ಕೆಲವು ಹಸ್ತಪ್ರತಿಗಳ ಮೊದಲ ಮತ್ತು ಕೊನೆಯ ಪುಟಗಳ ಮೇಲೆ ಆಯಾ ಪಂಥಗಳ ದೇವ ದೇವತೆಗಳ ಅಥವಾ ಭಕ್ತರ ಚಿತ್ರಗಳನ್ನು ವರ್ಣಗಳಲ್ಲಿ ಬಿಡಿಸಿರುವುದುಂಟು. ವರ್ಣಚಿತ್ರಗಳಿಂದ ಕೂಡಿದ ಈ ರಕ್ಷಾಫಲಕಗಳ ಚಿತ್ರಕಲೆಯೂ ದಖ್ಖನಿ ಚಿತ್ರಕಲೆಯ ಮುಂದುವರೆದ ರೂಪ'[೧೭] ಎಂದು ಹೇಳಬಹುದು.

ಇಂತಹ ವಿನ್ಯಾಸ ಜಗತ್ತನ್ನು ಕೈಯಲ್ಲಿಡಿದಿರುವ ಪ್ರಸ್ತುತ ಕರ್ನಾಟಕ ಪಠ್ಯಪುಸ್ತಕ ನಿರ್ದೇಶನಾಲಯದಲ್ಲಿ ನಿಯೋಗಿಯಾಗಿರುವ ಬಾಗೂರು ಮಾರ್ಕಾಂಡೇಯ ಅವರು 'ಪ್ರಕೃತಿ ಪ್ರಾಣಿ, ವ್ಯಕ್ತಿ ಚಿತ್ರಗಳನ್ನು ಮುದ್ದಾಗಿ ರಚಿಸುತ್ತಿದ್ದ ಕಲೆ ಬೆಳಗಿದ್ದೇ, ಪಠ್ಯಪುಸ್ತಕಗಳಲ್ಲಿ ಕನ್ನಡ, ತಮಿಳು, ತೆಲುಗು, ಸೇರಿದಂತೆ ೨೦-೨೫ ಸಾವಿರದ ಮೇಲೆ ಮುಖಪುಟ ಮತ್ತು ಒಳಪುಟ ವಿನ್ಯಾಸ ಮಾಡಲಾಗಿದೆ ಎಂದು ಸ್ಮರಿಸಿಕೊಳ್ಳುತ್ತಾರೆ.

ಕಾಲಿಗೆ ಗೆಜ್ಜೆ ಚೆಂದ ಎಂಬಂತೆ ಯಾವುದೇ ಒಂದು ವಸ್ತುವಿಗೆ ವಿನ್ಯಾಸ ಬಹುಮುಖ್ಯವಾದದ್ದು. ಆಗಿದ್ದಾಗ ಅದು ಈ ಆಧುನಿಕ ಜಗತ್ತಿನಲ್ಲಿ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸಾಧ್ಯ. ಇಲ್ಲವಾದರೆ ಆ ವಸ್ತುವಿನ ಒಡಲಾಳದ ಸೌಂದರ್ಯ ಏನೇ ಇದ್ದರೂ ಬೆಳಕಿಗೆ ಬರಲಾರದು ಅಥವಾ ಹಾಳಾಗುತ್ತದೆ ಎಂದು ಹೇಳಬಹುದು. ಏಕೆಂದರೆ ವಿನ್ಯಾಸದ ಜೊತೆಗೆ ರಕ್ಷಣಾ ಕವಚ ಇಲ್ಲದಿದ್ದರೆ ವಿಫಲತೆಯ ಹಾದಿಯನ್ನು ಮುಟ್ಟಬಹುದೆನ್ನಬಹುದು. ಹಾಗೆಯೇ ಬಾಗೂರರು ವಿನ್ಯಾಸಗೊಳಿಸಿರುವ ರಕ್ಷಾಪುಟಗಳ ಆಯ್ದ ಕೆಲವನ್ನು ಮಾತ್ರ ಇಲ್ಲಿ ಕಾಣಬಹುದು.

ರಾಧಾ ಮಾಧವರ ಒಲುಮೆ ಚಿತ್ತಾರ:

ಈ ಕಲಾಕೃತಿಯ ವಿನ್ಯಾಸವನ್ನು ಬಾಗೂರವರು ತಯಾರಿಸಿದ್ದು, ಡಾ. ಕೆ.ಎಸ್. ನಿಸ್ಸಾರ ಅಹಮ್ಮದ್ ಮತ್ತು ಡಾ. ದೊಡ್ಡರಂಗೇಗೌಡರು ಬೆನ್ನುಡಿಯನ್ನು ಲಿಖಿಸಿದ್ದಾರೆ. 'ಕೃಷ್ಣ ರಾಧೆಯರ ಸರಸ, ಸಲ್ಲಾಪ, ಕಾತರ ವಿಹ್ವಲತೆ ಮತ್ತು ಏಕಾಂಗಿತನ ಅತ್ಯಂತ ಹೃದಯಂಗಮಯವಾಗಿ ಅಭಿವ್ಯಕ್ತಿಯಾಗಿದೆ.'[೧೮] ಮತ್ತು ಇದರಲ್ಲಿ ಲಿಖಿತವಾಗಿರುವ 'ಕವಿತೆಗಳನ್ನು ಐದು ಜನ ಸುವಿಖ್ಯಾತ ಸುಗಮ ಸಂಗೀತ ನಿರ್ದೇಶಕರು ಸುಶ್ರಾವ್ಯವಾದ ಮಟ್ಟುಗಳನ್ನು ಹಾಕಿ ಸಾಂದ್ರಿಕೆ (ಸಿಡಿ)ಯ ರೂಪದಲ್ಲಿ ಕನ್ನಡಿಗರಿಗೆ ಅರ್ಪಿಸಿದ್ದಾರೆ'[೧೯] ಎಂದು ಕೆ.ಎಸ್.ನಿಸ್ಸಾರ್ ಅಹಮ್ಮದ್ ಅವರು ತಿಳಿಸಿದ್ದಾರೆ.

ಇನ್ನು ಈ ಕಲಾಕೃತಿಯ ವಿನ್ಯಾಸವು ತಿಳಿಹಸಿರು ವರ್ಣದಿಂದ ಕತ್ತಲು ಬೆಳಕಿನ ಛಾಯೆಯನ್ನು ಹೊಂದಿದ್ದು, ಈ ಪುಟಕ್ಕೆ ಹೊಂದಾಣಿಕೆಯಾಗಿರುವಂತಹ ರಾಧಾಮಾಧವರ ಒಲುಮೆ ಚಿತ್ತಾರದ ತಲೆಬರಹ ಕಾಣಬರುತ್ತದೆ. ಇದರ ಕೆಳಗೆ ಕಡಿಮೆ ರೇಖೆಗಳಿಂದ ವರ್ಣಾವೃತವಾದ ಕೃಷ್ಣ-ರಾಧೆಯ ಆಕೃತಿಗಳು ತಲೆಯ ಹಿಂಭಾಗ ಹೊಂಬೆಳಕಿನ ವರ್ಣದ ಛಾಯೆ ಈ ಎಲ್ಲದಕ್ಕೂ

ಹಿಂಬದಿಯ ದೂರದಲ್ಲಿ ಅರಮನೆಯ ಆಕೃತಿಗಳು ಕಾಣಸಿಗುತ್ತವೆ. ಇನ್ನು ಎಡಬದಿಯಲ್ಲಿ ಡಾ. ಕೆ.ಎಸ್.ನಿಸ್ಸಾರ್ ಅಹಮ್ಮದ್ ಮತ್ತು ಡಾ. ದೊಡ್ಡರಂಗೇಗೌಡರ ಬೆನ್ನುಡಿ ಬರಹ ಮತ್ತು ರಾಧಾಕೃಷ್ಣನ ರೇಖಾಚಿತ್ರ ಹಾಗೆಯೆ ಮೇಲ್ಭಾಗದಲ್ಲಿ ಬಾಮಾರವರ ಭಾವಚಿತ್ರವನ್ನು ಈ ರಕ್ಷಾಪುಟದಲ್ಲಿ ಕಾಣಬಹುದು.

ಸುವರ್ಣ ಪುತ್ಥಳಿ

ಈ ಆಕೃತಿಯ ವಿನ್ಯಾಸವು ಹೆಸರೆ ಹೇಳಿರುವಂತೆ ಸುವರ್ಣದ ಕವಚನ್ನೋದ್ದೀಸಿ ಕಡಿಮೆ ರೇಖೆಗಳಿಂದ ವಿನ್ಯಾಸಗೊಂಡಿರುವ ನಿಸರ್ಗದ ಜೊತೆ ಓರ್ವ ಸ್ತ್ರೀ ಆಸಿನರಾಗಿರುವಂತೆ ಭಾಮಾರವರು ನೋಡುಗರ ಭಾವನೆಗಳು ಅರಳುವಂತೆ ಚಿತ್ರಿಸಿದ್ದಾರೆ. ತಲೆ ಬರಹವು ಸುವರ್ಣವನ್ನು ಹೊಂದಿರಬಹುದು ಎಂಬಂತೆ ಲೇಖಿಸಿದ್ದಾರೆ. ಇನ್ನು ಎಡಬದಿಯಲ್ಲಿ ಬೆನ್ನುಡಿಯಾಗಿ ಕೆ.ಎಸ್.ನಿಸ್ಸಾರ್ ಅಹಮ್ಮದ್ ಅವರು ಹೆಣ್ಣಿನ ಬಗೆಗಿನ ಬಾಗೂರರು ಒಟ್ಟು ಅಭಿಪ್ರಾಯ ಆರೋಗ್ಯಕರವಾಗಿದೆ. ಸಹಾನುಭೂತಿಶೀಲವಾಗಿದೆ. ಹೆಣ್ಣಿನ ಅತಿ ಸೂಕ್ಷ್ಮ ಹಾಗೂ ಸುಕೋಮಲ ಮನೋರಚನೆಯ ಅರಿವು ಈ ಕವಿಗೆ ಇರುವುದು ಇಲ್ಲಿನ ಹಲವು ಕವಿತೆಗಳಲ್ಲಿ ಪ್ರತಿಬಿಂಬವಾಗಿದೆ. ಇನ್ನೂ ಈ ಕವಿತೆಗಳಿಗೆ ಇವರು ರಚಿಸಿರುವ ಕೆಲವು ಸ್ವೋಪಜ್ಞ ಬಗೆಯ ರೇಖಾಚಿತ್ರಗಳು ಭಾವವ್ಯಂಜನೆಯನ್ನು ಬೆಂಬಲಿಸುತ್ತವೆ. ಒಟ್ಟಿನಲ್ಲಿ ಕನ್ನಡಿಗರಿಗೆ ಸುವರ್ಣ ಪುತ್ಥಳಿ ಕಲೆ, ಕಾವ್ಯ ಎರಡೂ ಸಮರಸತೆಯಿಂದ ಮೇಳೈಸಿರುವ ಅಪರೂಪದ ಒಂದು ಕವನ ಸಂಗ್ರಹ ಎಂದು ಬರೆದಿದ್ದಾರೆ.

ಇದೇ ತಲೆಬರಹವುಳ್ಳ ಕವನ ಸಂಕಲನದ ಹೆಸರನ್ನು 'ಗೋಪಾಲಕೃಷ್ಣ ಅಡಿಗರ ಹನ್ನೊಂದನೆಯ ಕವನ ಸಂಕಲನವಾದ 'ಸುವರ್ಣ ಪುತ್ಥಳಿ'ಯನ್ನು ನಾವು ಕಾಣಬಹುದು.'[೨೦] ಈ ಪುತ್ಥಳಿಯಲ್ಲಿ ಹಳೆಯ ಅಪ್ರಕಟಿತ ಕವನಗಳ ಪುನರ್‌ರಚಿತ ರೂಪಗಳು ಹಾಗೂ ಕೆಲವು ಹೊಸ ಕವಿತೆಗಳು ಇವೆ.

ಚಿತ್ತಾರದ ಅಡ್ಡಿಕೆ

ಈ ಕಲಾಕೃತಿಯ ವಿನ್ಯಾಸವನ್ನು ಸಾಂಪ್ರದಾಯಿಕ ಶೈಲಿಯಲ್ಲಿ ಬಾಗೂರರು ಸೃಷ್ಟಿಸಿದ್ದು, ತೇಜ ಪಬ್ಲಿಕೇಷನ್ ೨೦೧೨ರಲ್ಲಿ ಹೊರತಂದಿದ್ದಾರೆ. ಆಕೃತಿಯ ಮುನ್ನುಡಿ ಮತ್ತು ಬೆನ್ನುಡಿಯನ್ನು ಬಾಮಾರವರೆ ಲಿಖಿಸಿದ್ದಾರೆ. ಇದರ ವಿನ್ಯಾಸ ಸೀರೆಯ ಅಂಚಿನಲ್ಲಿ ಬರುವಂತ ಬಳ್ಳಿಯಾಕಾರದ ಮತ್ತು ದುಂಡುತನದ ಚುಕ್ಕೆಗಳಿಂದ ಅಲಂಕರಿಸಿದ್ದು, ಓರ್ವ ಸ್ತ್ರೀ ಓರೆಗಣ್ಣಿನಲ್ಲಿ ನೋಡುತ್ತಿರುವಂತ ರೇಖೆಗಳಿಂದ ವರ್ಣಲಂಕಾರಿಕವಾಗಿ ಕೂಡಿರುವುದನ್ನು ಕಾಣಬಹುದು. ನೋಡುಗರಲ್ಲಿ ಏನೋ ಜಿಜ್ಞಾಸೆ ಮೂಡಿಸುವಂತೆ ಈ ಸ್ತ್ರೀರೂಪ ಜೀವವನ್ನು ತುಂಬಿದ್ದಾಳೆ ಎನ್ನಬಹುದು. ಇದರಲ್ಲಿ 'ಕವಿತೆಗಳು ಅನೇಕ ನವ್ಯವಿವೆ, ಗೀತೆಗಳಿವೆ, ಅವುಗಳನ್ನು ಓದುವಾಗ ತಮ್ಮದೇ ಭಾವವೆಂದು ಓದಿಕೊಂಡರೆ ಹೆಚ್ಚು ಖುಷಿಯಾಗಬಹುದು. ಓದುವ ಆ ಅಭಿಮಾನಿ ದೇವರೇ ಶ್ರೇಷ್ಠವೆಂದು ಭಾವಿಸುವಲ್ಲಿ ಯಾವುದೇ ವಿಮರ್ಶೆಯನ್ನು ಪ್ರೀತಿಯಿಂದ ಸ್ವೀಕರಿಸುತ್ತೇನೆ ಎಂದು ಮುನ್ನುಡಿಯಲ್ಲಿ ಸೃಜಿಸಿದ್ದಾರೆ.'[೨೧]

ಸ್ವರ ಸಿರಿಯ ಸ್ನೇಹಲತೆ

ಈ ಕಲಾಕೃತಿಯ ವಿನ್ಯಾಸವು ಸುಂದರವಾಗಿದ್ದು, ಓರ್ವ ಸ್ತ್ರೀ ವಿನ್ಯಾಸದ ಹಸಿರು ಗುಚ್ಛದ ಬಿಳಿ ಹೂಗಳು ಸುತ್ತವರೆದುಕೊಂಡು ಭಾವುಕಳಾಗಿ ಓರೆ ಗಣ್ಣಿನಲ್ಲಿ ದೃಷ್ಟಿಸುತ್ತಿದ್ದು, ಹಿನ್ನೆಲೆಯಲ್ಲಿ ಸೂಕ್ಷ್ಮತೆಯಿಂದ ವರ್ಣದಲ್ಲಿ ವಿಲೀನವಾಗಿರುವಂತಹ ಸ್ತ್ರೀ ಭಾವಚಿತ್ರವಿದ್ದು, ಎಡಬದಿಯಲ್ಲಿ ಕಂದುಗೆಂಪು ವರ್ಣದಿಂದ ಕೂಡಿದ ಸ್ಥಳಾವಕಾಶದಲ್ಲಿ ಡಾ. ದೊಡ್ಡರಂಗೇಗೌಡರು, ನಲ್ಲೆಯ ನೋಡದೆ ಹೋದಾಗ ವಿರಹದ ಎದೆ ಸುಟ್ಟ ವಿಷಯ ಬರೆಯಲಿ, ಬೇಲಿ ಮೇಲಣ ಹೂವನ್ನು ಕುರಿತು ಬರೆಯಲಿ, ಕೆಂಡ ಸಂಪಿಗೆ ಹೂವಿನ ಎಸಳಿನಂತ ಮೂಗಿನವಳನ್ನು ಕುರಿತು ಬರೆಯಲಿ, ಬಾಗೂರು ಆರ್ದ್ರವಾಗಿ ಬರೆಯುತ್ತಾರೆ ಎಂದು ಬರೆದಿದ್ದಾರೆ. ಈ ಕಲಾಕೃತಿಯನ್ನು ಸ್ವಪ್ನ ಬುಕ್ ಹೌಸ್ ಹೊರತಂದಿದ್ದಾರೆ.

ಸುಮಧುರ ಭಾವಗೀತೆ

ಈ ಕಲಾಕೃತಿಯು ವರ್ಣ ಕಂದುಗೆಂಪು, ನೀಲಿ, ಹಾಗೂ ತಿಳಿ ಕೇಸರಿಯ ಕಣ್ತಣಿಸುವಂತಿದ್ದು, ತಲೆಬರಹ ಪಟ್ಟಿಕೆಯ ಸ್ವಲ್ಪ ಗಾಢವಾದ ಛಾಯೆಯನ್ನು ಇಡಿದುಕೊಂಡಿದೆ. ಬರಹದ ಸಂಯೋಜನೆಯೂ ಸೂಕ್ಷ್ಮತೆಯಿಂದ ನೆರಳು-ಬೆಳಕನ್ನು ಹೊಂದಿದೆ. ಈ ಅಂಕಣದಲ್ಲಿ ರೇಖೆಗಳಿಂದಲಂಕೃತವಾದ ಹಿಂಬದಿಯ ವರ್ಣಕ್ಕೆ ಸ್ವಲ್ಪ ದ್ವಟ್ಟವಾದ ಕತ್ತಲನೊಂದಿದಂತಿದ್ದು ಶೈಲಿಯಲ್ಲಿ ವೀಣೆಯನ್ನು ನುಡಿಸುತ್ತಿರುವುದು, ಮುಂಬದಿಯಲ್ಲಿ ಗಾಯಕಿಯರ ಜೊತೆ ಬಾಲಕ ಸಂಗೀತ ಹಾಡುವಂತಿರುವ ದೃಶ್ಯ ನೋಡುಗರ ತುಮಲತೆಗಳನ್ನು ಅಭಿವ್ಯಕ್ತಿಸುವಂತಿದೆ. ಇನ್ನು ಎಡಬದಿಯಲ್ಲಿ ಬಾಮಾರವರ ಬರಹದ ಪಟ್ಟಿಕೆಯೊಂದಿಗೆ ವೀಣಾಧಾರಿಯನ್ನು ಕಾಣಬಹುದು. ಈ ಕೃತಿಯನ್ನು ಚಿತ್ರ ಪ್ರಕಾಶನ ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಒಂದು ಕೊಡುಗೆಯಾಗಿದೆ ಎಂದು ಹೇಳಬಹುದು.

ಇಲ್ಲಿಯವರೆಗಿನ ಮಕ್ಕಳ ಕವಿತೆಗಳು

ಇದು ಮಕ್ಕಳಿಗೋಸ್ಕರ ರಚಿಸಿದ ವಸ್ತು ವಿಷಯವೆಂದು ತಿಳಿದುಬರುತ್ತದೆ. ಇದರ ವರ್ಣ ಗಾಢತೆಯಿಲ್ಲದ ತಿಳಿಮಿಶ್ರಿತ ಸ್ವಲ್ಪ ಬಿಳಿಯವರ್ಣದ ಜೊತೆ ಮುಖಪುಟದಲ್ಲಿ ದಟ್ಟನೆಯ ನೀಲಿ ವರ್ಣದ ಜೊತೆಗೂಡಿದ ಕೆಂಪುವರ್ಣವನ್ನು ಮೇಲಿಂದ ಕೆಳಭಾಗಕ್ಕೆ ಚಿಕ್ಕದಾಗುವಂತೆ ಹರಿದುಬಿಟ್ಟಂತಿದೆ. ಹಾಗೆಯೇ ಆಕಾಶದಿಂದ ಹನಿ-ಹನಿಗಳು ಧರೆಗೆ ಬೀಳುವಂತೆ ಹನಿಯ ಸಂತಸವನ್ನು ಅನುಭವಿಸುವ ರೇಖೆಗಳಿಂದಾವೃತವಾದ ವರ್ಣಲೇಪಿತ ಚಿಕ್ಕಮಕ್ಕಳು ಕೈಯಲ್ಲಿ ಪಾಟಿ ಇಡಿದು ಹರ್ಷೋದ್ಗಾರ ಮಾಡುತ್ತಿರುವಂತೆ ಸೃಜಿಸಲಾಗಿದೆ. ಇಲ್ಲಿಯ ಚಿಕ್ಕ ಮಕ್ಕಳ ವರ್ತನೆಯನ್ನು ನೋಡಿದರೆ ಮನಸ್ಸಿಗೆ ಆಹ್ಲಾದಕರವನ್ನುಂಟು ಮಾಡುವ ಹಿಂದಿನ ನೆನಪಿನ ರೇಖೆಗಳು ನಮ್ಮಲ್ಲಿ ಉದ್ಭವಿಸುತ್ತವೆ ಎಂದು ಹೇಳಬಹುದು.

ಚಿತ್ರಗಳು ಮಾತನಾಡುತ್ತಿವೆ

ಈ ಆಕೃತಿಯು ಸಮತಟ್ಟಾದ ವರ್ಣ ಲೇಪನದಿಂದ ಕೂಡಿದ್ದು, ಕಾಮನಬಿಲ್ಲಿನ ಛಾಯೆಯನ್ನು

ಕಾಣಬಹುದು. ಕೆಳಬದಿಯ ಹಂಚಿನಲ್ಲಿ ಚಿಕ್ಕಮಕ್ಕಳು ಚಿತ್ರಕಲಿಕೆಗಳ ಹಲವು ತುಣುಕುಗಳ ವಿನ್ಯಾಸವಿದೆ. ಎಡಬದಿಯ ಪಟ್ಟಿಕೆಯಲ್ಲಿ ಬಾಮಾರವರ ಅನಿಸಿಕೆಯ ಪದಗಳು ಇಲ್ಲಿ ಕಂಡುಬರುತ್ತವೆ. ಸ್ವಪ್ನ ಬುಕ್ ಹೌಸ್, ೨೦೧೧ರಲ್ಲಿ ಜಗತ್ತಿಗೆ ಪರಿಚಯಿಸಿದ್ದು, ಇದರ ವಸ್ತು ವಿಷಯದ 'DSERT'ಯ ನಿರ್ದೇಶಕರಾಗಿ ಕಾರ್ಯನಿರ್ವಹಿಸಿರುವ ಪ್ರಸ್ತುತ ಕರ್ನಾಟಕ ಶಿಕ್ಷಕ ಕಲ್ಯಾಣ ನಿದಿಯಲ್ಲಿ 'DDPI' ಆಗಿರುವ ಹೆಚ್.ವಿ.ವೆಂಕಟೇಶರವರ ಸಂದರ್ಶನದಲ್ಲಿ ತಿಳಿದುಬರುತ್ತದೆ. ಬಾಮಾರವರು ಮಕ್ಕಳ ಜೊತೆ ಮಕ್ಕಳಾಗಿ ಮಕ್ಕಳಿಗೆ ಪ್ರಾಯೋಗಿಕವಾಗಿ ಚಿತ್ರಕಲೆಯನ್ನು ಕಲಿಸುತ್ತಿದ್ದರು. ಮತ್ತು ಚಿತ್ರಕಲೆಗೆ ಪ್ರೇರಣೆ ಕೊಡುತ್ತಿದ್ದಾರೆ ಎನ್ನುವುದು ಇಲ್ಲಿಯ ಒಡಲಾಳದ ವಿಷಯವಾಗಿದೆ.'[೨೨] ಇನ್ನೂ ಮುಂದುವರೆದು ಇವರು ವಿನ್ಯಾಸದಲ್ಲಿ ತುಂಬಾ 'ಅದ್ಭುತವಾದ ಕಲಾವಿದರು', ಇವರ ಕಲೆ ನನ್ನನ್ನು ಮನಸೆಳೆದು ಆತ್ಮೀಯವಾಗಿ ಕಾಣುವಂತೆ ಮಾಡಿತು ಎಂದು ಅಂತರ್ಯದ ಮಾತುಗಳನ್ನು ಬಿಚ್ಚಿಡುತ್ತಾರೆ.

ಲಾಲಿ ಹಾಡುಗಳು:

ಈ ಕಲಾಕೃತಿಯ ಮೊದಲನೆಯ ಪಟ್ಟಿಕೆಯಲ್ಲಿ ಗಾಢವಾದ ವರ್ಣ ಲೇಪಿತ ಹಿಂಬದಿಯ ಒಳಪದರದಲ್ಲಿ ಚಿಕ್ಕ ಮಗುವನ್ನು ನಾಮಕರಣ ಮಾಡುವ ದೃಶ್ಯಾವಳಿಗಳಂತೆ ಕಂಡುಬರುತ್ತದೆ. ಮುನ್ನಲೆಯಲ್ಲಿ ಓರ್ವ ಚಿಕ್ಕಮಗು ತನ್ನ ಕೈಗಳನ್ನು ಆಟಕ್ಕೆ ಅಣಿ ಅಚ್ಚಿರುವಂತಿದ್ದು, ಕೆಳಪಟ್ಟಿಕೆಯ ಎಡ ಮತ್ತು ಬಲ ಬದಿಗೆ ಸಮನಾಗಿ ಚಿಕ್ಕ ಮಕ್ಕಳ ವಿನ್ಯಾಸದ ಪಟ್ಟಿಕೆ, ಇವುಗಳ ಮೇಲೆ ಕನ್ನಡಾಂಬೆಯ ವರ್ಣದ ತುಣುಕುಗಳು ಹಾಯ್ದು ಹೋಗಿರುವುದು ಕಾಣಸಿಗುತ್ತದೆ. ಎಡ ಪಟ್ಟಿಕೆಯಲ್ಲಿ ಬಾಮಾರವರ ಭಾವಚಿತ್ರ ಮತ್ತು ಅವರ ಮಾತುಗಳು ಕಾಣಸಿಗುತ್ತವೆ. ಈ ಕೃತಿಯನ್ನು ಬೆಂಗಳೂರಿನ ಸ್ವಪ್ನ ಬುಕ್ ಹೌಸ್ ಪರಿಚಯಿಸಿರುತ್ತದೆ.

ಈ ಲಾಲಿ ಹಾಡುಗಳ ಕೃತಿಯನ್ನು 'ಶಿವಮೊಗ್ಗ ಜಿಲ್ಲೆಯ ಹಾರ್ನಹಳ್ಳಿಯ ಕನ್ನಡ ಉಪನ್ಯಾಸಕರಾದ ಅನುರಾಧರವರು ಉತ್ತರಹಳ್ಳಿ ಬಸವನಗುಡಿಯಲ್ಲಿ ಕನ್ನಡ ಉಪನ್ಯಾಸಕರಾದ ನಂತರ ಅವರಿಗೂ ನನಗೂ ಸ್ನೇಹ ಬೆಳೆದ ನಂತರ ಬಾಗೂರರು ಬರೆದಂತ ಕವಿತೆ, ಕವನಗಳನ್ನು ನನ್ನ ಹತ್ತಿರ ಓದಲು ಕೊಡುತ್ತಿದ್ದರು. ಅವುಗಳಲ್ಲಿ 'ಲಾಲಿ ಹಾಡುಗಳು' ಒಂದು. ಇವು ಚೆನ್ನಾಗಿದ್ದವು ಎಂದು ಸಂತೋಷದ ಮಾತುಗಳನ್ನಾಡುತ್ತಾರೆ. ಹಾಗೂ ಇವರ ಹಾಡುಗಳಿಗೆ 'ಶಮಿತ ಮಲ್ನಾಡ್' ಅವರು ಓರ್ವ ಹುಡುಗನ ಕೈಲಿ ಹಾಡಿಸಿದ್ದಾರೆ. ಆ ಕಾರ್ಯವನ್ನು ಪ್ರಸ್ತುತ ಕಂಡಿದ್ದೇನೆ. ಹಾಗೇಯೇ ಇವರ ಈ ಕಾರ್ಯ ಮೇರು ಶಿಖರವನ್ನೇರಲಿ ಎಂದು ಹಾರೈಸುತ್ತಾರೆ.'[೨೩]

ಟಿಪ್ಪಣಿಗಳು:

೧. ಬಿ.ವಿ.ಕೆ. ಶಾಸ್ತ್ರೀ (ಸಂ) : ರೇಖಾಚಿತ್ರ, ಪುಟ ೬೬

೨. ಬಾಗೂರು ಮಾರ್ಕಾಂಡೇಯ : ಸಂದರ್ಶನ

೩. ಬಿ.ವಿ.ಕೆ. ಶಾಸ್ತ್ರೀ (ಸಂ) : ರೇಖಾಚಿತ್ರ, ಪುಟ ೧೧

೪. ಬಾಗೂರು ಮಾರ್ಕಾಂಡೇಯ : ಸಂದರ್ಶನ

೫. ಬಿ.ವಿ.ಕೆ. ಶಾಸ್ತ್ರೀ (ಸಂ) ರೇಖಾಚಿತ್ರ, ಪುಟ ೧೧

೬ ಬಿ.ಕೆ. ಸುಮಿತ್ರ : ಸಂದರ್ಶನ

೭ ಎಲ್. ಶಿವಲಿಂಗಪ್ಪ : ಕರ್ನಾಟಕದಲ್ಲಿ ಚಿತ್ರಕಲಾ ಬೆಳವಣಿಗೆ ಒಂದು ಸಮೀಕ್ಷೆ, ಪುಟ ೭೫

೮. ಬಾಗೂರು ಮಾರ್ಕಾಂಡೇಯ : ಸಂದರ್ಶನ

೯. ಬಾಗೂರು ಮಾರ್ಕಾಂಡೇಯ : ಸಂದರ್ಶನ

೧೦. ಬಾಗೂರು ಮಾರ್ಕಾಂಡೇಯ : ಸಂದರ್ಶನ

೧೧. ಬಾಗೂರು ಮಾರ್ಕಾಂಡೇಯ : ಸಂದರ್ಶನ

೧೨. ಪಿ.ಆರ್.ತಿಪ್ಪೇಸ್ವಾಮಿ (ಪ್ರಸಂ) : ಕಲಾಕೋಶ, ಪುಟ ೨೪೯

೧೩. ಪಿ.ಆರ್.ತಿಪ್ಪೇಸ್ವಾಮಿ (ಪ್ರಸಂ) : ಕಲಾಕೋಶ, ಪುಟ ೨೫೦

೧೪. ಭಗವಾನ್ : ಬಹುಮುಖಿ ಬಾಗೂರು ಮಾರ್ಕಾಂಡೇಯ, ಪುಟ ೪೫

೧೫. ಬಾಗೂರು ಮಾರ್ಕಾಂಡೇಯ : ಸಂದರ್ಶನ

೧೬. ಭಗವಾನ್ : ಬಹುಮುಖಿ ಬಾಗೂರು ಮಾರ್ಕಾಂಡೇಯ, ಪುಟ ೧೪೬

೧೭. ಎಸ್.ಕೆ. ಅರುಣಿ : ದಖ್ಖನಿ ಚಿತ್ರಕಲೆ, ಪು. ೧೨೦.

೧೮. ಬಾಗೂರು ಮಾರ್ಕಾಂಡೇಯ : ರಾಧಾಮಾಧವರ ಒಲುಮೆ ಚಿತ್ತಾರ, ಪುಟ ೫

೧೯. ಬಾಗೂರು ಮಾರ್ಕಾಂಡೇಯ : ರಾಧಾಮಾಧವರ ಒಲುಮೆ ಚಿತ್ತಾರ, ಪುಟ ೬

೨೦. ಪ್ರೊ. ಎಲ್.ಎಸ್.ಶೇಷಗಿರಿರಾವ್ (ಸಂ) : ಕನ್ನಡ ಸಾಹಿತ್ಯ ಸಮೀಕ್ಷೆ, ಪುಟ ೭

೨೧. ಬಾಗೂರು ಮಾರ್ಕಾಂಡೇಯ : ಚಿತ್ತಾರದ ಅಡ್ಡಿಕೆ

೨೨. ಹೆಚ್.ವಿ. ವೆಂಕಟೇಶ : ಡಿ.ಡಿ.ಪಿ.ಐ., ಸಂದರ್ಶನ

೨೩. ಅನುರಾಧ : ಕನ್ನಡ ಉಪನ್ಯಾಸಕರು, ಸಂದರ್ಶನ

ಅಧ್ಯಾಯ ನಾಲ್ಕು

ಬಾಗೂರು ಮಾರ್ಕಾಂಡೇಯ ಅವರ ಸಾಹಿತ್ಯ

ಅಧ್ಯಾಯ ನಾಲ್ಕು

ಬಾಗೂರು ಮಾರ್ಕಾಂಡೇಯ ಅವರ ಸಾಹಿತ್ಯ

ಹಲ್ಮಿಡಿ ಶಾಸನದಿಂದಿಡಿದು ಇಂದಿನವರೆಗೆ ಅವ್ಯಾಹತವಾಗಿ ಬೆಳೆದುಕೊಂಡು ಬಂದಿರುವ ಕನ್ನಡ ಸಾಹಿತ್ಯ ತನ್ನದೆಯಾದ ಚರಿತ್ರೆಯನ್ನು ಒಳಗೊಂಡಿದೆ. ಇದು ಕರ್ನಾಟಕದ ಸಂಸ್ಕೃತಿಯ ವೈವಿಧ್ಯಗಳಲ್ಲಿ ಒಂದು. ಹಾಗಾಗಿ ಸಾಹಿತ್ಯೇತರ ಮೌಲ್ಯ ಪ್ರತಿಪಾದನೆಗಳಿಗಿಂತ ಸಾಹಿತ್ಯದಲ್ಲಿ ಅಭಿವ್ಯಕ್ತಿಗೊಂಡಿರುವ ನಾಡಿನ ಕಲೆ, ಮತ, ಧರ್ಮ, ಜನರ ಆಚಾರ–ವಿಚಾರಗಳು ಕನ್ನಡ ಸಾಹಿತ್ಯ ಚರಿತ್ರೆಯ ಪರಂಪರೆಯನ್ನು ಅದರ ಮುಖ್ಯವಾದ ಮನೋಧರ್ಮದ ಆಧಾರದ ಮೇಲೆ ಹತ್ತನೇ ಶತಮಾನದ ಸಾಹಿತ್ಯ ಪರಂಪರೆಯು ವೀರಯುಗವಾಗಿದೆ. ಈ ಯುಗ ಧರ್ಮದಲ್ಲಿ ವೀರ, ತ್ಯಾಗ ಸ್ವಾಮಿ ಭಕ್ತಿಗಳು ಪ್ರಧಾನವಾಗಿ ಕಂಡುಬರುತ್ತವೆ. ನಂತರದಲ್ಲಿ ಭಕ್ತಿಯುಗ ವಚನ ಸಾಹಿತ್ಯದಲ್ಲಿ ಸಮಾನತೆ, ಕಾಯಕ, ನಿಷ್ಠೆ, ದಾಸೋಹ ಸಹ ಪಂಕ್ತಿಬೋಜನ, ಭಕ್ತಿ ಮನೋಭಾವ, ಉತ್ಸಾಹ, ಆವೇಶ ಸಾಮಾಜಿಕ ಸುಧಾರಣೆ ಮುಖ್ಯವಾದವುಗಳು ಸ್ವತಂತ್ರವದ ಆಧುನಿಕ ಯುಗ ಇಪ್ಪತ್ತನೆಯ ಶತಮಾನದಲ್ಲಿ ವೈಜ್ಞಾನಿಕ ದೃಷ್ಟಿಯಿಂದ ಒಡಮೂಡಿದ ವಿಚಾರ ಕ್ರಾಂತಿಗೆ ಆಹ್ವಾನ ಮಾಡಿದ ಹೊಸಗನ್ನಡ ಸಾಹಿತ್ಯದ ಪ್ರಕ್ರಿಯೆಯಾಗಿದೆ.'[೧]

'ಆಧುನಿಕ ಸಾಹಿತ್ಯವೆಂದು ಯಾವುದನ್ನು ಕರೆಯುತ್ತೇವೆ? ಈ ಸಾಹಿತ್ಯದ ಲಕ್ಷಣಗಳೇನು? ಎನ್ನುವ ಪ್ರಶ್ನೆಗಳು ಮೂಡುತ್ತವೆ. ಈ ಸಾಹಿತ್ಯದ ಆಸಕ್ತಿಯ ಕೇಂದ್ರ ಮನುಷ್ಯ–ದೇವರಲ್ಲ. ಈ ಸಾಹಿತ್ಯದಲ್ಲಿ ಮನುಷ್ಯ ಆಸಕ್ತಿ ತಳೆಯುವುದರಿಂದ ಮೂರು ಪರಿಣಾಮಗಳು ಆಗುತ್ತವೆಂದು ಎಲ್.ಎಸ್. ಶೇಷಗಿರಿರಾವ್ ಅವರು ಹೇಳುತ್ತಾರೆ. ಮೊದಲನೆಯದಾಗಿ ಮನುಷ್ಯ ದೇವರ ಸಂಬಂಧವಲ್ಲದೆ ಮನುಷ್ಯನ ಇತರ ಸಂಬಂಧಗಳೂ, ಸಮಾಜದಲ್ಲಿ ಮನುಷ್ಯ ಕುಟುಂಬದಲ್ಲಿ ಮನುಷ್ಯ, ಸ್ನೇಹ, ಪ್ರೇಮ, ದ್ವೇಷ ಎಲ್ಲಾ ಇದಕ್ಕೆ ವಸ್ತುವಾಗುತ್ತವೆ. ಎರಡನೆಯದಾಗಿ ಮಾನವ ಜೀವನದಲ್ಲಿ ಇದರ ಆಸಕ್ತಿಯಾದುದರಿಂದ ಮನುಷ್ಯನ ಅಂತಸ್ತು ಇದಕ್ಕೆ ಮುಖ್ಯವಲ್ಲ. ಇದು

ರಾಜ-ರಾಣಿಯರ, ಋಷಿಗಳ, ಆದಿಮಾನವರು. ಇವರಲ್ಲಿ ಮಾತ್ರ ಆಸಕ್ತಿ ಪಡೆದಿದಲ್ಲ. ಇದಕ್ಕೆ ಇಹಲೋಕದ ಬಾಳು ಪರಲೋಕಕ್ಕೆ ದಾರಿ ಮಾತ್ರವಲ್ಲ ಈ ಬಾಳಿನಲ್ಲೇ ಇದಕ್ಕೆ ಆಸಕ್ತಿ. ಮೂರನೆಯದಾಗಿ ಆಧುನಿಕ ಸಾಹಿತ್ಯ ಹಿಂದಿನ ಸಾಹಿತ್ಯದ ಶಿಖರಗಳನ್ನು ಗುರುತಿಸುತ್ತದೆ. ಆದರೆ ಆ ಶಿಖರಗಳತ್ತಲೇ ಮುಖಮೂತಿ ನಿಲ್ಲುವುದಿಲ್ಲ. ಬರಹಗಾರ ಜೀವನದಲ್ಲಿ ತನ್ನ ವೈಯಕ್ತಿಕ ಪ್ರಕ್ರಿಯೆಯನ್ನು ಸೂಚಿಸಬಯಸುತ್ತಾನೆ. ಧಾರ್ಮಿಕ ವಿವರಣೆ ಅಥವಾ ನೀತಿ-ಬೋಧನೆಗಾಗಿ ಕವಿ ಬರೆಯುವುದಿಲ್ಲ. ವೈಯಕ್ತಿಕ, ಕಾಲ್ಪನಿಕ ಅನುಭವವನ್ನು ಜೀವನದಲ್ಲಿ ತನ್ನ ಕಲ್ಪನೆಗೆ ಕಂಡ ವಿನ್ಯಾಸವನ್ನು ಜೀವನಕ್ಕೆ ತನ್ನ ಹೃದಯ ಸ್ಪಂದಿಸಿದ ರೀತಿಯನ್ನು ಭಾಷೆಯಲ್ಲಿ ಮೈಗೂಡಿಸಲು ಉದ್ದೇಶಿಸುತ್ತಾನೆ.'[೨] ಆದುದರಿಂದ ವಿವಿಧ ಸಾಹಿತ್ಯ ಪ್ರಕಾರಗಳು ಅವನಿಗೆ ಅವಶ್ಯಕವಾಗುತ್ತವೆ. ಇಂತಹ ಅವಶ್ಯಕತೆಗಳನ್ನು ಪಸ್ತುತ ಪೂರೈಸುತ್ತಿರುವ ಚಿತ್ರಕಲಾವಿದರಾದ ಬಾಗೂರ ಮಾರ್ಕಾಂಡೇಯ ಅವರು ಪ್ರತಿಭಾನ್ವಿತರಲ್ಲಿ ಒಬ್ಬರು.

ಮಾರ್ಕಾಂಡೇಯ ಅವರು ಈಗಾಗಲೇ ಹಲವಾರು ಭಾವಗೀತೆಯ ಪುಸ್ತಕಗಳನ್ನು, ಮಕ್ಕಳಿಗೆ ಶಿಶು ಸಾಹಿತ್ಯವನ್ನು ಜೊತೆಗೆ ಚಿಂತನ ಬರಹಗಳನ್ನು ಚಿತ್ರಕಲಾ ಪುಸ್ತಕಗಳನ್ನಾಗಿ, ಇವು ಅಲ್ಲದೆ ಅಡಕ ಮುದ್ರಿಕೆಯಲ್ಲಿ (ಸಿಡಿ) ಅನೇಕ ಧ್ವನಿ ಸುರುಳಿಗಳನ್ನು ತಂದಿದ್ದಾರೆ. ಪ್ರಮುಖವಾಗಿ ಅವರ ಸಾಹಿತ್ಯದ ಆಯ್ದ ಕೆಲವು ಬರಹಗಳನ್ನು ಪ್ರಸ್ತುತವಾಗಿ ಅವಲೋಕಿಸಲಾಗಿದೆ. ಅವರ ಒಟ್ಟು ಸಾಹಿತ್ಯವನ್ನು ಶಿಶುಸಾಹಿತ್ಯ, ಚಿಂತನಾ ಸಾಹಿತ್ಯ ಭಾವಗೀತೆಗಳ ಸಾಹಿತ್ಯವನ್ನು ಕಾಣಬಹುದು.

ಮಕ್ಕಳ ಸಾಹಿತ್ಯ

ಇತ್ತೀಚೆಗೆ ಹಲವರು ಯಾವುದು ಮಕ್ಕಳ ಸಾಹಿತ್ಯ? ಮಕ್ಕಳು ಬರೆದದ್ದೊ ಇಲ್ಲವೆ ಮಕ್ಕಳಿಗಾಗಿ ಎಂದು ಹಿರಿಯರು ಬರೆದದ್ದೋ? ಎಂದು ಜಿಜ್ಞಾಸೆ ಹುಟ್ಟಿಸಿದ್ದಾರೆ. ಇನ್ನು ಕೆಲವರು 'ಸಾಹಿತ್ಯವೆಂದರೆ ಸಾಹಿತ್ಯವೆ! ಅದು ಹಿರಿಯರಿಗೇನು-ಕಿರಿಯರಿಗೇನು! ಎನ್ನುವವರೂ ಇದ್ದಾರೆ. ಎರಡೂ ಅಭಿಪ್ರಾಯಗಳು ನಿಜ. ಆದರೆ ಬರವಣಿಗೆಯ ರೀತಿ-ನೀತಿ, ವಿಚಾರ ವ್ಯಾಪ್ತಿ ಇತ್ಯಾದಿ ಬೇರೆ ಬೇರೆ ಎಂದು ಹೇಳಲು ಗತ್ಯಂತರವಿಲ್ಲ. ಅವರಿಗಷ್ಟೇ ಉತ್ತರ. ಮಾನವ ಪ್ರಾಣಿ ಒಂದೇ ಎಂದಮೇಲೆ ಹಿರಿಯರಿಗಿದ್ದಂತೆ ಕಿರಿಯರಿಗೂ ಕೈಕಾಲು, ಹೊಟ್ಟೆ, ನೆತ್ತಿ, ಕಣ್ಣು, ಕಿವಿ ಇವೆಯಷ್ಟೇ! ಹಾಗಾದರೆ ಹಿರಿಯರು ತಮ್ಮ ಆಹಾರ ತೆಗೆದುಕೊಂಡು ತಿನ್ನುವಂತೆ, ಮಗು ತನ್ನ ಆಹಾರವನ್ನು ತಾನೇ ಏಕೆ ತಿನ್ನುವುದಿಲ್ಲ? ಪಾಲಕರು ಕೂಸಿಗೆ ಹಾಲನ್ನೇಕೆ ಕುಡಿಸಬೇಕು? ರೊಟ್ಟಿ ತಿನ್ನು ಅನ್ನ ನುಂಗು ಎಂದು ಅದರ ಮುಂದೆ ಏಕೆ ಇಡಬಾರದು? ಪ್ರೌಢರ ಆಹಾರಕ್ಕಿಂತ ಮಕ್ಕಳ ಆಹಾರ ಹೇಗೆ ಭಿನ್ನವಾಗಿರಬೇಕಾದದ್ದು ಸಹಜವೋ. ಹಾಗೆ ಮಗುವಿನ ಮೈಮನಸ್ಸು ಸದೃಢವಾಗಲು ಬೆಳೆಯಲು ಪಾಚಕ ಆಹಾರದ ಜೊತೆಗೆ ಶಕ್ತಿಯುತ ಆಹಾರವನ್ನು ಸೇರಿಸಿಕೊಡುವಂತೆ ಮಕ್ಕಳ ತನು-ಮನ ಜೀವನ ಯೋಗ್ಯ ರೀತಿಯಲ್ಲಿ ಬೆಳೆಯುವಂತೆ ಸಹಾಯಕವಾಗಿರಲು ಮನೋರಂಜನೆಯ ಜೊತೆಗೆ ಜೀವನ ಮಾರ್ಗದ ಬರವಣಿಗೆಯ ಸಾಹಿತ್ಯ ಪ್ರತ್ಯೇಕವಾಗಿರಬೇಕಾದದು ಅನಿವಾರ್ಯ. ಹಿರಿಯರಿಗೆ ಜೀವನ ಮಾರ್ಗದ

ಸಮಯ ಕಳೆಯಲು ಸಾಹಿತ್ಯಬೇಕಾದರೆ ಕಿರಿಯರಿಗೆ ಮುಂದಿನ ಜೀವನದ ರೀತಿ-ನೀತಿ ತಿಳಿಸಲು ಸಾಹಿತ್ಯಬೇಕು.

ಮಕ್ಕಳ ಸಾಹಿತ್ಯದ ಮೂಲ ಉದ್ದೇಶ-ಗುರಿ ಮಗುವನ್ನು ಮಾನವನ್ನಾಗಿ ಪರಿವರ್ತಿಸುವುದಾಗಿದೆ. ಮಕ್ಕಳ ಸಾಹಿತ್ಯವೆಂದರೆ ಅದೇನು ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಂಘ ಸಂಸ್ಥೆಗಳ ಪ್ರಚಾರ ಸಾಹಿತ್ಯವಲ್ಲ. ಯಾರಲ್ಲಿ ತಮ್ಮ ಅದಮ್ಯ ವಿಚಾರಗಳನ್ನು, ಭಾವನೆಗಳನ್ನು, ಕಲ್ಪನೆಗಳನ್ನು ಸುಪ್ತ ಶಕ್ತಿಗಳನ್ನು ಶಬ್ಧ ರೂಪದಲ್ಲಿ ಪ್ರಕಟಗೊಳಿಸುವ ಸಾಮರ್ಥವಿಲ್ಲವೋ. ಅವರಿಗೆ ಅವರ ಅನುಭವಗಳಿಗೆ ಮುಂದಿನ ಜೀವನದಲ್ಲಿ ಜರುಗುವ ಒಳಿತು-ಕೆಡಕುಗಳನ್ನು ತಿಳಿಸಿ ಅವುಗಳನ್ನು ಅರಿತು ಎದುರಿಸುವ ಸರಿದಾರಿಯಲ್ಲಿ ಸಾಗುವಂತೆ ತೋರುವ ವಿಶ್ವ ಬಂಧುತ್ವ, ರಾಷ್ಟ್ರಪ್ರೇಮ, ಭಕ್ತಿ ತುಂಬುವ ಶಬ್ಧ ರೂಪದ ವಾಕ್ಯಗಳೇ ಮಕ್ಕಳ ಸಾಹಿತ್ಯ ಇಂಥ ಸಾಹಿತ್ಯವನ್ನು ಯಾರೆ ಬರೆದಿರಲಿ ಅವರು ಮಕ್ಕಳೇ ಇರಲಿ ಮುದುಕರೆ ಇರಲಿ ಅದು ಮಕ್ಕಳ ಸಾಹಿತ್ಯ.

ಶಿಶು ಸಾಹಿತ್ಯ

ಕೂಸು ಹುಟ್ಟಿ ಕಣ್ಣು ತೆರೆಯುತ್ತಲೇ ಎದುರಿನ ಪರಿಸರವನ್ನು ಅರಿಯಲು ಅರ್ಥ ಮಾಡಿಕೊಳ್ಳಲು, ಪರಿಚಯಿಸಿಕೊಳ್ಳಲು ಇಚ್ಛಿಸುತ್ತದೆ. ಬೆಳವಣಿಗೆ ಒಂದು ಪ್ರಮಾಣದಲ್ಲಿರುತ್ತದೆ. ಮುಂದೆ ಕೂಸು ಬೆಳೆದರೂ ಪ್ರವೃತ್ತಿಯಲ್ಲಿ ಏರುಪೇರುಗಳಾಗಬಹುದು. ಆದರೆ ಮೂಲ ವೃತ್ತಿಯಲ್ಲಿ ಏರುಪೇರುಗಳಾಗುವುದಿಲ್ಲ. ಅದಕ್ಕಾಗಿ ಶಾಲಾಪೂರ್ವದ ಈ ಅವಸ್ಥೆಯಲ್ಲಿ ಮಗುವಿನ ಬಗ್ಗೆ ವಿಶೇಷ-ಲಕ್ಷ್ಯ-ಅಸ್ಥೆ ವಹಿಸಬೇಕಾಗುತ್ತದೆ. ಇದಕ್ಕೆ 'ಮೂರು ವರ್ಷದ ಬುದ್ಧಿ ನೂರು ವರುಷದವರಿಗೆ' ಎನ್ನುವುದು. ಈ ಅವಸ್ಥೆ ಎಂದರೆ ಅಕ್ಷರ ಜ್ಞಾನ ಕಲಿಯಲು ಶಾಲೆಗೆ ಹೋಗುವ ಪೂರ್ವದಲ್ಲಿ ಬಾಲವಾಡಿ ಅಂಗನವಾಡಿಗಳಿಗೆ ಹೋಗಿ ಮನೋರಂಜನೆಯೊಂದಿಗೆ ನಕ್ಕು-ನಲಿದು, ಕುಣಿದು-ಕುಪ್ಪಳಿಸಿ ಆಡಿ-ಆಡಿ ಮಾನಸಿಕ ಸೀಮಿತವನ್ನು ತಂದುಕೊಳ್ಳುವುದು. ಈ ವಯಸ್ಸಿನಲ್ಲಿ ಅಕ್ಷರ ಜ್ಞಾನ ಇರುವುದಿಲ್ಲ. ಕೇಳಿ, ನೋಡಿ, ಮುಟ್ಟಿ-ತಟ್ಟಿ, ತನ್ನ ಅನುಭವದ ಪರಿಧಿಯನ್ನು ವೃದ್ಧಿಗೊಳಿಸಿಕೊಳ್ಳುತ್ತದೆ. ಗೆರೆ-ಚಿತ್ರಗಳ ಸಾಹಿತ್ಯ ಅವಕ್ಕೆ ಸರಿಹೊಂದುವಂತೆ 'ಶಿಶುಪ್ರಾಸಗಳ ಹಾಡುಗಳನ್ನು ಕಲಿಸಬೇಕು. ಈ ವಿಭಾಗದ ಒಂದು ಸಾವಿರ ಶಬ್ಧಗಳಿಗೆ ಸಮಾನ. ಒಂದು ಸಚಿತ್ರ ಪುಸ್ತಕ ನೂರು ಆಟಿಕೆಗಳಿಗೆ ಸಮಾನ. ಶಿಶು ಚಿತ್ರ ನೋಡುತ್ತದೆ, ಆನಂದಿಸುತ್ತದೆ. ಚಿತ್ರಗಳಲ್ಲಿ ಪರಿಸರದ ಕಲ್ಪನಾ ತರಂಗಗಳನ್ನೆಬ್ಬಿಸುತ್ತದೆ. ಚಿತ್ರಗಳಲ್ಲಿ ಅಡಗಿದ ಭಾವ ಹಿರಿದು ಹೊರತೆಗೆಯುವ ತವಕ, ಚಿತ್ರ ಹಾಗೂ ಮಗು ಎರಡೂ ಮೂಕ ಆದರೂ ಮಗು ಚಿತ್ರದ ಜೊತೆ ಮಾತನಾಡುತ್ತದೆ. ಮಗುವಿನ ಮಾನಸಿಕ ಮೌಲ್ಯವನ್ನು ಬೆಳೆಸುತ್ತದೆ. ಮಗುವಿನ ಅನುಭವಕ್ಕೆ ತಕ್ಕಂತೆ ಸಾಹಿತ್ಯದಲ್ಲಿ ಅರ್ಥವಿದ್ದರೂ ಚಿಂತೆಯಿಲ್ಲ. ತಾಳ-ಲಯಬದ್ಧ ಧ್ವನಿಪೂರ್ಣ, ಪ್ರಾಸಬದ್ಧ ಶಬ್ಧಗಳನ್ನು ಗಮನಿಸುವಂತೆ ಮಾಡುವ ಶಬ್ಧ ಜಾಲವನ್ನು ಹರಡಬೇಕು. ಇದಕ್ಕೆ ಉದಾಹರಣೆ ಎಂದರೆ ತಾಯಿ ಮಗುವನ್ನು ರಮಿಸುವ ಧ್ವನಿ ಜೋಗುಳ

ಪದ, ಶಿಶು ಗೀತೆಗಳು ಇಂಥ ನುಡಿಗಳನ್ನು ಮಗು ಸದಾ ಆಟದಲ್ಲಿ ಗಮನಿಸುತ್ತದೆ. ತನ್ನ ನೆನಪಿನಂಗಳದಲ್ಲಿ ಭಿತ್ತಿಕೊಳ್ಳುತ್ತದೆ. ಆಸುಪಾಸಿನ ಕಣ್ಣು ಕಂಡ, ಕಿವಿ ಕೇಳಿದ ಪಕ್ಷಿಗಳ ಕೂಗು, ಧ್ವನಿಪೂರ್ಣ ದ್ವಿರುಕ್ತಿ ಶಬ್ಧ ಸಾಲು ಶಿಶುಕಾವ್ಯ ಸಾಹಿತ್ಯ ಅಸ್ತಿವಾರ, ಪೂರ್ತಿ ಪುಟದಲ್ಲಿ ಮುಕ್ಕಾಲು ಭಾಗ ಚಿತ್ರ, ಚಿತ್ರ ಪ್ರತಿಬಿಂಬಿಸುವ ಒಂದೆರಡು ಸಾಲು ಸಾಹಿತ್ಯ, ಈ ಎರಡು ಮೂರು ಸಾಲುಗಳಲ್ಲೇ ಯಾವುದೋ ಘಟನೆ ನಿರೂಪಣೆಯಾಗಿರಬೇಕು. ಅದನ್ನು ಓದಿ ಹೇಳಿದಾಗ ಮಗು ಧ್ವನಿಪೂರ್ಣವಾಗಿ ತೊದಲು ನುಡಿಯುತ್ತದೆ. ಚಿತ್ರವನ್ನು ಕಣ್ಣ ಕಲ್ಪನೆಯ ಪರದೆಯ ಮೇಲೆ ಮೂಡಿಸಿಕೊಳ್ಳುತ್ತದೆ. ಎಲ್ಲೇ ಹೋಗಲಿ ಗಮನಿಸುತ್ತದೆ. ಇದೇ ತರದ ಕೃಷಿಯನ್ನು ಮಾಡಿಕೊಂಡು ಬರುತ್ತಿರುವವರಲ್ಲಿ ಶಶಿ ಸಂಗಮೇಶ ಮತ್ತು ಇತರರು. ಇವರ ಸಾಲಿಗೆ ಸೇರುವ ಇತ್ತೀಚಿನ ಕವಿ, ಚಿತ್ರಕಲಾವಿದ ಪ್ರಸ್ತುತ ಲಲಿತಕಲಾ ಅಕಾಡೆಮಿಯ ಸದಸ್ಯರಾದ ಬಾಗೂರು ಮಾರ್ಕಾಂಡೇಯ ಅವರು ಒಬ್ಬರು.

ಶಿಶು ಸಾಹಿತ್ಯದಲ್ಲಿ, ಹೊರ ತಂದಿರುವ ಕೃತಿಗಳು ಈ ರೀತಿಯಾಗಿವೆ.

ಚುಕುಬುಕು ರೈಲು, ಚಿಣ್ಣರ ಚಿಲಿಪಿಲಿ, ಬಣ್ಣದ ಅಂಗಿ, ಮೋಡಣ್ಣ ನಾ ಯಾರು ಹೇಳಣ್ಣ, ಚೆಂದದ ಚೆಲುವಿನ ಗಾಳಿಪಟ, ಎಳೆಯರಿಗಾಗಿ ಕಾಮನ ಬಿಲ್ಲು, ಕಾಡದಿಬ್ಬದಲಿ ಪಾಠ ಕಲಿತ ಕಳ್ಳರು, ಅಮ್ಮನ ಪ್ರೀತಿ, ಚಿಲಿಪಿಲಿ ಹಾಡು, ಪುಟಾಣಿ ಚಿಲಿಪಿಲಿ, ಬಾರೋ ಬಾರೋ ಗಿಳಿಯೇ, ಹಾರುವ ಹಕ್ಕಿಯೇ ಬಾರೆ, ಬಣ್ಣದ ಹಕ್ಕಿಯ ಚಿಲಿಪಿಲಿ, ಕವಿತಾ ಕಿನ್ನರಿ, ಕಂದ ಕಲಿ ಕವಿತೆಯಿಂದ ಚಿಂವ್ ಚಿಂವ್ ಗುಬ್ಬಿ, ಪುಟ್ಟ ಪುಟಾಣಿ ಸ್ವರ್ಣ, ಇಂತಹ ಶಿಶು ಗೀತೆಗಳನ್ನು ಪುಟಾಣಿ ಜಗತ್ತಿಗೆ ಕೊಡುವುದರ ಜೊತೆಗೆ ಪ್ರಸ್ತುತವಾಗಿಯೂ ಇನ್ನೂ ಶಿಶು ಸಾಹಿತ್ಯದಲ್ಲಿ ಕೃಷಿ ಮಾಡಲು ತೊಡಗಿಸಿಕೊಂಡಿದ್ದಾರೆ. ಇವುಗಳಲ್ಲಿ 'ತಾರೆಗಳ ಬಳಗ' ಎಂಬ ಮುದ್ದು ಮಕ್ಕಳು ಮುಗಳ್ನಗೆಯ ಕಾರಣಕ್ಕೆ ನಕ್ಕ ಪದ್ಯದ ಸಾಲುಗಳನ್ನು ಇಲ್ಲಿ ಹಿಡಿದಿಡಲಾಗಿದೆ.

ಸೇರಿತು ಗೆಳೆಯರ ಪುಟಾಣಿ ದಂಡು:

'ಸೇರಿತು ಗೆಳೆಯರ ಪುಟಾಣಿ ದಂಡು
ಶಾಲೆಯ ಹೂದೋಟದ ಹಸಿರಲ್ಲಿ
ಸ್ವಚ್ಛಗೊಳಿಸಲು ತೊಡಗಿತ್ತು
ಸಸಿಗಳ ಎಡಬಲ ಪಾತಿಯಲಿ'.

'ಹಾಡನು ಹಾಡುತ ಕಳೆಯನು ಕಿತ್ತನು
ಪಾತಿಗೊಬ್ಬರ ಚೆಲ್ಲುತ
ನೀರನು ತಂದು ಸುರಿಯ ತೊಡಗಲು
ನಕ್ಕವು ಗಿಡಮರ ಬಳ್ಳಿಗಳು'[೩]

ಈ ಸಾಹಿತ್ಯದಲ್ಲಿ ಶೂನ್ಯ ಮನಸಿನ ಮಕ್ಕಳು ಸೇರಿ ಶಾಲೆಯ ಆವರಣದಲ್ಲಿ ಆಟದ ಸಂಭ್ರಮವೊಂದಿದ್ದರೆ ಮಕ್ಕಳು ಶ್ರಮದಾಯಕ ಕೆಲಸದಲ್ಲಿ ತೊಡಗಿಸಿಕೊಂಡು ಅದರಿಂದ ಸಂತೋಷದ ಪ್ರತಿಫಲ ಪಡೆಯುತ್ತಾರೆ ಎಂದು ಹೇಳುವಂತಿದೆ.

ಅಮ್ಮ ಒಂದು ಪುಸ್ತಕ ಸಿಕ್ಕಿದೆ.

'ಅಮ್ಮ ಒಂದು ಪುಸ್ತಕ ಸಿಕ್ಕಿದೆ
ಓದಿ ಹೇಳು ಬಾರಮ್ಮ
ಅದರಲ್ಲಿಯ ಕಥೆಯ ಸಾರವನ್ನು
ಚೂರು ಬಿಡದೆ ಹೇಳಮ್ಮ'[೨]

ಈ ಸಾಹಿತ್ಯದಲ್ಲಿ ತಾಯಿಯ ಜೊತೆ ಇದ್ದಷ್ಟು ಸಲುಗೆಯಾಗಿ ಮಕ್ಕಳು ಯಾರ ಜೊತೆ ಇರಲಾರರು ಮತ್ತು ಮನೆಯು ಮೊದಲ ಪಾಠಶಾಲೆ. ತಾಯಿಯೇ ಮೊದಲ ಗುರು ಎಂಬ ಉಕ್ತಿಯನ್ನು ಈ ಸಾಹಿತ್ಯ ತಿಳಿಸುವಂತಿದೆ.

ಸಿಂಹ ನಡೆಯ ಕನ್ನಡಿಗರೆ

'ಎಲ್ಲರಲ್ಲೂ ಮಂದ ತುಂಬಲಿ
ಸತತ ಉಕ್ಕಿ ದುಮ್ಮಿಕ್ಕಲಿ
ಕಸ್ತೂರಿಯ ಕನ್ನಡವದು
ವಿಶ್ವ ನುಡಿಯೇ ಆಗಲಿ'[೩]

ಈ ಕವಿತೆಯಲ್ಲಿ ಕನ್ನಡ ಭಾಷೆ ಎಲ್ಲರಲ್ಲೂ ಸಂಚಾರಿ ಭಾವವಾಗಿ ನೆಲೆಗೊಂಡು ವಿಶ್ವಭಾಷೆಯಾಗಿ ರೂಪ ಪಡೆಯಲಿ ಎಂಬ ತಿರುಳನ್ನು ತಿಳಿಸುತ್ತದೆ.

ನಾವು ಭಾರತೀಯರು

'ಹಿಂದೂ ಮುಸ್ಲಿಂ ಕ್ರೈಸ್ತ ಬುದ್ಧ ಜೈನ ಪಾರಸಿ
ಹಲವು ನಾಮವಿದ್ದರು ದೇವನೊಬ್ಬ
ನಂಬುಗೆಯದೀ ನೆಲೆ ಮಹಾದಿಬ್ಬ
ಒಗ್ಗಟ್ಟಲಿ ಬಾಳುವೆ ನಮಗೋ ಹಬ್ಬ
ಭಾರತೀಯರು ಭಾರತೀಯರು'[೪]

ಈ ಅಖಂಡ ಜಗತ್ತಿನಲ್ಲಿ ಜಾತಿ ಪಂತ ಬೇಧಗಳನ್ನು ಬದಿಗೊತ್ತಿ ನಾವೆಲ್ಲರೂ ಒಂದೇ ಎಂಬ ಐಕ್ಯತಾ ಮನೋ ಭಾವನೆಯಿಂದ ಪ್ರೀತಿ ವಾತ್ಸಲ್ಯದಿಂದಿದ್ದರೆ ನಮಗೆ ದಿನವೂ ಹಬ್ಬದ ಸಂಭ್ರಮಕ್ಕಿಂತ ಹೆಚ್ಚು ಆನಂದದಿಂದ ಬದುಕಬಹುದೆಂಬ ಉಲ್ಲೇಖವನ್ನು ಈ ಕವಿತೆ ಸೂಚಿಸುತ್ತದೆ.

ಬಸವನ ಬ್ಯಾಗಲಿ ಹುಣಸೇಕಾಯಿ

'ಬಸವನ ಬ್ಯಾಗಲಿ ಹುಣಸೆಕಾಯಿ
ಬಾಯಲಿ ನೀರನು ಸುರಿಸಿತ್ತು
ಮೆಲ್ಲನೆ ತಿನ್ನುವ ಹಂಚಿಕೆ ಮನಸ್ಸಿಗೆ
ಚೀಲದ ಒಳಗೆ ಕೈ ಹೋಯ್ತು'[೭]

ತುಂಟುತನದ ಬುದ್ಧಿ ಶಾಲೆಗೆ ಬರುವಾಗ ತಿನ್ನಲು ಹುಣಸೆಕಾಯಿಯನ್ನು ತನ್ನ ಪಾಟಿಯಲ್ಲಿ ಸೇರಿಸಿಕೊಂಡು ಬಂದು ಗುರುಗಳ ಬೋಧನಾ ಸಮಯದಲ್ಲಿ ತಿನ್ನುವ ಆಸೆಯ ಜೊತೆಗೆ ಪಾಠವನ್ನು ಕೇಳುತ್ತ ಎರಡನ್ನು ಸರಿದೂಗಿಸುವುದು ಇಲ್ಲಿ ನಡೆಯುತ್ತಿದೆ. ಇದೇ ಸಂದರ್ಭ ಪ್ರೌಢಶಾಲೆಯಲ್ಲಿ ಓದುವಾಗ ಬಾಗೂರರಿಗೆ ಇತ್ತು ಎಂದು ಹೇಳಬಹುದು.

ಭಾರತೀಯ ಸಿಂಹ ನೀನು

'ಬಿಳಿಯದೆಲ್ಲ ಅಮೃತವಲ್ಲ
ಶೋಧನೆ ಒಳ ವರ್ಮ
ಅಳಿಯದಿರಲಿ ಲಲಿತಕಲೆ
ಒಳ್ಳೆ ಬದುಕಿದು ಕರ್ಮ'[೮]

ಈ ಕಲಾಕೃತಿಯಲ್ಲಿ ಪ್ರತ್ಯಕ್ಷವಾಗಿ ಕಂಡರೂ ಪ್ರಾಮಾಣಿಸಿ ನೋಡು. ಹಾಗೆಯೇ ನಮ್ಮ ನಾಡಿನ ಲಲಿತಕಲೆಗಳು ಅಜರಾಮರವಾಗಿ ಅಳಿಯದಿರಲಿ ಇದರಲ್ಲಿದೆ ಎಲ್ಲರ ಒಳ್ಳೆಯ ಬದುಕು ಎಂದು ತಿಳಿಸುವ ಸಾರವಿದೆ.

ಆರಂಭವಾಗಿದೆ ನಮ್ಮ ಶಾಲೆ

'ಜ್ಞಾನದ ಬೆಳಕು ನಲಿಯುತ ಬಾಳಿ
ಒಂದಾಗುತ ಕುಣಿ ಕುಣಿದಾಡೋಣ'[೯]

ಶಿಕ್ಷಣದ ಜೊತೆ ಎಲ್ಲರೂ ಕಲಿಯೋಣ ಎಲ್ಲರೂ ಬೆಳೆಯೋಣ ಸಂಭ್ರಮಿಸೋಣ ಎಂಬ ಉಕ್ತಿಯನ್ನು ತಿಳಿಸುತ್ತದೆ.

ಬನ್ನಿ ನಲಿಯೋಣ

'ಬನ್ನಿ ಬನ್ನಿರಿ ನಲಿಯೋಣ
ಹೊಸತನವನ್ನು ತಿಳಿಯೋಣ
ಕಲ್ಪನೆ ಬೆನ್ನನು ಏರೋಣ
ಹಕ್ಕಿಗಳಾಗಿ ಹಾರೋಣ'[೧೦]

ಈ ಕವನದಲ್ಲಿ ಮಕ್ಕಳು ಕಲಿಯುವುದರ ಜೊತೆಗೆ ಕಲ್ಪನಾ ಲೋಕದಲ್ಲಿ ಹಕ್ಕಿಗಳಂತೆ ಹಾಗೆ ವಿಹರಿಸುವಂತೆ ಸಂತೋಷದ ಹೊನಲನ್ನು ಕವಿ ಇಲ್ಲಿ ತುಂಬಿದ್ದಾರೆ.

ಒಟ್ಟಾರೆಯಾಗಿ ಈ ತಾರೆಗಳ ಬಳಗದ ಪುಸ್ತಕ ಮಾಲೆಯಲ್ಲಿ ೪೦ ಮಕ್ಕಳ ಸಾಹಿತ್ಯ ಕವಿತೆಗಳಿದ್ದು, ಇವುಗಳಲ್ಲಿ ಬಾಮಾರವರು ಬಾಲ್ಯದ ಸಹಜ ತುಂಟಾಟಗಳ ಮಧುರತೆಯನ್ನು ಉಣಬಡಿಸಿದ್ದಾರೆ. ಈ ಕೃತಿಯಲ್ಲಿರುವ ಕವಿತೆಗಳನ್ನು ಡಾ. ಶಮಿತಾ ಮಲ್ನಾಡ್ ಅವರು ಸಂಗೀತ ಸಂಯೋಜಿಸಿ ಧ್ವನಿ ಸುರುಳಿ ಬಿಡುಗಡೆಗೊಳಿಸಿ ಜನಪ್ರಿಯಗೊಳಿಸಿದ್ದಾರೆ ಎಂದು ಬಾಮಾರವರು ಮುನ್ನುಡಿಯಲ್ಲಿ ಸ್ಮರಿಸಿಕೊಳ್ಳುತ್ತಾರೆ. ಅದೇ ರೀತಿಯಾಗಿ ಇನ್ನು ಮುಂದೆ ಇದೇ ತರಹದ ಕೃಷಿಯನ್ನು ಮಾಡುವುದರ ಜೊತೆಗೆ ವೃದ್ಧರಿಂದ ಅಬಾಲ, ಅನಕ್ಷರಿಂದ, ಅಕ್ಷರಸ್ಥ ನಾಗರೀಕ, ಅನಾಗರೀಕರಿಗೂ ಈ ಸಂಗೀತದ ಧ್ವನಿಯನ್ನು ಕೇಳಿಸುತ್ತಾರೆ ಎಂಬ ಆಶಯವನ್ನು ಸಹ ಹೊಂದಲಾಗಿದೆ.

ಚಿಂತನಾ ಬರಹಗಳು

'ಚಿಂತೆ' ಬೇರೆ, 'ಚಿಂತನೆ' ಬೇರೆ. ಚಿಂತೆ ಮನಸ್ಸನ್ನು ಖಿನ್ನತೆಗೆ ಒಳಪಡಿಸುತ್ತದೆ.ಆದರೆ ಚಿಂತನೆ ಮನುಷ್ಯನನ್ನು ಆನಂದದಲ್ಲಿ ತೇಲಿಸುತ್ತದೆ. ಭಾವಲೋಕದಲ್ಲಿ ವಿಹರಿಸುವಂತೆ ಮಾಡುತ್ತದೆ. ಹೊಸ ಹೊಸದನ್ನು ಸೃಷ್ಟಿಸುವಂತೆ ಮಾನವನನ್ನು ಪ್ರೇರೇಪಿಸುತ್ತದೆ.

ಚಿಂತನೆಯಿಂದಲೇ ಲೋಕದಲ್ಲಿ ಹೊಸ ಹೊಸದು ಹುಟ್ಟಿ ವೈವಿಧ್ಯತೆ ಮೆರೆದಿದೆ. ಈ ಚಿಂತನೆ ಕಲೆ ಸಾಹಿತ್ಯ ಮೊದಲಾದ ಕ್ಷೇತ್ರಗಳಲ್ಲಿ ತನ್ನ ತನವನ್ನು ರೂಪಿಸುತ್ತದೆ. ಚಿಂತನೆಯಿಂದ ಪರಿಣಾಮಕಾರಿಯಾದ ಸಾಹಿತ್ಯ ಹುಟ್ಟುತ್ತದೆ. ಅದು ಸೃಜನಶೀಲವಾಗಿಯೂ ಇರುತ್ತದೆ. ಚಿಂತನೆಯ ಹರವಿಗೆ ಮಿತಿ ಎಂಬುದಿಲ್ಲ. ಮನುಷ್ಯನ ಬದುಕು, ಸಮಾಜ, ಪ್ರಕೃತಿ, ಇಡೀ ಬ್ರಹ್ಮಾಂಡವೇ ಚಿಂತನೆಯ ವಸ್ತುವಾಗುತ್ತದೆ. ಬಾಗೂರರು ಚಿಂತಿಸಿದ ಸಂಗತಿಗಳೇ ಇಲ್ಲವೆನ್ನಬಹುದು. ಅಂತೆಯೇ ಅವರ ಚಿಂತನ ಬರಹಗಳಲ್ಲಿ ಹಲವಾರು ಸಂಗತಿಗಳು ಮೂರ್ತಗೊಂಡಿವೆ.

ಚಿಂತೆ ವ್ಯಕ್ತಿಗಳಲ್ಲಿ ಒಂದು ಸ್ಥೂಲ ರೂಪದ ಚಿಂತನೆಯನ್ನು ಮೂಡಿಸಿ ಆತನ ಉದ್ಧಾರಕ್ಕೆ ಮಾರ್ಗ ಮಾಡಿಕೊಡುತ್ತದೆ. ಅದೇ ಚಿಂತನೆ ತೀರಾ ಸೂಕ್ಷ್ಮವಾದಂತೆಲ್ಲ ವೈಯಕ್ತಿಕ ಮಿತಿಯನ್ನು ದಾಟಿ ಸಾಮೂಹಿಕ ನೆಲೆಗೆ ಬಂದಾಗ ನಾಡು ನುಡಿ, ಸಂಸ್ಕೃತಿ, ಚರಿತ್ರೆ, ತತ್ವಶಾಸ್ತ್ರ, ಸಾಹಿತ್ಯಗಳಂಥ ಮುಖ್ಯ ವಿಚಾರಗಳು ರೂಪ ಪಡೆಯುತ್ತವೆ. ಭೂತವರ್ತಮಾನದೊಂದಿಗೆ ಭವಿಷ್ಯವನ್ನು ಒಳಗೊಂಡಂತೆ ಗಂಭೀರವಾದ ಚಿಂತನೆಗಳು ಬರುವುದು ಇಲ್ಲಿಯೇ ಮುಖ್ಯವಾಗಿ ಗಮನಿಸಬೇಕಾದಂತಹ ಸಂಗತಿ.

ಕರ್ನಾಟಕದ ಚಿಂತನಾಕಾರರು ಬಹುಮುಖ್ಯವಾಗಿ ಕನ್ನಡ ನಾಡು-ನುಡಿ, ಭಾಷೆ, ಹಿರಿಮೆ, ಸಂಸ್ಕೃತಿಯ ಔನಿತ್ಯ ಹಾಗೂ ಭಾರತೀಯ ಇತಿಹಾಸದಲ್ಲಿ ಕರ್ನಾಟಕದ ಸ್ಥಾನ ಈ ಕುರಿತು ಪಂಡಿತ, ತಾರಾನಾಥ, ಆಲೂರು ವೆಂಕಟರಾವ್, ಶಂಬಾ ಜ್ಯೋಶಿ, ಮುಳಿಯ ತಿಮ್ಮಪ್ಪಯ್ಯ, ಡಿ.ವಿ.ಜಿ ಮತ್ತು ಇತರರು ಬಹಳ ಗಂಭೀರವಾಗಿಯೇ ಚಿಂತಿಸಿದ್ದಾರೆ. ಇವರಂತೆಯೇ ಚಿಂತನಾ

ಕಾರ್ಯದಲ್ಲಿ ತೊಡಗಿರುವ ಪ್ರಸ್ತುತ ಲಲಿತಕಲಾ ಅಕಾಡೆಮಿಯ ಸದಸ್ಯರಾದ ಕವಿ ಚಿತ್ರಕಲಾವಿದರಾದ ಬಾಗೂರು ಮಾರ್ಕಾಂಡೇಯ ಒಬ್ಬರು.

ಬಾಮಾ ಅವರ ಚಿಂತನೆಗಳು ಕನ್ನಡ ನಾಡು, ಭಾಷೆ, ಪರಿಸರ ಮತ್ತು ಚಿತ್ರಕಲೆಯ ಬಗ್ಗೆ ದೃಶ್ಯಭಾಷೆ ಮತ್ತು ಶಾಬ್ಧಿಕ ಭಾಷೆಗಳಲ್ಲಿ ತನ್ನ ಚಿಂತನೆಗಳನ್ನು ಈ ರೀತಿಯ ವಸ್ತು ವಿಷಯಗಳಲ್ಲಿ ಅವಲೋಕಿಸಬಹುದು.

ಕನ್ನಡ ಭಾಷೆ

'ಕರ್ನಾಟಕದಲ್ಲಿ ಬಹುಮುಖ್ಯವಾಗಿ ಚಿಂತಿಸಲ್ಪಟ್ಟಿರುವ ಅಂಶವೆಂದರೆ ಭಾಷೆ. ಕನ್ನಡ ಭಾಷೆ ಎಂಬುದು ಒಂದೇ ಅಲ್ಲ ಕವಿರಾಜ ಮಾರ್ಗಕಾರನು ೯ನೇ ಶತಮಾನದಲ್ಲಿಯೇ ದಕ್ಷಿಣೋತ್ತರ ಹಾಗೂ ಉತ್ತರೋತ್ತರ ಮಾರ್ಗಗಳನ್ನು ಕುರಿತು ಹೇಳಿದ್ದಾನೆ. ಸಾಹಿತ್ಯಿಕವಾಗಿ ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಎಂದು ಸ್ಥೂಲವಾಗಿ ನಾಲ್ಕು ಸ್ಥರಗಳಲ್ಲಿ ಹೇಳಲಾಗಿದೆ. ಈ ಮಾರ್ಗ ಮತ್ತು ಸ್ಥರಗಳು ಕನ್ನಡ ಭಾಷೆಯ ವಿಫುಲ ಬೆಳವಣಿಗೆಗೆ ಮತ್ತು ಪ್ರೌಢಿಮೆಯನ್ನು ಹೇಳುವುದಾಗಿದೆ. ಅಸಂಖ್ಯಾತವಾದ ಶಿಲಾ, ಶಾಸನಗಳು ವಿಫುಲವಾದ ಸಾಹಿತ್ಯ ರಚನೆಯಿಂದ ಕನ್ನಡ ಭಾಷೆಯನ್ನು ಎಷ್ಟು ಜನ ಆಡುತ್ತಿದ್ದರು ಎಂಬುದು ಮನದಟ್ಟಾಗುತ್ತದೆ. ಕವಿರಾಜ ಮಾರ್ಗದಿಂದ ಹಿಡಿದು ಇಂದಿನವರೆಗೆ ಬಂದಿರುವ ಕನ್ನಡ ಗ್ರಂಥಗಳನ್ನು ಒಮ್ಮೆ ಸೂಕ್ಷ್ಮವಾಗಿ ಅವಲೋಕಿಸಿದರೆ ಸಾಹಿತ್ಯ ಮುಖೇನ ವ್ಯಕ್ತವಾಗಿರುವ ರಾಜಮಹಾರಾಜುರಗಳ ವಿವರಗಳು ಸಮಾಜದ ಸ್ವರೂಪ ಹಾಗೂ ಚಿಂತನೆ, ಧರ್ಮ, ಮತಧರ್ಮಗಳನ್ನು ಕುರಿತು ಜಿಜ್ಞಾಸೆ, ಸಾಮಾಜಿಕ ಬದಲಾವಣೆಯ ಅಸ್ತ್ರವಾಗಿ ಸಾಹಿತ್ಯ ಭಾಷೆ ರಚನೆ ಹಾಗೂ ಕಲಿಕೆಗೆ ಅಗತ್ಯವಾದ ವಿಚಾರಗಳನ್ನು ಕಲೆ, ನೀತಿ, ಶೃಂಗಾರ ಮಾನವ ಮಾನವರ ನಡುವಣ ಸಂಬಂಧ ಇಂಥ ವಿಪುಲ ವಿವರಗಳೇ ಆ ಕಾಲದ ಭಾಷೆಯ ಪ್ರಾಬಲ್ಯವನ್ನು ಖಚಿತವಾಗಿ ನಿರೂಪಿಸುವುವಾಗಿದೆ.'[೧೧]

ಈ ಭಾಷಾ ಪ್ರಾಬಲ್ಯವು ಸದರಿ ಹೀಗೆ ಇಂದೇ ರಾಜಕೀಯವಾಗಿ ತನ್ನ ಹಿಡಿತದಲ್ಲಿಟ್ಟುಕೊಳ್ಳಲು ಬ್ರಿಟೀಷರು ಕರ್ನಾಟಕವನ್ನು ಹರಿದು ಹಂಚಿದರು. ಹೀಗೆ ಹರಿದು ಹಂಚಿ ಹೋಗಿದ್ದ ಕರ್ನಾಟಕವನ್ನು ಭಾಷಿಕವಾಗಿ ಒಂದುಗೂಡಿಸಲು ಕನ್ನಡ ನಾಡು ನುಡಿಯ 'ಚಿಂತಕರಾದ ಡೆಪ್ಯೂಟಿ ಚನ್ನಬಸಪ್ಪ' ಧಾರವಾಡದ ವಿದ್ಯಾವರ್ಧಕ ಸಂಘ, ಬೆನ್‌ಗರ್ ರಾಮರಾಯರು, ೧೯೧೫ರಲ್ಲಿ ಸ್ಥಾಪನೆಯಾದ ಕನ್ನಡ ಸಾಹಿತ್ಯ ಪರಿಷತ್ತು, 'ಆಲೂರು ವೆಂಕಟರಾಯರ–ಕರ್ನಾಟಕದ ಗತವೈಭವ' ಕುವೆಂಪು, ಬಿ.ಎಂ.ಶ್ರೀ. ಮುಂತಾದ ಸಾಹಿತಿಗಳು 'ಸ್ವತಂತ್ರ ಕರ್ನಾಟಕ', 'ಸಂಯುಕ್ತ ಕರ್ನಾಟಕ' ಪತ್ರಿಕೆಗಳ ಮೂಲಕ ಏಕೀಕರಣ ಬೆಳವಣಿಗೆಗೆ ಪ್ರಚೋದನೆ ನೀಡಿದರು.'[೧೨]

ಇಂತಹ ಪ್ರಚೋಧನೆಗಳು ಕನ್ನಡ ನಾಡು, ಭಾಷೆಯ ಹೋರಾಟಗಳ ಫಲವಾಗಿ ಅನೇಕ ಮುನ್ನಡೆಗಳನ್ನು ಸಾಧಿಸಿದೆ. ಇದಕ್ಕಾಗಿ 'ಗೋಕಾಕ್ ಚಳುವಳಿ' ಎಂಬ ಭಾಷಾ ಚಳವಳಿ ನಡೆದಿದೆ.

ಇದಕ್ಕೆ ಕಾರಣ ಕನ್ನಡದ ಪರಿಸ್ಥಿತಿಯಲ್ಲಿ ಹೆಚ್ಚಿನ ಬದಲಾವಣೆಗಳು ಆಗಿಲ್ಲದಿರುವುದು. ಜಾಗತೀಕರಣದ ಈ ಸಂದರ್ಭದಲ್ಲಿ ಇಂಗ್ಲೀಷ್ ಮತ್ತೆ ಮುಖ್ಯ ಸ್ಥಾನವನ್ನು ಆಕ್ರಮಿಸಿಕೊಳ್ಳುತ್ತಾ ದೇಶಭಾಷೆಗಳು ಹಿನ್ನಡೆ ಪಡೆಯುವ ಆಂತರಿಕ ನಿರ್ಮಾಣವಾಗಿರುವುದು. ಹೀಗಾಗಿ ಭಾಷಾ ಸಮಸ್ಯೆಯು ಕನ್ನಡ ಚಿಂತನೆಯ ಪ್ರಮುಖ ವಸ್ತುವಾಗಿ ಈಗಲೂ ಉಳಿದುಕೊಂಡಿದೆ.[೧೨] ಹೀಗೆ ಉಳಿದುಕೊಂಡಿರುವ ಭಾಷಾ ಸಮಸ್ಯೆಯನ್ನು ಕವಿ-ಚಿತ್ರಕಾರರಾದ ಬಾಮಾರವರು ಶಾಬ್ಧಿಕ ಮತ್ತು ದೃಶ್ಯ ಭಾಷೆಯಲ್ಲಿ ಹರಿದುಬಿಟ್ಟಿರುವ ಚಿಂತನಾಕಾರರಲ್ಲಿ ಇವರು ಒಬ್ಬರು. ಅವರ ಚಿಂತನಾ ಬರಹಗಳನ್ನು ಈ ರೀತಿಯಾಗಿ ಕಾಣಬಹುದು.

'ಕನ್ನಡ ಭಾಷೆಯ ವಿಷಯವಾಗಿ ಮೌಖಿಕವಾಗಿ ಹೋರಾಟ ಮಾಡಬಹುದು. ಜನರಲ್ಲಿ ಪ್ರಚೋದನೆಗೊಳ್ಳುವಂತ ಬರಹದ ರೂಪಗಳನ್ನು ಬಿತ್ತರಿಸಬಹುದು. ದೃಶ್ಯಾತ್ಮಕವಾಗಿ ಕಲಾಕೃತಿಗಳನ್ನು ರಚಿಸಬಹುದು. ಇನ್ನೂ ಅನೇಕ ಮಾಧ್ಯಮಗಳಲ್ಲಿ ಭಾಷೆಯ ಅರಿವುಗಳನ್ನು ತಿಳಿಸಬಹುದು. ಈ ತರಹದ ಭಾಷೆಯ ಅರಿವು ಮತ್ತು ಉಳಿವಿನ ತಿರುಳನ್ನು ಬಾಮಾರವರು ಕನ್ನಡದ ಭಾಷಾ ಬೆಳವಣಿಗೆಗೆ ಬರೀ ಭಾಷಣ ಮಾಡದೆ ಕೂಗಾಡಿ ಸದ್ದು ಮಾಡದೆ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ, ಸದ್ದಿಲ್ಲದೆ, ಕಲಿಯುವವರಿಗೆ ಸರಳವಾಗಿ ಕಡಿಮೆ ಅವಧಿಯಲ್ಲಿ ಕನ್ನಡ ಕಲಿಯಬಹುದಾದ 'ಕನ್ನಡ ಸೌರಭ'ವನ್ನು ಸತತ ಪರಿಶ್ರಮದಿಂದ ಅಪಾರ ಹಣ ಖರ್ಚು ಮಾಡಿ ತಯಾರಿಸಿದ ಕೀರ್ತಿ ಇವರದ್ದು.

ಗಣಕ ಯಂತ್ರದ ತಂತ್ರಾಂಶಗಳ ಅಭಿವೃದ್ಧಿ ಕ್ಷೇತ್ರಗಳಲ್ಲಿ ಭಾರತವಿಂದು ವಿಶ್ವದಲ್ಲೇ ಮುಂಚೂಣಿಯಲ್ಲಿರುವುದು ಭಾರತೀಯರಾದ ನಮಗೆ ಹೆಮ್ಮೆಯ ಸಂಗತಿ. ಆದಾಗ್ಯೂ ನಮ್ಮ ದೇಶದ ಅಗತ್ಯಗಳನ್ನು ಸ್ವಯಂ ಮನಗಂಡು ದೇಶೀಯ ಭಾಷೆ ಅಥವಾ ಶಿಕ್ಷಣ ಕ್ಷೇತ್ರಗಳನ್ನು ಈಗಿನ ಸ್ಥಿತಿಯಿಂದ ಸುಧಾರಿಸಲು ನೆರವಾಗಬಲ್ಲ ಪೂರಕ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಬೇಕಾಗಿರುವುದು ತುರ್ತು ಅಗತ್ಯವಾಗಿರುತ್ತದೆ.

ನಾಡಿನ ತಂತ್ರಾಂಶ ನಿಪುಣರು ತಾಯ್ನಾಡಿನ ಜನತೆಗೆ ಕಲಿಕೆಯಲ್ಲಿ ನೆರವಾಗಬಲ್ಲ ಸರಳ ತಂತ್ರಾಂಶಗಳನ್ನು ರೂಪಿಸುವುದರಿಂದ ಆತಂಕವಿಲ್ಲದಂತೆ ಎಲ್ಲರಿಗೂ ಕಲಿಕೆಯ ಅವಕಾಶ ತೆರೆದುಕೊಳ್ಳಲು ಸಾಧ್ಯವಾಗುತ್ತದೆ. ಅಂತೆಯೇ ಸಾಂಸ್ಕೃತಿಕಮಯವು ಚೇತೋಹಾರಿ ಬೆಳವಣಿಗೆಗೆ ವೇಗದ ಚಾಲನೆ ಪಡೆದುಕೊಳ್ಳುತ್ತದೆ. ಇಂದು ಸಾಫ್ಟ್‌ವೇರ್ ಕ್ಷೇತ್ರದಲ್ಲಿನ ಅನನ್ಯ ಸಾಧನೆಯಿಂದ ಕರ್ನಾಟಕವು ಭಾರತದಷ್ಟೇ ಅಲ್ಲ. ವಿಶ್ವದ ಗಮನ ಸೆಳೆದಿರುವುದು ಎಲ್ಲರಿಗೂ ಗೊತ್ತಿರುವ ವಿಷಯ ಈ ದಿಶೆಯಲ್ಲಿ ಕರ್ನಾಟಕಕ್ಕೆ ಅನ್ಯ ಭಾಷಿಕರ ವಲಸೆ ಹೆಚ್ಚಾಗುತ್ತಿದ್ದು, ರಾಜ್ಯದ ರಾಜಧಾನಿ ಬೆಂಗಳೂರು ಕನ್ನಡೆದ ವಾತಾವರಣದ ಬದಲು ಅನ್ಯ ಭಾಷೆಗಳಿಂದ ತುಂಬಿ ಕನ್ನಡ ನಾಡಿಗೆ ಸಿಗಬೇಕಾದ ಮನ್ನಣೆ, ಆಧ್ಯತೆ ದೊರೆಯುತ್ತಿಲ್ಲದಿರುವುದು ಅತ್ಯಂತ ನೋವಿನ ವಿಷಯ. ಇಂತಹ ಸಂದರ್ಭದಲ್ಲಿ

ರಾಜ್ಯಕ್ಕೆ ವಲಸೆ ಬಂದಿರುವ ವಿವಿಧ ಔದ್ಯೋಗಿಕ ಕ್ಷೇತ್ರಗಳಲ್ಲಿ ಕಾರ್ಯಮಗ್ನರಾಗಿರುವ ಅನ್ಯ ಭಾಷಿಕರು ಕನ್ನಡ ಕಲಿಯುವಂತಾಗಿ ನಾಡಿನ ಸಂಸ್ಕೃತಿಯ ಮುಖ್ಯವಾಹಿನಿಗೆ ಬರುವಂತಾಗಬೇಕು. ಇದಕ್ಕೆ ಪೂರಕ ವಾತಾವರಣ ಕಲ್ಪಿಸಲು ಕನ್ನಡ ಕಲಿಕೆಗೆ ಸರಳ ಅಥವಾ ಸುಲಭ ಮಾರ್ಗಗಳನ್ನು ತಾಂತ್ರಿಕವಾಗಿ ನಿರ್ಮಿಸಿಕೊಳ್ಳಬೇಕಾಗುತ್ತದೆ. ಇದು ರಾಜ್ಯದ ಮಕ್ಕಳಿಗೂ ಕಲಿಕೆಯಲ್ಲಿ ಹಿತವಾಗಿರುವಂತಿರಬೇಕು. ನಮ್ಮ ಸರ್ಕಾರದ ಐ.ಎ.ಎಸ್., ಐ.ಪಿ.ಎಸ್. ಹಾಗೂ ಇತರೆ ಅನ್ಯಭಾಷಿಕ ಅಧಿಕಾರಿ ವರ್ಗದವರಿಗೂ ಚುರುಕಾಗಿ ಕನ್ನಡ ಕಲಿಯಲು ಸ್ಫೂರ್ತಿಯಾಗುವಂತಿರಬೇಕು. ಇಂತಹ ಹಲವು ತುರ್ತು ಅವಶ್ಯಕತೆಗಳ ನಡುವೆ ಸುವರ್ಣ ಕರ್ನಾಟಕ ವರ್ಷಾಚರಣೆಯ ಸಂಭ್ರಮದ ಈ ಸಂದರ್ಭಕ್ಕೆ ನಮಗೊಂದು ಸಂತಸ, ಸಮಾಧಾನ ತರುವ ಹೊಸತೊಂದು ಕನ್ನಡ ಕಲಿಕಾ ತಂತ್ರಾಂಶವನ್ನು ಅನಾರಣಗೊಂಡಿರುವುದು ತಾಯ್ನಾಡಿನ ಸೌಭಾಗ್ಯ ಹಾಗೂ ಹೆಮ್ಮೆಯ ಸಂಗತಿಯಾಗಿದೆ. ಪ್ರತಿಭಾನ್ವಿತ ಶ್ರ ಈಯುತ ಕವಿ ಕಲಾವಿದರಾದ ಬಾಬೂರು ಮಾರ್ಕಂಡೇಯ ಅವರು ತಮ್ಮ ಎಂಟು ವರ್ಷಗಳ ಅವಿರತ ಶ್ರಮ ಹಾಗೂ ಪರಿಕಲ್ಪನೆ ಜಾಣ್ಮೆಯಿಂದ 'ಕನ್ನಡ ಸೌರಭ' ಎಂಬ ಹೆಸರಿನಲ್ಲಿ ಅತ್ಯಂತ ಕ್ಷಿತ್ರಗತಿಯಲ್ಲಿ, ಕಡಿಮೆ ವೇಳೆಯಲ್ಲಿ ಯಾರೇ ಗುರುಗಳ ನೆರವಿಲ್ಲದೆಯೇ ಸ್ವಯಂ ಬೋಧನೆಯೆಂಬಂತೆ ಕಲಿಯಬಹುದಾದ ತಂತ್ರಾಂಶವನ್ನು ತಯಾರಿಸಿದ್ದಾರೆ.

ಈ ತಂತ್ರಾಂಶದ ಪ್ರಕಾಶನ ವಿತರಣೆಯ ಹೊಣೆಯನ್ನು ನಾಡಿನ ಪ್ರಖ್ಯಾತ ಸಂಸ್ಥೆಯಾದ 'ಸುಭಾಷ್ ಎಂಟರ್ ಪ್ರೈಸಸ್' ಕೈಗೆತ್ತಿಕೊಂಡು ಕನ್ನಡದ ಮೇಲಿನ ಅಭಿಮಾನವನ್ನು ನಾಡು ನುಡಿಯ ಬಗ್ಗೆ ಇರುವ ಅವರ ಕಳಕಳಿಯನ್ನು ಈ ಮೂಲಕ ಸಾಭೀತುಪಡಿಸಿದೆಯೆಂದರೆ ಅತಿಶಯೋಕ್ತಿಯಾಗಲಾರದು. ಇದರ ಮಾಲೀಕರಾದ ನಾಗೇಶ್‌ರವರು ಮಾಡಿರುವ ಈ ಕಾರ್ಯ ಅತ್ಯಂತ ಸ್ತುತ್ಯಾರ್ಹವಾದ ಕೆಲಸ. ಅವರಿಗಿರುವ ಕನ್ನಡಾಭಿಮಾನ ಎಷ್ಟೆಂದರೆ ಸರ್ಕಾರವು ಮಾಡಬಹುದಾದ ಹಿರಿಯ ಕಾಯಕವನ್ನು ಅಪಾರ ಹಣ ವೆಚ್ಚ ಮಾಡಿ ಲಾಭನಷ್ಟದ ಬಗೆಗಿಂತಲೂ ಕನ್ನಡದ ಅಳಿವು ಉಳಿವಿಕೆಯಲ್ಲಿ ಸೇವೆ ಸಲ್ಲಿಸುವ ಮಹತ್ತರ ಕೆಲಸಕ್ಕೆ ಕೈ ಹಾಕಿ ಕನ್ನಡಿಗರೆಲ್ಲರ ಕಣ್ಮಣಿಯಾಗಿದ್ದಾರೆ. ಕನ್ನಡವನ್ನು ವಿಶ್ವವ್ಯಾಪಿಗೊಳಿಸುವ ಅವರ ಈ ಪ್ರಯತ್ನ ನಿಜಕ್ಕೂ ಕನ್ನಡಮ್ಮನಿಗೆ ಕೊಟ್ಟ ಅಮೂಲ್ಯ ಕೊಡುಗೆ ಎನ್ನಬಹುದು.

ಈ ತಂತ್ರಾಂಶವನ್ನು ಕುರಿತು ನಾಡಿನ ಎಲ್ಲಾ ದಿನಪತ್ರಿಕೆ, ಮಾಧ್ಯಮಗಳು ಪ್ರಕಟಿಸಿದ ವರದಿಗಳನ್ನೂ, ನಾಡಿನ ಗಣ್ಯರು 'ಕನ್ನಡ ಸೌರಭ'ದ ಬಗ್ಗೆ ಹಾರೈಸಿ ಬರೆದ ಆಯ್ದ ಸಾಲುಗಳನ್ನು ಇಲ್ಲಿ ಕಾಣಿಸಲಾಗಿದೆ.

ಡಾ. ವೀರೇಂದ್ರ ಹೆಗ್ಗಡೆ : ಈ ತಂತ್ರಾಂಶ ಕುರಿತು ಶ್ರೀ ಬಾಗೂರು ಮಾರ್ಕಾಂಡೇಯ ಅವರು ಸತತ ಪರಿಶ್ರಮದೊಂದಿಗೆ ಆವಿಷ್ಕಾರ ಮಾಡಿ ರೂಪಿಸಿರುವ 'ಕನ್ನಡ ಸೌರಭ' ಎಂಬ ತಂತ್ರಾಂಶದ ಮೂಲ ರೂಪವನ್ನು ಕುತೂಹಲದಿಂದ ನೋಡಿದ್ದೇನೆ. ಇದೊಂದು ಅದ್ಭುತ

ಪ್ರಯತ್ನವಾಗಿದೆ. ಇಂದಿನ ಯುಗದಲ್ಲಿ ವಿದ್ಯಾರ್ಥಿಗಳಿಗೆ ಮತ್ತು ಕನ್ನಡೇತರರಿಗೆ ಕನ್ನಡ ಭಾಷೆ ಕಲಿಕೆಗೆ ಸುಲಭ ಸಾಧನವಾಗಿ ಇದು ತುಂಬಾ ಅನುಕೂಲವಾಗಿದೆ. ಅಕ್ಷರಗಳು, ವಸ್ತುಗಳ ವಿವರಣೆ ಮತ್ತು ಆಕರ್ಷಕ ಚಿತ್ರಗಳ ಮೂಲಕ ಭಾಷೆಯನ್ನು ಕಲಿಸುವ ವಿಧಾನವನ್ನು ನೋಡುತ್ತಾ ನೋಡುತ್ತಾ ಆನಂದಿಸಿದ್ದೇನೆ. ಇಂತಹ ಅವಕಾಶಗಳು ಇಂಗ್ಲೀಷ್ ಮತ್ತು ವಿದೇಶಿ ಭಾಷೆಗಳಲ್ಲಿ ಮಾತ್ರ ಸಾಧ್ಯ ಎಂದು ತಿಳಿದುಕೊಂಡಿದ್ದು, ನಮಗೆ ಕನ್ನಡದಲ್ಲಿಯೂ ಇಂತಹ ಪ್ರಯತ್ನ ಸಾಧ್ಯ ಎಂದು ತಿಳಿದು ಸಂತೋಷವಾಯಿತು. ಇಂತಹ ತಂತ್ರಾಂಶ ಮೂಲ ಜನಕನೆಂದು 'ಅವರಿಗೆ ಕೀರ್ತಿ ದೊರಕಲೆಂದು ಆಶಿಸುತ್ತಾ ಶುಭವನ್ನು ಹಾರೈಸುತ್ತೇನೆ'[೧೪] ಎಂದು ಭಾಮಾ ಅವರನ್ನು ಅಭಿನಂದಿಸಿದ್ದಾರೆ.

ಕೆ.ಎಸ್.ನಿಸಾರ್ ಅಹಮದ್: 'ಶರವೇಗದಲ್ಲಿ ಸಾಗುತ್ತಿರುವ ಹಾಗೂ ನಮ್ಮ ಬದುಕನ್ನು ಹಿಂದೆಂದೂ ಇಲ್ಲದಂತೆ ಪ್ರಭಾವಿಸುತ್ತಿರುವ ತಂತ್ರಜ್ಞಾನವನ್ನು ಕನ್ನಡದಲ್ಲಿ ಬಳಸಿ ದೃಶ್ಯಗಳ ಮೂಲಕ ಭಾಷೆಯನ್ನು ಕಲಿಸುವ ಈ ವಿಧಾನವನ್ನು ಕನ್ನಡದಲ್ಲಿ ಮೊಟ್ಟ ಮೊದಲಿಗೆ ಬಾಗೂರು ಮಾರ್ಕಾಂಡೇಯ ಪ್ರಯೋಗಿಸಿದ್ದಾರೆ.'[೧೫] ಈ ಹೊಸ ಕಾಯಕದಲ್ಲಿ ಇನ್ನೂ ಹೆಚ್ಚು ಕಳಕಳಿಯಿಂದ ಅವರು ಮುಂದುವರೆಯಲು ತಮ್ಮೂಲಕ ಕನ್ನಡ ಭಾಷೆಯ ಕಲುಸುವಿಕೆಗೆ ಪ್ರತೀಕವಾಗಲೆಂದು ಹಾರೈಸಿದ್ದಾರೆ.

ಡಾ. ದೊಡ್ಡರಂಗೇಗೌಡರು: ಕಲಾವಿದ ಶ್ರೀ ಬಾಗೂರು ಮಾರ್ಕಾಂಡೇಯ ಅವರು 'ಚಿರಂತನವಾದ ಗಣಕಯಂತ್ರದ ಪಾಠಗಳನ್ನು ಆವಿಷ್ಕಾರ ಮಾಡಿದ್ದಾರೆ. ಇಲ್ಲಿ ಅವರ ಅದ್ಭುತ ಸೃಜನಶೀಲತೆ ಇದೆ. ಎಳೆಯರ ಮನಸ್ಸಿಗೆ ಹಿಡಿಯುವ ಹಾಗೂ ಪ್ರತಿ ಗಳಿಗೆಯೂ ಸಂತೋಷ ಪರಿಪ್ಲುತವಾಗುವ ಹಾಗೆ ದಣಿವಿಲ್ಲದೆ ಕಲಿಯಲು ಎಲ್ಲಾ ರೀತಿಯ ವಿನ್ಯಾಸಗಳನ್ನು ಮಾಡಿದ್ದಾರೆ. ಇಲ್ಲಿ ಜ್ಞಾನದ ಹೊಳೆಯಿದೆ, ವಿದ್ಯೆ ಕಡೆಗೆ ಮಗು ಆಸಕ್ತಿ ತಳೆಯುವ ಹಾಗೆ ಲಯಬದ್ಧ ಮಾತುಗಳಿವೆ, ಪೂರಕವಾದ ಚಿತ್ರಗಳಿವೆ. ಕನ್ನಡದ ಸೊಗಡಿದೆ. ಎಲ್ಲಕ್ಕಿಂತ ಮಿಗಿಲಾಗಿ ಕರ್ನಾಟಕದ ಮಣ್ಣಿನ ಕಂಪಿನ ಜಾಯಮಾನವೇ ಇಲ್ಲಿ ಕಲಿಕಾ ಪಾಠಗಳಾಗಿ ಕವಿ ಶ್ರೀ ಬಾಗೂರು ಮಾರ್ಕಾಂಡೇಯ ಅವರಿಂದ ಕಲಾತ್ಮಕವಾಗಿ ರೂಪ ತಳೆದಿದೆ. ಈ ನುಡಿ ರೂಪಕದ ಹಿಂದೆ ಕಲಾವಿದರ ಅಭಿರುಚಿಯಿದೆ. ಕವಿಯ ಸಾಹಿತ್ಯ ಅರಿತ ಸೌರಭ ಇದೆ. ಹಲವು ಹನ್ನೊಂದು ಹೂಗಳಿಂದ ಹೀರಿದ ಕಂಪಿದೆ. ಅಕ್ಷರ ವಿನ್ಯಾಸ ರೂಪದಲ್ಲಿ ಕನ್ನಡ ಕಂಪು ಎದ್ದು ಕಾಣುತ್ತದೆ ಎಂದು ಹಾರೈಸಿದ್ದಾರೆ.'[೧೬]

ಬಂದಿತು ಕನ್ನಡಕ್ಕೆ ಎಂಟನೇ ಜ್ಞಾನಪೀಠ ಪ್ರಶಸ್ತಿ:

'ನಮ್ಮಲ್ಲಿ ಜ್ಞಾನಪೀಠ ಪಡೆದ ಅಷ್ಟಾದಿಪತಿಗಳು
ಸಕಲರಿಗೂ ಸಾಹಿತ್ಯ ದಾಸೋಹ ಗೈಯ್ಯುತಿಹುದು
ಸಂಸ್ಕೃತಿಯ ಸೌರಭವನು ವಿಶ್ವಕ್ಕೆ ಹಂಚಿಹರು
ಹಿರಿಮೆಯ ತಂದಿತ್ತು ಭುವನೇಶ್ವರಿಗೆ ಜೈ ಎನ್ನುವರು.'[೧೭]

ನಮ್ಮ ಕನ್ನಡ ಅಷ್ಟ ದಿಗ್ಗಜರು ಸಾಹಿತ್ಯದ ಭೋಜನವನ್ನು ಎಲ್ಲರಿಗೂ ಸವಿಸುವರು ಮತ್ತು ನಾಡಿನ ಸಂಸ್ಕೃತಿಯ ಪತಾಕೆಯನ್ನು ಉನ್ನತ ಶಿಖರದಲ್ಲಿರಿಸಿ ತಾಯಿ ಭುವನೇಶ್ವರಿಯ ಸೇವೆಯನ್ನು ಮಾಡುತ್ತಿರುವರು. ಇವರಂತಹ ತ್ಯಾಗಾಭಿಮಾನಗಳನ್ನು ಕನ್ನಡಿಗರು ರೂಢಿಸಿಕೊಳ್ಳಲಿ ಎಂದು ಹಾರೈಸುವಂತ ಸಾರವನ್ನು ಈ ಕವಿತೆಯಲ್ಲಿ ಕಾಣಬಹುದು.

ಪರಿಸರ:

ಪರಿಸರದ ಚಿಂತಕರಾದ ಪೂರ್ಣಚಂದ್ರ ತೇಜಸ್ವಿನಿ, ಶಿವರಾಮ ಕಾರಂತರು, ನಾಗೇಶ್ ಹೆಗಡೆ, ಚಂದ್ರಶೇಖರ ನಂಗಲಿ ಮತ್ತು ಇತರರು ಇವರ ನಿಲುವುಗಳ ಚಿಂತನೆಯಲ್ಲಿ ತೊಡಗಿರುವ ಪ್ರಸ್ತುತ ಲಲಿತಕಲಾ ಅಕಾಡೆಮಿ ಸದಸ್ಯರಾದ ಕವಿ–ಚಿತ್ರಕಲಾವಿದರಾದ ಬಾಗೂರು ಮಾರ್ಕಾಂಡೇಯ ಅವರೂ ಒಬ್ಬರೆಂದು ಹೇಳಬಹುದು.

ಇವರ ಪರಿಸರದ ಚಿಂತನೆಗಳು ಮಕ್ಕಳು ಚಿಕ್ಕವರಿದ್ದಾಗಲೇ ಪರಿಸರದ ಬಗ್ಗೆ ಅರಿವು ಮೂಡಿಸಬೇಕು ಎಂದು ಮಕ್ಕಳಿಗಾಗಿಯೇ ಪರಿಸರದ ಕುರಿತಾಗಿ ಗೀತೆಗಳನ್ನು ಬರೆದು ಧ್ವನಿ ಸಾಂಧ್ರಿಕೆಯಲ್ಲಿ ಮುದ್ರಿಸಿ ಪ್ರತಿಶಾಲೆ, ಕಾಲೇಜುಗಳಿಗೆ ಸಂಗೀತಗಾರರು ಹೋಗಿ ಹಾಡುಗಳನ್ನು ಕಲಿಸಿಕೊಡುವ, ಪರಿಸರದ ಬಗ್ಗೆ ತಿಳಿಹೇಳುವ ಶಾಲೆಯ ಸುತ್ತಲೂ ಗಿಡಗಳನ್ನು ನೆಡೋದಕ್ಕೆ ಪ್ರಚೋದಿಸುವ ಹಾಗೂ ಮಕ್ಕಳಲ್ಲಿ ಆ ಬಗ್ಗೆ ಅರಿವು ಉಂಟುಮಾಡುವ ವಿಶಿಷ್ಟವಾದ ಯೋಜನೆಯನ್ನು ಕಾರ್ಯಗತ ಮಾಡಿದ್ದಾರೆ.

'ಪರಿಸರ ಎಷ್ಟೊಂದು ಸುಂದರ.... ಪ್ರಕೃತಿಯ ವೈವಿಧ್ಯತೆ ರಮಣೀಯತೆ, ನಿಗೂಢತೆ, ಮನವನಾವರಸಿ ಉಲ್ಲಾಸಗೊಳಿಸಿ ತೇಲಿಸುವಂಥಾದ್ದು ಅಲ್ಲದೇ ಜೀವ ಜೀವಿಗಳು ಇಂದು ಪರಿಸರದ ಕೊಡುಗೆಯಿಂದಲೇ ಜೀವಿಸಿರುವುದು ಎಂಬುದೊಂದು ಸತ್ಯವನ್ನು ನಾವು ಅಲ್ಲಗಳೆಯುವಂತಿಲ್ಲ ಅಲ್ಲವೇ?'[೧೮] ಎಂಬ ಸಾರವನ್ನು ತಿಳಿಸುತ್ತಾರೆ.

ವಿಶ್ವವಿಂದು ಪರಿಸರದ ಉಳಿವಿಗಾಗಿ ಏನೆಲ್ಲ ಯೋಚನೆ, ಯೋಜನೆಗಳಿಗೆ ಕಾರ್ಯರೂಪಗೊಟ್ಟು ಕಾರ್ಯಗತ ಮಾಡಹೊರಟರೂ ಆಗುತ್ತಿರುವ ಮಾಲಿನ್ಯ ಕಡಿಮೆ ಮಾಡಲು ಆಗುತ್ತಿಲ್ಲವೆಂಬುದೇ ಇಂದು ಎಲ್ಲ ಆತಂಕಕ್ಕೂ ಕಾರಣವಾಗಿದೆ. ಹಾಗೆಂದು ಕೈಕಟ್ಟಿ ಕುಳಿತರೆ ಏನೂ ಆಗದು. ಆದ್ದರಿಂದ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡುವುದು ಒಳಿತು ಅಂತಲೇ ಪರಿಸರದ ಬಗ್ಗೆ ಬಾಲ್ಯ ಕಾಲದಲ್ಲೇ ಅರಿವನ್ನು ಉಂಟುಮಾಡುವುದು ಮುಖ್ಯ ಎಂದು ನಂಬಿ ಇಂಥದೊಂದು ಸಮಾಜಮುಖಿ ಪ್ರಯತ್ನವನ್ನು ಮಾಡಹೊರಟಿದ್ದೇವೆ. ಅದುವೆ 'ಪರಿಸರ ಜಾಗೃತಿಗೆ ಗೀತಗಾಯನ ಗಿಡ ನೆಡುವ ನಡೆ.'

ಇಲ್ಲಿನ ಗೀತೆಗಳು ಪರಿಸರದ ಬಗೆಗಿನವುಗಳಾಗಿದ್ದು ಸಮಯೋಚಿತವಾಗಿ ಬರೆದಂಥವುಗಳು ಅಲ್ಲದೆ ಇಂದು ಅತ್ಯಂತ ಅವಶ್ಯವೆನಿಸುವ ವಿಷಯವೊಂದನ್ನು ಸಮಾಜದ ಹಿತಚಿಂತನೆಯಿಂದ

ಆಯ್ಕೆ ಮಾಡಿಕೊಂಡು ಇದಕ್ಕೊಂದು ಹೊಸ ಆಯಾಮವನ್ನು ಕೊಟ್ಟ ಕಾರ್ಯಗತಗೊಳಿಸಲು ಸನ್ನದ್ಧಗೊಳಿಸಿದುದಾಗಿದೆ. ಆ ಗೀತೆಗಳು ಈ ಕೆಳಗಿನಂತಿವೆ.

ಅಪ್ಪ ನೆಟ್ಟ ಗಿಡವೊಂದೀಗ

'ತಂಪನೆ ನೆರಳು ಛತ್ರಿಯ ತೆರನಿದೆ
ತಲೆಯನು ತೂಗುವುದು
ಪ್ರಾಣಿಪಕ್ಷಿಗಳ ನೆಲೆಯದಾಗ
ಹೊಸ ಜಗವನೇ ಸೃಜಿಸಿಹುದು ಹೊಸ ಜಗವನೇ ಸೃಜಿಸುವುದು.'[೧೯]

ಈ ಕವನದಲ್ಲಿ ತಂದೆ ಹಾಕಿದ ಮರದಲ್ಲಿ ಹಕ್ಕಿ-ಪಕ್ಷಿಗಳು ಸ್ವತಂತ್ರವಾಗಿ ಸುಸ್ವರ ಧ್ವನಿಯನ್ನು ಪಾಡುತ್ತಿವೆ. ಛತ್ರಿಯಂತೆ ಹರಡಿಕೊಂಡು ತಂಪಾದ ನೆರಳನ್ನು ಪ್ರಾಣಿಗಳಿಗೆ ಕೊಡುತಿಹ ಜೊತೆಗೆ ಏನೋ ಒಂದು ತರನಾದ ಹೊಸ ಜಗತ್ತನ್ನು ಸೃಷ್ಟಿಸಿದಂತೆ. ಈ ಮರ ಮಗನ ಮನದಲ್ಲಿ ಬೇರೂರಿದ ಮಾತುಗಳನ್ನು ಹೊರಹೊಮ್ಮಿಸುತ್ತಿದೆ ಎಂದು ಹೇಳಬಹುದು.

ಮರವೇ ಮರವೇ ಮರವೇ

'ಓ ಮರವೇ ಮರವೇ
ನಮ್ಮನೆಲ್ಲರ ಕಾಯುವ ಭಾಗ್ಯವೇ
ಸಂತಸ ನೀನದೆ ನೋಡು
ಹರುಷದ ಚಿಲಿಪಿಲಿ ಹಾಡು
ಹರೆಹರೆಯಲ್ಲಿ ಹಕ್ಕಿಯ ಗೂಡು.'[೨೦]

ಬಾಗೂರರು ತಂತ್ರಾಂಶದಲ್ಲಿ ಜೊತೆಗೆ ಸಾಹಿತ್ಯದಲ್ಲಿ ಕನ್ನಡ ನಾಡು-ನುಡಿಯ ಬಗ್ಗೆ ರಥವನ್ನು ಎಳೆದಿರುವ ಚಿಂತನೆಗಳು ಕಂಡುಬರುತ್ತವೆ.

'ಚಳಿಗದಿರು' ಎಂಬ ಅವರ ಕವನ ಸಂಕಲನದಲ್ಲಿರುವ ಕನ್ನಡ ಪರ ಚಿಂತನಾ ಬರಹಗಳನ್ನು ಕವಿತೆಗಳಲ್ಲಿ ವ್ಯಕ್ತಪಡಿಸಿದ್ದಾರೆ.

ನಮ್ಮ ನುಡಿರಥ ಎಳೆವ

"ನಮ್ಮ ನುಡಿ ರಥ ಎಳೆವ ಬನ್ನಿ ಕನ್ನಡಿಗರೆ
ಬನ್ನಿ ಅಭಿಮಾನದಿ ಮುನ್ನಡೆಸುವ ಹೃದಯವಂತಕೆ
ಗತ ಇತಿಹಾಸ ವೈಭವ ಕಂಡಂಥದು
ಧೀರ ಶೂರರ ಪಡೆದಂಥ ಬೀಡಿದು
ಸಾಹಿತ್ಯ ಕಲೆಯಲ್ಲಿ ಶ್ರೀಮಂತವಾದುದು

ಕನ್ನಡದ ಕೀರ್ತಿ ಕಹಳೆ ವಿಶ್ವಕ್ಕೆ ಕೇಳಿಸಿದುದು
ಪಂಪ ರನ್ನ ಷಡಕ್ಷರಿ ಕುಮಾರವ್ಯಾಸ ಆಡಿದುದು
ಜಾನಪದ ಜಂಗಮರು ಉಲಿದ ನಲಿದ ನಾಡಿದು'[೨೧]

ಈ ಕವಿತೆಯಲ್ಲಿ ಜಾನಪದರು ಜಂಗಮರು ಪಂಪ, ರನ್ನ, ಕುಮಾರವ್ಯಾಸ, ಷಡಕ್ಷರಿಯರು ನಮ್ಮ ನಾಡನ್ನು ಲಲಿತಕಲೆಗಳಿಂದ ಶ್ರೀಮಂತಗೊಳಿಸಿದವರು. ಇಂತಹ ನಾಡಿನ ಕಲೆಗಳ ರಥವನ್ನು ನಾವೆಲ್ಲರು ಐಕ್ಯತೆಯಿಂದ ಎಳೆಯೋಣ ಎಂಬ ತಿರುಳಿನ ಕಂಪನ್ನು ಸೂಸಿಸುತ್ತದೆ.

ಕನ್ನಡ ನುಡಿ ರಥವನ್ನು ಎಳೆವ

'ಗಂಗೆ ತುಂಗೆ ಕಾವೇರಿ ಯಮುನೆ ಹರಿವಳಿಲ್ಲಿ
ಗೋದಾವರಿ ಭೀಮೆ ಕನ್ನಡಿಗರಿರುವಲ್ಲಿ
ಕಡಲಿನಾ ಕರಾವಳಿಯ ಸೊಬಗು ಜಲಪಾತದ ಮೆರಗು
ಕನ್ನಡ ನುಡಿರಥವನ್ನು ಎಳೆವ ಬನ್ನಿ ಸುಜನರೆ'[೨೨]

ನಮ್ಮ ಕರ್ನಾಟಕ ಭೌಗೋಳಿಕವಾಗಿ ಗಂಗೆ, ತುಂಗೆ, ಕಾವೇರಿ, ಗೋದಾವರಿ, ಕರಾವಳಿಯ ಸೊಬಗು, ಗಗನಚುಕ್ಕಿ, ಭರಚುಕ್ಕಿ, ಜೋಗ, ಇತರೆಯವು ಎಲ್ಲರ ಮನ ತಣಿಸುವ ಸೌಂದರ್ಯಯುಕ್ತವಾದ ಕನ್ನಡ ನುಡಿಯ ರಥವು ರಾರಾಜಿಸುತ್ತಿದೆ. ಇದನ್ನು ಕನ್ನಡಿಗರಾದ ನಾವು ಮುನ್ನಡೆಸಬೇಕು ಎಂಬ ಸಾರದ ಉಯಿಲನ್ನು ತಿಳಿಸುತ್ತಿದೆ.

ಕಾರ್ಖಾನೆ ಕಾರ್ಕೋಟಕ

'ಕಾರ್ಖಾನೆಯ ಕಾರ್ಕೋಟಕ ವಿಷಗಾಳಿಯ
ಕಲುಷಿತವಾಗಿಸಿದೆ ಪರಿಸರ
ಕಣ್ತೆರೆಯದೆ ಕುಳಿತರಿನ್ನು ಅಳಿವು ಜಗಕೆ
ಗಿಡನೆಟ್ಟು ಸಂರಕ್ಷಿಸುವ ಬಾ ಸರಸ'[೨೩]

ಈ ಕವಿತೆಯಲ್ಲಿ ಕೈಗಾರಿಕೀಕರಣದಿಂದ ವಾಯುಮಾಲಿನ್ಯವಾಗುತ್ತಿದೆ. ಸುಮ್ಮನೆ ಕೂರದೇ ಇದನ್ನು ನಿವಾರಿಸಲು ತಲೆಗೊಂದು ಗಿಡನೆಡುವಂತ ಪರಿಸರ ಬೆಳಸಿ ಒಳ್ಳೆಯ ಮಾಲಿನ್ಯವನ್ನು ಸೇವಿಸೋಣ ಎಂಬುದನ್ನು ತಿಳಿಸುವಂತಿದೆ.

ಬಾಗೂರರ ಒಟ್ಟಾರೆ ಈ ಕವಿತೆಗಳಲ್ಲಿ ನಮ್ಮ ನಾಡು, ಸಾಂಸ್ಕೃತಿಯಿಂದ ಸಾಹಿತಿಗಳು (ಅಷ್ಟ ದಿಗ್ಗಜರು) ಕೃಷ್ಣತುಂಗೆಯರ, ಗಗನ ಚುಮ್ಮಿಕ್ಕುವ ಸೌಂದರ್ಯಯುತ ಜಲಪಾತಗಳನ್ನೊಂದಿದ ನಾಡು ಇತ್ತೀಚಿಗೆ ಪರಿಸರದಿಂದ ಈ ಸೌಂದರ್ಯ, ನಮ್ಮ ಆರೋಗ್ಯ ಎಲ್ಲ ಕಲುಶಿತಗೊಳ್ಳುತ್ತಿದೆ. ಇದನ್ನು ತಡೆಗಟ್ಟಬೇಕಾದರೆ ಪರಿಸರದ ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಹೊಣೆ ಎಂದು ಗಂಭೀರವಾಗಿ ತಿಳಿದುಕೊಳ್ಳುವಂತಹ ವಿಷಯಗಳ ಸಾರವನ್ನು ತಿಳಿಸುತ್ತಿವೆ.

ಭಾವಗೀತೆಗಳು

'ಇಂಗ್ಲೀಷ್ ಸಾಹಿತ್ಯದಿಂದ ಕನ್ನಡಕ್ಕೆ ಲಭ್ಯವಾದ ಸಾಹಿತ್ಯ ರೂಪಗಳಲ್ಲಿ ಮುಖ್ಯವಾದದ್ದು ಒಂದು ಭಾವಗೀತೆ. ವ್ಯಕ್ತಿಯ ಭಾವಗಳಿಗೆ ಅಭಿವ್ಯಕ್ತಿಕೊಡುವ ಕವನ ಭಾವಗೀತೆ. ಸಾಮಾನ್ಯವಾಗಿ ಇದು ರಸ್ವವಾದದ್ದು. ಆದರೆ (ಪ್ರಗಾಥ ಭಾವಗೀತೆಯ ಒಳರೂಪ ಇದು ತಕ್ಕಷ್ಟು ದೀರ್ಘವಾದದ್ದೇ. ವರ್ಡ್ಸ್‌ವರ್ತನ ಪ್ರಸಿದ್ಧ 'ಇಮ್ಮಾರ್ಟ್ಯಾಲಿಟಿ ಓಡ್'ನಲ್ಲಿ ೨೦೦ಕ್ಕೂ ಹೆಚ್ಚು ಪಂಕ್ತಿಗಳಿವೆ) ಭಾವಗೀತೆ ಒಂದು ಕೇಂದ್ರ ಭಾವಕ್ಕೆ ಭಾಷೆಯ ಶರೀರವನ್ನು ಕೊಡುತ್ತದೆ. ಅಷ್ಟ ಷಟ್ಪದಿ, ಪ್ರಗಾಥ ಶೋಕ ಗೀತೆ ಇದೆಲ್ಲ'[೨೪] ಭಾವಗೀತೆಯ ಒಳಪ್ರಕಾರಗಳು ಶೇಕ್ಸ್‌ಪಿಯರ್, ಸ್ಪೆನ್ಸರ್, ವರ್ಡ್ಸ್‌ವರ್ತ್, ಶಲ್ಲಿ, ಕೀಟ್ಸ್, ಭೈರನ್ ಇನ್ನೂ ಅನೇಕ ಕವಿಗಳು ೧೯ನೇ ಶತಮಾನದ ಅಂತ್ಯದವರೆಗಿನ ಇಂಗ್ಲೀಷ್ ಸಾಹಿತ್ಯ ಚರಿತ್ರೆಯಲ್ಲಿ ಭಾವಗೀತೆಗಳ ಪ್ರಸಿದ್ಧ ಕವಿಗಳು ಇವರು ಕನ್ನಡ ನವೋದಯ ಕಾವ್ಯದ ಮೇಲೆ ಪ್ರಭಾವಬೀರಿದರು.'[೨೫]

ಕನ್ನಡ ಸಾಹಿತ್ಯದಲ್ಲಿ ಪ್ರಮುಖವಾಗಿ ಭಾವಗೀತೆಗಳನ್ನು ಸೃಜಿಸಿದವರಲ್ಲಿ ಬೇಂದ್ರೆ, ಕುವೆಂಪು, ಕೆ.ಎಸ್.ನರಸಿಂಹಸ್ವಾಮಿ, ಇವರನ್ನು ಕಲೆತಂತೆ ಇತ್ತೀಚಿನ ಉದಯೋನ್ಮುಖ ಕವಿಗಳೂ ಕೂಡ ಭಾವಗೀತೆಗಳನ್ನು ರಚಿಸುತಲಿದ್ದಾರೆ. ಅಂತಹವರಲ್ಲಿ ಕವಿ, ಚಿತ್ರಕಾರರಾಗಿ ಗುರುತಿಸಿಕೊಂಡಿರುವ ಬಾಗೂರು ಮಾರ್ಕಾಂಡೇಯ ಅವರು ತಮ್ಮದೇಯಾದ ನೆಲೆಯ ಮೂಲಕ ಭಾವಗೀತೆಗಳನ್ನು ಕೇವಲ ಅಕ್ಷರಗಳ ಮೂಲಕವಲ್ಲದೆ ರೇಖಾಚಿತ್ರಗಳ ಮೂಲಕ ಆ ಗೀತೆಗಳನ್ನು ಓದುಗರಿಗೆ ಅರ್ಥ ಮಾಡಿಸಹೊರಟಿದ್ದಾರೆ. ಇದಲ್ಲದೆಯೂ ಈಪದ್ಯ ಸಂಗ್ರಹದ ಮತ್ತೊಂದು ವೈಶಿಷ್ಟವೆಂದರೆ ಇದರಲ್ಲಿರುವ ಎಲ್ಲಾ ಪದ್ಯಗಳನ್ನು ಅವರ ಸುಂದರ ಕೈಬರಹದಲ್ಲೇ ಮೂಡಿಬಂದಿವೆ. ಜೊತೆಗೆ ಇಲ್ಲಿನ ಕವಿತೆಗಳನ್ನು ಐದು ಜನ ಪ್ರಮುಖ ಸುಗಮ ಸಂಗೀತ ನಿರ್ದೇಶಕರು ಸುಶ್ರಾವ್ಯವಾದ ಮಟ್ಟುಗಳಲ್ಲಿ ಹಾಕಿ ಸಿಡಿಯ ರೂಪದಲ್ಲಿ ಕನ್ನಡಿಗರಿಗೆ ಕೇಳಿಸುತ್ತಿರುವುದು ಅವರ ಪ್ರಯತ್ನವಾಗಿದೆ. ಇಂತಹ ಅಪರೂಪದ ವ್ಯಕ್ತಿ ಸಿಗುವುದು ಬಹಳ ವಿರಳ. ಅವರ ಭಾವಗೀತೆಗಳ ಸಂಗ್ರಹವಾದ ರಾಧಾಮಾಧವರ ಒಲುಮೆ ಚಿತ್ತಾರ ಎಂಬ ಪುಸ್ತಕದಲ್ಲಿಯ ಭಾವಗೀತೆಗಳ ಮುಖ್ಯ ವಸ್ತುವೆಂದರೆ ಪ್ರೀತಿ–ಪ್ರಣಯ, ವಿರಹ ತತ್ಸಂಬಂದವಾದ ಸುಕೋಮಲ ಭಾವಗಳು ಅವರ ಕವಿತೆಗಳಲ್ಲಿ ಎದ್ದು ಕಾಣುವ ಅಂಶಗಳನ್ನು ಕಾಣಬಹುದು.

ಇವರು ರಚಿಸಿರುವ ಭಾವಗೀತೆಯ ಪುಸ್ತಕಗಳು ಇಂತಿವೆ. ರೇಖಾಂತರಂಗದ ಭಾವಗುಸುಮ, ಭಾವಶಿಲ್ಪ, ಭಾವೋನ್ಮಾದಿನಿ, ಭಾವಸಮ್ಮಿಲನ, ಕೊಳಲದನಿ, ಕಾವ್ಯಕನ್ನಿಕೆ, ಚೈತ್ರ ಚೆಲುವು, ಸುವರ್ಣ ಪುತ್ಥಳಿ, ಸ್ವರಸಿರಿಯ ಸ್ನೇಹಲತೆ, ರಾಧಾಮಾಧವರ ಒಲುಮೆ ಚಿತ್ತಾರ, ಚಳಗದಿರ, ಚಿತ್ತಾರದ ಅಡ್ಡಿಕೆ, ಅವಳು ಎಲ್ಲಿಹಳು, ಒಲುಮೆಯ ದೊಡ್ಡ ಹೊಲ, ಹಸಿ ಕ್ಯಾನ್ವಸ್, ಕಾರೇಮುಳ್ಳು ಮತ್ತು

ನನ್ನ ಮಿಂಚುಳ್ಳಿ, ಇವುಗಳ ಜೊತೆ ಭಾವವನ್ನು ಬೆಸೆದಿಟ್ಟು ಇನ್ನೂ ಮುಂದಿನ ಭಾವನೆಗಳನ್ನು ಹಿಡಿದಿಡುವ ಪ್ರಯತ್ನದಲ್ಲಿ ಸಾಗುತ್ತಿದ್ದಾರೆ. ಇವರ ಭಾವಗೀತೆಯ ತುಣುಕುಗಳು ಇಂತಿವೆ.

ಚಿತ್ತಾರದ ಅಡ್ಡಿಕೆ

ಇದರ ಒಡಲಲ್ಲಿ ೭೧ ಭಾವಗೀತೆಗಳನ್ನು ಹೊಂದಿದ ಪುಸ್ತಕ ಮಾಲೆಯಾಗಿದ್ದು, ಕೆಲವು ಭಾವಗೀತೆಗಳನ್ನು ಮಾತ್ರ ಅಧ್ಯಯನಕ್ಕಾಗಿ ತೆಗೆದುಕೊಳ್ಳಲಾಗಿದೆ.

ನೀ ಹೀಗೆ ಕಾಡಬೇಡ ಹುಡುಗ

'ಹತ್ತಾರು ಬಾರಿ ಕನ್ನಡಿಗೆ ಕರೆದು
ಹೊತ್ತ ಮರೆಸಿ ಬಿಡುತ್ತೈತೆ
ತುಟಿ ಕೆನ್ನೆ ಕೆಂಪು ಹೆಚ್ಚುತ್ತಿದೆ
ಹುಚ್ಚು ಕುದುರಿ ಮನ ತಡೆಯಲಿ ಹೇಗೆ'[೨೬]

ಈ ಭಾವಗೀತೆಯಲ್ಲಿ ನಲ್ಲೆ, ನಲ್ಲ ಇಬ್ಬರ ಮನಸ್ಸುಗಳು ತುಡಿಯುತ್ತಿರುತ್ತವೆ. ಇದರಲ್ಲಿ ನಲ್ಲೆಯು ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನು ವೀಕ್ಷಿಸುತ್ತ ವಿರಹದ ಹುಚ್ಚು ಕುದುರೆಯನ್ನೇರಿ ಸಂಚರಿಸುವ ಭಾವನೆಗಳನ್ನು ವ್ಯಕ್ತಪಡಿಸುವಂತಿದೆ.

ಎಂಥಾ ಬದುಕು ನನ್ನದು

'ಎಂಥಾ ಬದುಕು ನನ್ನದು ನಿಂತ ನೀರಾಗಿದೆ ತೊರೆದು
ಎನಿತು ಹುಡುಕಿದೆ ಸಿಗದು
ಹೇಗೆ ಇದ್ದಂತೆಯೇ ಹೊಳೆವುದು'[೨೬]

ಓರ್ವ ಸಾಧನ ಸಿದ್ಧಿಯನ್ನು ತನ್ನಿಂದ ಕಳೆದುಕೊಂಡ ಮೇಲೆ ಆ ಸಿದ್ಧಿಯನ್ನು ಪಡೆಯುವುದು ಎಲ್ಲೂ ಹುಡುಕಿದರೂ ಸಿಗದು ಮೊದಲಿನಂತೆ ಹೇಗೆ ಆಗವುದೆಂದು ದಿಗ್ಭ್ರಾಂತನಾಗಿರುವ ಭಾವಗಳನ್ನು ಕಾಣಬಹುದು.

ನೀಲನಭಕೆ ನೂಲ ಏಣಿ ಎನ್ನುವ ಪದ್ಯದಲ್ಲಿ

'ಆನಂದದಿ ಉಲಿವ ಕೊಳಲೇ
ಬೆಳೆಯಿತನು ಪ್ರೀತಿಯ
ರೋಮಾಂಚನ ಮಧುರವೆನಿಸಿ
ತನುಮನದೊಳು ಸಂಚಯ'[೨೭]

ಎನ್ನುವ ಸಾಲುಗಳಲ್ಲಿ ಕೊಳಲು ರಾಧಾಮಾಧವರ ಪ್ರೀತಿಗೆ ಸಾಕ್ಷಿಯಾಗಿದೆ. ಅದರ ಮಧುರವಾದ ಧ್ವನಿಯ ಅವರೀರ್ವರ ತನುಮನದಲ್ಲಿ ಸಂಚಯ ಮೂಡಿಸಿವೆಂಬ ಅರ್ಥವು ಗೋಚರಿಸುತ್ತದೆ.

ಒಲುಮೆಯದನು ಗೀತೆಯಲ್ಲಿ

'ಹಳೆಯದೆಲ್ಲ ತೇಲಿಬಿಡು
ಯಮುನೆ ನದಿಯ ನೀರಲಿ
ಬಾ ತೋಳಿಗೆ ತೊಳ ಬೆಸೆ
ಮೈಮನಗಳು ತೇಲಲಿ ಕ್ಷಣದಲಿ'[೨೮]

ವಿರಹವೇದನೆಯಲ್ಲಿದ್ದ ರಾಧೆಯನ್ನು ಮಾಧವನು ಸಂತುಷ್ಟಿಗೊಳಿಸುವ ಸಂದರ್ಭವನ್ನು ನಾವಿಲ್ಲಿ ಕಾಣಬಹುದು.

ಹೇಗೆ ಹೇಳಲಿ ಕವಿತೆಯಲ್ಲಿ

'ರಾಧೆಯು : ಹೇಗೆ ಹೇಳಲಿ ನನ್ನ ಇನಿಯನೆ
ಕಣ್ಣಂಚಿನ ಕಾವ್ಯದ ಭಾಷೆಯ
ಹೇಗೆ ಬರೆಯಲಿ ಮನದ ಮುದವನು
ಶಬ್ಧ ಮೀರಿದ ಆಶಯ'[೨೯]

ರಾಧೆಯು ಮಾಧವನನ್ನು ಕೂಡುವಿಕೆಗಾಗಿ 'ಆಹ್ವಾನಿಸುವ ರೀತಿಯದು ಕಣ್ಣಂಚಿನ ಮೌನದ ಕಾವ್ಯ ಭಾಷೆಯ ಮೂಲಕ ಅದೇಗೆ ಬರೆಯಲಿ ಅದರ ಮೌಲ್ಯ ಶಬ್ಧಕ್ಕಿಂತ ಮೀರಿದುದಾಗಿದೆ ಎಂದು ಮಿಡಿಯುತ್ತಾಳೆ.

'ಯಾಕೋ ಇನಿಯ'

'ಹೂಬನದ ದುಂಬಿಕೂಡ
ಪ್ರಶ್ನೆ ಮಾಡಿದೆ
ಹೂಗಳು ನಗುತ ನಗುವು
ಕಾಡುವಂತಿದೆ'[೩೦]

'ಬಾರೋ ಬಾ ಮಾಧವ
ಒಲಿದವಳಿ ಮಡಿಲಿಗೆ
ಜೇನು ಸವಿಯ ಪೂಸು
ನಿನ್ನ ನಲ್ಲೆ ರಾಧೆ ಕೆನ್ನೆಗೆ'[೩೧]

ಈ ರೀತಿಯಾದ ವೈಶಿಷ್ಟ್ಯವನ್ನು ಹೊಂದಿದ ಈ ಪುಸ್ತಕಕ್ಕೆ ಕೆ.ಎಸ್. ನಿಸ್ಸಾರ್ ಅಹಮದ್ ಮತ್ತು ಡಾ. ದೊಡ್ಡರಂಗೇಗೌಡರು ಮುನ್ನುಡಿಗಳನ್ನು ಬರೆದು ಪುಸ್ತಕದ ಮೌಲ್ಯವನ್ನು ಇಮ್ಮಡಿಗೊಳಿಸಿದ್ದಾರೆ.

ಹಸಿ ಕ್ಯಾನ್ವಾಸ್ ಪುಸ್ತಕ ಮಾಲೆಯ ಭಾವಗೀತೆಗಳು

ಹಾಡು ಬಾ ಕನ್ನಡಿಗ

'ತಾಯಿ ನಾಡು ಹಿರಿಮೆಯ ಹಾಡ ಹಾಡು ಒಮ್ಮೆ
ಗಡಿಗಳೆಲ್ಲಡೆ ಮೊಳಗಲಿ ಸಿರಿಗನ್ನಡದ ಮಹಿಮೆ
ನೆಮ್ಮದಿ ನೆಲ ನೆಮ್ಮದೀ ಜಲ ಮಣ್ಣ ಕಣ ಕಣವು
ನಮ್ಮವರು ಇವರೆಂಬ ಅಭಿಮಾನ ಭಾವ ಒಮ್ಮತವು'[೩೨]

ಈ ತಾಯಿ ನಾಡಿನ ಕಾಳಜಿಯ ಬಗ್ಗೆ ನಾವೆಲ್ಲರೂ ಸರ್ವತೋಮುಖವಾಗಿ ಸಂಕೀರ್ಣವಾಗಿ ಐಕ್ಯತ ಮನೋಭಾವವನ್ನು ತಳಿಯಲೆಂಬ ಸಾರ ಇದರಲ್ಲಡಗಿದೆ ಎಂದು ಹೇಳಬಹುದು.

ಚಳಿಗದಿರ:

ಈ ಕವನ ಸಂಕಲನದಲ್ಲಿ ಮಾತೆಂಬುದು ಜ್ಯೋತಿರ್ಲಿಂಗ ಎಂಬ ಅಲ್ಲಮನ ವಚನದಂತೆ ನಮ್ಮ ನಡುವಿನ ಮಾತು ಒಲುಮೆಯಾಗಬೇಕು. ಕವಿ ಸಮಾಜದಲ್ಲಿ ಅನುಭವಿಸಿದ ನೋವಿನ, ನಾಡಿನ ಹೆಮ್ಮೆಯ ಜೀವ ನೀಡಿದ ತಾಯಿಯ ಕವಿಯ ವೈವಾಹಿಕ ಬದುಕಿನ ಅನುಭವದ, ಸ್ತ್ರೀಯರ ಸೌಂದರ್ಯದ ಬಗೆಗೆ ಹೀಗೆ ಹಲವು ವಸ್ತುಗಳನ್ನು ಹೊಂದಿದ ಅನೇಕ ಕವಿತೆಗಳನ್ನು ಕಾಣಬಹುದು.

ಕವಿತೆಗಳು ಸುಮ್ಮನೆ ಉದಯಿಸುವುದಿಲ್ಲ. ಬದುಕಿನ ಅನುಭವಬೇಕು. ಇದರ ಜೊತೆಗೆ ಪ್ರತಿಭೆ ಬೇಕು. ಇವೆರಡು ಬಾಗೂರು ಮಾರ್ಕಾಂಡೇಯ ಅವರಿಗೆ ಒಲಿದಿವೆ. ಅವರ ಕೆಲವು ಕವಿತೆಗಳಲ್ಲಿ ಈ ಮೇಲಿನ ವಸ್ತುವಿಷಯಗಳನ್ನು ಕಾಣಬಹುದು.

ಓಹೋ ಆಹಾ ನಾಡಿದು ನಮ್ಮದು ನಮ್ಮದು

'ಓಹೋ ಆಹಾ ನಾಡಿದು ನಮ್ಮದು ನಮ್ಮದು
ಒಗ್ಗಟ್ಟಿನ ಹಾಡು ಹೇಳು ಅಭಿಮಾನವು ಹಿರಿದು
ಈ ಮಣ್ಣಿನ ಋಣ ತೀರಿಸೆ ಅನುಗಾಲ ದುಡಿದು
ಒಮ್ಮತದೊಲು ಒಟ್ಟುಗೂಡು ಸಂಸ್ಕೃತಿಗೆ ಮಣಿದು
ಒಂದೇ ತಾಯ ಸುತರೆನ್ನುತ ಅನುಗಾಲವು ಕುಣಿದು'[೩೩]

ಈ ಕವನದಲ್ಲಿ ನಾಡಿನ ಭವ್ಯ ಸಂಸ್ಕೃತಿಯನ್ನು ನೆನೆದು ಭೂತಾಯಿಯ ಋಣ ತೀರಿಸುತ್ತ ನಾವೆಲ್ಲರೂ ಹೆಜ್ಜೆ ಹಾಕಬೇಕು ಎನ್ನುವ ನಿರೀಕ್ಷೆ ಬಾಗೂರರ ಆಶಯವಾಗಿದೆ ಎಂದು ಹೇಳಬಹುದು.

ಪಣ ತೊಡೋಣ ಬನ್ನಿ ಓ ಪ್ರಜೆಗಳು

'ದೇಶಕ್ಕಾಗಿ ಪ್ರಾಣ ತೆರುವ ಯೋಧನ ನೋಡಿರಿ

ಶತ್ರುಗಳ ಹಿಮ್ಮೆಟ್ಟಿಸಿ ಕಾಯುವವರು ತಿಳಿಯಿರಿ
ಪುಣ್ಯ ಭೂಮಿಯಲಿ ಹುಟ್ಟಿ ಕೊಟ್ಟಿದ್ದೇನು ನೀವು
ಸಿಂಹ ಮರಿಗಳೇ ನರಿ ಬದುಕದುವೆ ಸಾವು'[೩೪]

ಈ ಕವಿತೆಯಲ್ಲಿ ದೇಶಕ್ಕಾಗಿ ಯೋಧರು ಪ್ರಾಣ ಕೊಡುತ್ತಿದ್ದಾರೆ. ಆದರೆ ಈ ದೇಶಕ್ಕಾಗಿ ನಾವೇನು ಕೊಡುತ್ತಿದ್ದೇವೆ ಎಂಬ ಪ್ರಶ್ನಾರ್ಥಕವಾದ ಮಾತನ್ನು ಸೃಷ್ಟಿಸುವುದರ ಜೊತೆಗೆ ಭಾವನೆಗಳನ್ನು ಕೆರಳಿಸುವಂತ ಉಕ್ತಿಯನ್ನು ಇದರಲ್ಲಿ ತುಂಬಿದ್ದಾರೆ.

ತಾಯೇ ನಿನ್ನ ವಾತ್ಸಲ್ಯದಲ್ಲಿ

'ನಿನೇನೆ ಆದರ್ಶವೆನೆಗೆ
ಪ್ರತಿ ಕ್ಷಣವು ನನ್ನೊಳು
ನನ್ನದೇನೂ ಇಲ್ಲ ತಾಯಿ
ಜಗವೇ ನಿನ್ನೊಡಲೊಳು'[೩೫]

ಓರ್ವ ಉನ್ನತ ಸಿದ್ಧಿ ಪಡೆದವ, ನಾಡಿನ ಬಗ್ಗೆ ಪ್ರೀತಿಯೊಂದಿದ ಮನಸ್ಸು ನಾನು ಸಾಧಿಸಿದ ಸಾಧನೆಯಲ್ಲ, ನೀ ಕೊಟ್ಟಿದ್ದು, ಇದರಲ್ಲಿ ನನ್ನದೆಂಬುದು ಏನು ಇಲ್ಲ. ಒಟ್ಟಾರೆ ನಾನೆಂಬುದು ನೆಪಮಾತ್ರ, ನಿಜವಾದ ಸಾಧನೆಯ ಗರಿ ನಿನ್ನದು ಎಂದು ರಮಿಸುವ ಮಾತುಗಳನ್ನು ಇದರಲ್ಲಿ ತಿಳಿದುಕೊಳ್ಳಬಹುದು.

ಕಾರೇಮುಳ್ಳು ಕವನ ಸಂಗ್ರಹದಲ್ಲಿ

ಕನ್ನಡ ಕನ್ನಡ

'ಪ್ರಜ್ವಲಿಸಲಿ ಎಲ್ಲೆಲ್ಲೂ ಕನ್ನಡ
ದಿಗ್ವಿಜಯದ ಮಾತೃ ಕನ್ನಡ
ಧೀರ ಶೂರ ಕವಿ ಪುಂಗವ
ಕಟ್ಟಿ ಮೆರೆದ ಕನ್ನಡ'[೩೬]

ಈ ಕವಿತೆಯಲ್ಲಿ ನಮ್ಮ ಕನ್ನಡವನ್ನು ನೆಲವನ್ನು ಶೂರ, ಧೀರರು ಆಳಿ ಉಳಿಸಿದ್ದಾರೆ ಹಾಗೂ ಕವಿಗಳು ಕನ್ನಡವನ್ನು ಕಟ್ಟಿ ಮೆರೆದಿದ್ದಾರೆ. ಇದರ ಪ್ರಜ್ವಲತೆಯನ್ನು ನಾವು ಹಾಗೇ ಕಾಪಾಡಿಕೊಂಡು ಬೆಳೆಸಬೇಕು ಎನ್ನುವ ಸಾರವನ್ನು ತಿಳಿಸುತ್ತದೆ.

ಯಾಕೋ ಇನಿಯ ನಿನ್ನ ಸನಿಯ

'ಕೋಪ ತಾಪ ಶಾಪವಾಗಿ
ಕುದಿಯುತಿರುವೆನು

ಕಾಯಿಸದೆ ಬಾರೋ ಬೇಗ
ಮರೆಸಿ ಹಳೆಯ ನೋವನು[೩೭]

ಈ ಕವನದಲ್ಲಿ ಮಾಧವನನ್ನು ಹಳೆಯ ನೆನಪುಗಳನ್ನು ಬಿಟ್ಟು ಬಾ ನನ್ನ ಚಿತ್ತ ಕದಡಿ ಕಮರುತ್ತಿದೆ. ಹೊಸತನದ ನಲಿವಿನ ಸುಗಂಧದ ಕಂಪುಬೀರು ಎಂದು ರಾಧೆ ತಪಿಸುತ್ತಿರುವಳು.

ಟಿಪ್ಪಣಿಗಳು:

೧. ಡಾ. ಸಿ.ಬಿ. ಹೊನ್ನಯ್ಯ (ಸಂ), ಕನ್ನಡ ಸಾಹಿತ್ಯ ಸಂಸ್ಕೃತಿ ಮೀಮಾಂಸೆ, ಪುಟ. ೫

೨. ಡಾ. ಸಿ.ಬಿ. ಹೊನ್ನಯ್ಯ (ಸಂ), ಕನ್ನಡ ಸಾಹಿತ್ಯ ಸಂಸ್ಕೃತಿ ಮೀಮಾಂಸೆ, ಪುಟ. ೧೦

೩. ಬಾಗೂರು ಮಾರ್ಕಾಂಡೇಯ : ತಾರೆಗಳ ಬಳಗ, ಪುಟ–೩೩

೪. ಬಾಗೂರು ಮಾರ್ಕಾಂಡೇಯ : ತಾರೆಗಳ ಬಳಗ, ಪುಟ–೩೭

೫. ಬಾಗೂರು ಮಾರ್ಕಾಂಡೇಯ : ತಾರೆಗಳ ಬಳಗ, ಪುಟ–೧೨

೬ ಬಾಗೂರು ಮಾರ್ಕಾಂಡೇಯ : ತಾರೆಗಳ ಬಳಗ, ಪುಟ–೧೬

೭ ಬಾಗೂರು ಮಾರ್ಕಾಂಡೇಯ : ತಾರೆಗಳ ಬಳಗ, ಪುಟ–೧೯

೮. ಬಾಗೂರು ಮಾರ್ಕಾಂಡೇಯ : ತಾರೆಗಳ ಬಳಗ, ಪುಟ–೨೧

೯. ಬಾಗೂರು ಮಾರ್ಕಾಂಡೇಯ : ತಾರೆಗಳ ಬಳಗ, ಪುಟ–೭೭

೧೦. ಬಾಗೂರು ಮಾರ್ಕಾಂಡೇಯ : ತಾರೆಗಳ ಬಳಗ, ಪುಟ–೪೪

೧೧ ಕ.ವಿ.ವಿ. : ದೂರಶಿಕ್ಷಣ ಮಾಲೆ ೫, ಪುಟ–೨೪

೧೨. ಕ.ವಿ.ವಿ. : ದೂರಶಿಕ್ಷಣ ಮಾಲೆ ೫, ಪುಟ–೩

೧೩. ಕ.ವಿ.ವಿ. : ದೂರಶಿಕ್ಷಣ ಮಾಲೆ ೫, ಪುಟ–೮೭

೧೪. ಭಗವಾನ್ : ಬಹುಮುಖಿ ಬಾಗೂರು ಮಾರ್ಕಾಂಡೇಯ, ಪುಟ–೮೭

೧೫. ಭಗವಾನ್ : ಬಹುಮುಖಿ ಬಾಗೂರು ಮಾರ್ಕಾಂಡೇಯ, ಪುಟ–೮೭

೧೬. ಭಗವಾನ್ : ಬಹುಮುಖಿ ಬಾಗೂರು ಮಾರ್ಕಾಂಡೇಯ, ಪುಟ–೮೮

೧೭. ಬಾಗೂರು ಮಾರ್ಕಾಂಡೇಯ : ಚಳಿಗದಿರ, ಪುಟ–೨೯

೧೮. ಭಗವಾನ್ : ಬಹುಮುಖಿ ಬಾಗೂರು ಮಾರ್ಕಾಂಡೇಯ, ಪುಟ–೧೬೨.

೧೯. ಭಗವಾನ್ : ಬಹುಮುಖಿ ಬಾಗೂರು ಮಾರ್ಕಾಂಡೇಯ, ಪುಟ–೧೬೫

೨೦. ಭಗವಾನ್ : ಬಹುಮುಖಿ ಬಾಗೂರು ಮಾರ್ಕಾಂಡೇಯ, ಪುಟ–೧೬೮

೨೧. ಬಾಗೂರು ಮಾರ್ಕಾಂಡೇಯ : ಚಳಿಗದಿರ, ಪುಟ–೭೦

೨೨. ಬಾಗೂರು ಮಾರ್ಕಾಂಡೇಯ : ಚಳಿಗದಿರ, ಪುಟ–೫

೨೩. ಎಲ್.ಎಸ್. ಶೇಷಗಿರಿರಾವ್ : ಹೊಸಗನ್ನಡ ಸಾಹಿತ್ಯ ಚರಿತ್ರೆ, ಪುಟ–೧೦೩

೨೪. ಎಲ್.ಎಸ್. ಶೇಷಗಿರಿರಾವ್ : ಹೊಸಗನ್ನಡ ಸಾಹಿತ್ಯ ಚರಿತ್ರೆ, ಪುಟ–೧೦೪

೨೫. ಬಾಗೂರು ಮಾರ್ಕಾಂಡೇಯ : ಚಿತ್ತಾರದ ಅಡ್ಡಿಕೆ, ಪುಟ–೨೧

೨೬. ಬಾಗೂರು ಮಾರ್ಕಾಂಡೇಯ : ಚಿತ್ತಾರದ ಅಡ್ಡಿಕೆ, ಪುಟ–೨೧

೨೭. ಬಾಗೂರು ಮಾರ್ಕಾಂಡೇಯ : ರಾಧಾ ಮಾಧವರ ಒಲುಮೆ ಚಿತ್ತಾರ, ಪುಟ–೩೧

೨೮. ಬಾಗೂರು ಮಾರ್ಕಾಂಡೇಯ : ರಾಧಾ ಮಾಧವರ ಒಲುಮೆ ಚಿತ್ತಾರ, ಪುಟ–೫೯

೨೯. ಬಾಗೂರು ಮಾರ್ಕಂಡೇಯ : ರಾಧಾ ಮಾಧವರ ಒಲುಮೆ ಚಿತ್ತಾರ, ಪುಟ-೭೧

೩೦. ಬಾಗೂರು ಮಾರ್ಕಂಡೇಯ : ರಾಧಾ ಮಾಧವರ ಒಲುಮೆ ಚಿತ್ತಾರ, ಪುಟ-೨೪೫

೩೧. ಬಾಗೂರು ಮಾರ್ಕಂಡೇಯ : ರಾಧಾ ಮಾಧವರ ಒಲುಮೆ ಚಿತ್ತಾರ, ಪುಟ-೨೪೭

೩೨. ಬಾಗೂರು ಮಾರ್ಕಂಡೇಯ : ಹಸಿ ಕ್ಯಾನ್ವಸ್, ಪುಟ-೧೬.

೩೩. ಬಾಗೂರು ಮಾರ್ಕಂಡೇಯ : ಚಳಿಗದಿರ, ಪುಟ-೧೫

೩೪. ಬಾಗೂರು ಮಾರ್ಕಂಡೇಯ : ಚಳಿಗದಿರ, ಪುಟ-೧೮

೩೫. ಬಾಗೂರು ಮಾರ್ಕಂಡೇಯ : ಚಳಿಗದಿರ, ಪುಟ-೪೪

೩೬. ಬಾಗೂರು ಮಾರ್ಕಂಡೇಯ : ಕಾರೇಮುಳ್ಳು, ಪುಟ-೩೨

೩೭. ಬಾಗೂರು ಮಾರ್ಕಂಡೇಯ : ಕಾರೇಮುಳ್ಳು, ಪುಟ-೩೨

ಅಧ್ಯಾಯ ಐದು

ಬಾಗೂರು ಮಾರ್ಕಾಂಡೇಯ ಅವರ ಚಿತ್ರಕಲೆ ಮತ್ತು ಸಾಹಿತ್ಯದ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿ

ಅಧ್ಯಾಯ ಐದು

ಬಾಗೂರು ಮಾರ್ಕಾಂಡೇಯ ಅವರ ಚಿತ್ರಕಲೆ ಮತ್ತು ಸಾಹಿತ್ಯದ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿ

ಕಲಾವಿದರನ್ನು ಆವರಿಸಿರುವ ಸಾಮಾಜಿಕ, ಸಾಂಸ್ಕೃತಿಕ ಪರಿಸರ ಅತೀ ಸೂಕ್ಷ್ಮವಾಗಿ ದೀರ್ಘ ಕಾಲದ ಪ್ರಭಾವವನ್ನು ಬೀರುತ್ತದೆ. ಇಲ್ಲಿ ಕಲಾವಿದರು, ಸಮಾಜ ಅಥವಾ ಸಮುದಾಯದಿಂದ ಪ್ರಭಾವಿತರಾಗಿರುತ್ತಾರೆ. ಚಿತ್ರಕಲಾವಿದರು ಸಹ ಈ ಪ್ರಭಾವಕ್ಕೆ ಒಳಪಡುತ್ತಾರೆ. ಒಂದು ಸಮುದಾಯದ ವಿಶಿಷ್ಟವಾದ ಪರಂಪರೆಗಳು ಹಾಗೂ ಕಲಾಪಂಥಗಳು ಬೆಳೆಯುವುದರ ಜೊತೆಗೆ ಕಲಾವಿದರು ಇವುಗಳ ಪ್ರಭಾವಕ್ಕೆ ಒಳಪಡುತ್ತಾರೆ.

ಮಾನವ ತನ್ನ ಜೀವನದ ಸ್ಥಿತ್ಯಂತರದಲ್ಲಿ ಕಲೆಯೊಡನೆ ನಿಕಟವಾದ ಸಂಬಂಧವನ್ನು ಏರ್ಪಡಿಸಿಕೊಂಡಿರುವುದರ ಜೊತೆಗೆ ತಾನು ಅನುಭವಿಸಿದ ಘಟನೆ ನೋವು–ನಲಿವು ಮುಂತಾದವುಗಳ ಒತ್ತಡದಿಂದ ಒಂದೊಂದು ರೀತಿಯ ಸಂವೇದನೆಗಳನ್ನು ಹೊಂದುತ್ತಾನೆ. ಈ ಸಂವೇಧನೆಗಳನ್ನು ಅಭಿವ್ಯಕ್ತಿಪಡಿಸಬೇಕೆಂಬುದು ಪ್ರತಿಯೊಬ್ಬನ ಜನ್ಯ ಸ್ವಭಾವವಾಗಿದೆ. ಆದರೆ ಆ ಅನುಭವಗಳು ಪ್ರಜ್ಞೆಯ ವಸ್ತುಗಳಾದಾಗ ಹೆಚ್ಚಿನ ಮಹತ್ವವನ್ನು ಪಡೆಯುತ್ತವೆ. ಇವು ವಿವಿಧ ರೀತಿಯ ಸಂವಹನ ಮಾಧ್ಯಮಗಳ ಮೂಲಕ ಸೃಷ್ಟಿಸುವ ಪ್ರತಿ ಮಡುವಿನಲ್ಲಿರುವ ಗಿಡ, ಮರ, ಹೂಬಳ್ಳಿ, ಹೀಗೆ ಅವನು ನೆಲೆಸಿರುವ ಒಂದು ವಾತಾವರಣವು ಅವನಲ್ಲಿ ಪ್ರೇರಣೆಯನ್ನು ತುಂಬುತ್ತದೆ. ಈ ಪ್ರೇರಣೆ ಎಲ್ಲರಲ್ಲೂ ಒಂದೇ ರೀತಿಯಾಗಿ ಇರುವುದಿಲ್ಲ. ಉದಾಹರಣೆಗೆ ಸಾಮಾನ್ಯನಿಗೂ ಮತ್ತು ಕಲಾವಿದನ ನಡುವೆ ಹೋಲಿಕೆಯಾಗಿ ಒಂದು ಪರಿಸರವನ್ನು ತೆಗೆದುಕೊಂಡರೆ ಕಲಾವಿದ ಕಲಾತ್ಮಕ ದೃಷ್ಟಿಯಿಂದ ನೋಡುತ್ತಾನೆ. ಆ ನೋಡಿದ ಭಂಗಿಯನ್ನು ಯಥಾವತ್ತಾದ ಚಿತ್ರದ ರೂಪಕ್ಕೆ ತರುವ ಪ್ರಯತ್ನ ಮಾಡುತ್ತಾನೆ. ಅದರಲ್ಲಿ ಸೌಂದರ್ಯವನ್ನು ಸೃಷ್ಟಿಮಾಡುತ್ತಾನೆ. ಮತ್ತು ಹಿಂದಿನ ಪಳಿಯುಳಿಕೆಯಲ್ಲಿ ಆ ಸ್ಥಳದ ವಿಶೇಷತೆಯನ್ನು ಕಟ್ಟಿಡುವ ಕಾರ್ಯವನ್ನು ಮಾಡುತ್ತಾನೆ. ಆದರೆ ಸಾಮಾನ್ಯನಾದವನು ಅವನು ಅನುಭವಿಸಿದ ವೃತ್ತಿಯ ಅಧಾರದ

ಮೇಲೆ ಅದನ್ನು ಅನುಭವಿಸುತ್ತಾನೆ ಎಂದು ಹೇಳಬಹುದು. ಉದಾಹರಣೆಗೆ ಓರ್ವ ರೈತನನ್ನು ತೆಗೆದುಕೊಂಡರೆ ಅವನು ಆ ಪ್ರಕೃತಿಯ ಸೌಂದರ್ಯವನ್ನು ಸವಿಯದೆ ತನ್ನ ಸ್ವ ಹಿತಕ್ಕಾಗಿ ಬೇಸಾಯದ ಉಪಕರಣಗಳನ್ನಾಗಿ ಬಳಸಲು ಯತ್ನಿಸಬಹುದು. ಒಟ್ಟಾರೆಯಾಗಿ ಸಾಮಾನ್ಯರಿಗೂ ಮತ್ತು ಕಲಾವಿದರ ಮೇಲೆ ಬೀರುವ ಪ್ರಭಾವ ಈ ರೀತಿಯಾಗಿರುತ್ತವೆ ಎಂದು ಹೇಳಬಹುದು.

ಪ್ರಭಾವ, ಪ್ರೇರಣೆ

ಬಾಗೂರು ಮಾರ್ಕಾಂಡೇಯ ಅವರು ತಮ್ಮ ಬಾಲ್ಯದಿಂದಲೇ ಹಲವಾರು ರೀತಿಯ ಪ್ರಭಾವಕ್ಕೆ ಒಳಗಾಗಿರುವುದನ್ನು ನಾವು ಕಾಣಬಹುದು. ಅವರ ಹೇಳಿಕೆಯಂತೆಯೇ 'ಕೆರೆಯ ಮಣ್ಣನ್ನು ಕುಂಬಾರ ನೋಡಿದರೆ ಮಡಿಕೆಯನ್ನು ತಯಾರಿಸುತ್ತಾನೆ. ರೈತನಾದರೆ ಹೊಲಕ್ಕೆ ಹೇರುತ್ತಾನೆ. ಶಿಲ್ಪಿಯಾದರೆ ಒಂದು ಮೂರ್ತಿ ಮಾಡುತ್ತಾನೆ. ಆದರೆ ಆಗಿನ ವ್ಯವಸ್ಥೆಯಲ್ಲಿ ಬಾಗೂರರು ಮಣ್ಣಿನಿಂದ ವಿಘ್ನ ನಿವಾರಕನನ್ನು ತಯಾರಿಸಿ ಪೂಜೆ ಮಾಡುತ್ತಿದ್ದೆ, ಮತ್ತು ಎತ್ತುಗಾಡಿಗಳನ್ನು ಮಾಡುತ್ತಿದ್ದೆ ಎನ್ನುತ್ತಾರೆ. ಇದು ಚಿಕ್ಕಬುದ್ಧಿ ಮಣ್ಣಿನಿಂದ ಪ್ರೇರೆಪಿತಗೊಂಡೊ, ಹೇಗೋ ತಯಾರಿಸಿತು ಎಂದುಕೊಳ್ಳಬಹುದು. ಇದು ಕಲಾವಿದನ ಬೆಳವಣಿಗೆಯ ಮೊದಲ ಹಂತವೆಂದು ತಿಳಿದುಕೊಳ್ಳೋಣ. ಹೀಗೆ ಕಾಲಗತಿಸಿದಂತೆ ಬಾಗೂರಿಗೆ ಓರ್ವ ಚಿತ್ರಕಲಾವಿದ ಅಥವಾ ಫಲಕ ಬರಹಗಾರ 'ರಾಧಾಕೃಷ್ಣ'ನ ಚಿತ್ರ ಬರೆಯುತ್ತಿದ್ದುದ್ದನ್ನು ನೋಡಿ ಪ್ರೇರಣೆಗೊಂಡೆ ಎನ್ನುತ್ತಾರೆ. ಪ್ರೇರಣೆಯ ಜೊತೆ ಪ್ರಭಾವ ಬೀರಿದವರಲ್ಲಿ ನನ್ನ ಅತ್ತೆಯ ಮಗ 'ಚಂದ್ರು'. ಆ ಕಲಾವಿದನಂತೆ ನೀನು ಬರೆಯಲು ಸಾಧ್ಯವೆ ಎಂಬಂತೆ ಒಂದು ಅಸಾಧ್ಯವಾದ ಪ್ರಶ್ನಾರ್ಥಕ ಚಿಹ್ನೆಯಂತೆ ನುಡಿದ. ಆ ನುಡಿಯನ್ನು ಸವಾಲಾಗಿಯೂ ಅಂತಹವರನ್ನು ತಿರಸ್ಕರಿಸುವ ಬದಲು ನಾನೂ ಏನಾದರೂ ಆಗಬೇಕು. ಈ ಕಲೆಯಲ್ಲಿ ಏನಾದರೂ ಸಾಧಿಸಬೇಕು ಎಂಬ ಛಲ ಹುಟ್ಟಿಸಿದ ಮಹನೀಯರುಗಳು ಅವರು 'ನನ್ನ ಸ್ಥಿತಿಗೆ ಅವರೇ ಪ್ರೇರಕ, ಪೂರಕ ಮತ್ತು ಪ್ರಭಾವಿತರು' ಎಂದುಕೊಂಡು ಬಾಗೂರರು ಪ್ರಸ್ತುತವಾಗಿ ಸ್ಮರಿಸುತ್ತಾರೆ.'[೧]

ಅವರ ಕಲೆಯ ಯಾತ್ರೆ ಪ್ರಾರಂಭವಾದದ್ದು ಇಲ್ಲಿಂದಲೇ ಅನ್ನಬೇಕು. ಈಗಲೂ ಅವರು ಕಲಾವಿದ್ಯಾರ್ಥಿಯಂತೆ ಅಭ್ಯಾಸ ಮಾಡುತ್ತಾ ಮನನ ಮಾಡಿಕೊಳ್ಳುತ್ತಾ ಹೊಸತನ್ನು ಹುಡುಕುತ್ತಾ, ಅರ್ಥ ಹುಡುಕುತ್ತಾ, ಅಭಿವ್ಯಕ್ತಿಸುತ್ತಾ ಸಾಗಿದ್ದಾರೆ. 'ಇವರು ಐದು-ಆರನೇ ವಯಸ್ಸಿನಲ್ಲಿರುವಾಗ ಶ್ರೀ ಆಂಜನೇಯನ ಚಿತ್ರ ಬರೆದು ಶರಣಮ್ಮನ ಗುಡಿಯಲ್ಲಿ ನೇತು ಹಾಕಿದ್ದನ್ನು ಊರಿನವರೆಲ್ಲ ನೋಡಿ ಬೆರಗಾದರು. ಅವರಲ್ಲಿ ಜರಗಜ್ಜರ ಪರಪ್ಪ ಎಂಬುವರು ಆ ಚಿತ್ರದಿಂದ ಪ್ರಭಾವಿತಗೊಂಡು ಚೆನ್ನಗೋವಿಂದಪ್ಪನವರಿಗೆ ಧಾರವಾಡದ ಕಲಾಶಾಲೆಯಲ್ಲಿ ಕಲಿಯಲು ಕಳುಹಿಸು ಎಂದು ಪ್ರೇರೆಪಿಸಿದರಂತೆ ಎಂದು ಚೆನ್ನಗೋವಿಂದಪ್ಪನವರು ತಿಳಿಸುತ್ತಾರೆ.'[೨] ಈ ಕಲಾಕೃತಿಯ ರಚನೆಯಿಂದ ಊರಿನ ಜನ ಮೆಚ್ಚುಗೆಯ ಜೊತೆ ಬಾಗೂರರ ಒಳಮನಸ್ಸಿನಲ್ಲಿ ಪ್ರಭಾವ-ಪ್ರೇರಣೆ ಎರಡು ಆಗಿರಬೇಕು ಎಂದುಕೊಳ್ಳಬಹುದು.

ಹಾಗೆಯೇ ಇವರ ತಂದೆ ಸಾಹಿತ್ಯಿಕವಾಗಿ ಸಾಹಿತ್ಯದ ತುಣುಕಗಳ ಬೀಜವನ್ನು ಬಿತ್ತನೆ ಮಾಡಿದ್ದರಿಂದ ಸಾಹಿತ್ಯದ ಪ್ರಭಾವವು ಇವರಲ್ಲಿ ಆಯಿತು ಎನ್ನಬಹುದು. ಜೊತೆಗೆ ಇವರೂರಿನವರಾದ 'ನಾ ಕಾಳೇಶ್ವರಾವ್ ಅವರು ನನ್ನ ಚಿತ್ರಕಲೆಯನ್ನು ನೋಡಿ ಅವರ ಅಪಾರವಾದ ಗ್ರಂಥಗಳಾದ ಕುವೆಂಪುರವರ – ಮಲೆಗಳಲ್ಲಿ ಮದುಮಗಳು, ಯಯಾತಿ, ರೂಪದರ್ಶಿ ಶಾಂತಲ, ನೆನಪಿನ ದೋಣಿಯಲಿ, ಹುಚ್ಚು ಮನಸ್ಸಿನ ಹತ್ತು ಮುಖಗಳು, ವೀರೇಂದ್ರನಾಥವರ ತುಳಸಿ, ದುಡ್ಡು–ದುಡ್ಡು, ತಾ.ರ.ಸು ಅವರ ತಿರುಗುಬಾಣ, ಕಂಬನಿ ಕೊಯ್ಲು, ರಕ್ತರಾತ್ರಿ, ದುರ್ಗಾಸ್ತಮಾನ, ಹಂಸಗೀತೆ, ಇಂತಹ ಗ್ರಂಥಗಳನ್ನು ನನಗೆ ಓದಲು ಪ್ರೇರೇಪಿಸಿದ್ದರಿಂದ ಚಿತ್ರಕಲೆ ಮತ್ತು ಸಾಹಿತ್ಯದಲ್ಲಿ ಕೃಷಿ ಮಾಡಲು ಪ್ರಭಾವಿ ವ್ಯಕ್ತಿಯಾಗಿದ್ದಾರೆ ಎಂದು ಸ್ಮರಿಸಿಕೊಳ್ಳುತ್ತಾರೆ. ಪ್ರೌಢಶಾಲೆಯಲ್ಲಿ ಓದುತ್ತಿರುವಾಗ ನಾನು ಕೊನೆಯ ಭಾಗದಲ್ಲಿ ಕುಳಿತುಕೊಂಡು ಗುರುಗಳ ಪಾಠ ಬೋಧನೆಯ ಸಮಯದಲ್ಲಿ ಗುರುಗಳ ಬೋಧನೆಯನ್ನು ಆಲಿಸಿಕೊಳ್ಳುತ್ತ ಗಣಪನ ಚಿತ್ರವನ್ನೋ, ಶ್ರೀಕೃಷ್ಣನ ಚಿತ್ರವನ್ನೋ ಬರೆಯುತ್ತಿದ್ದೆ. ಇಲ್ಲಿ ಏಕಕಾಲದಲ್ಲಿ ಮಾಡುತ್ತಿದ್ದು ಈ ಹಂತದಲ್ಲಿಯೂ ನನಗೆ ಕಾವ್ಯ–ಚಿತ್ರರಚನೆ ಮಾಡುವ ಪ್ರಭಾವ–ಪ್ರೇರಣೆ ದೊರಕಿತು ಎನ್ನುತ್ತಾರೆ.[೩]

'ಕಲಾ ಶಾಲೆಯಲ್ಲಿ ಅಧ್ಯಯನ ಮಾಡುತ್ತಿರುವ ಸಂದರ್ಭದಲ್ಲಿ ಅಕಾಡೆಮಿಕ್ ಶೈಲಿಯಲ್ಲಿ ಚಿತ್ರ ರಚನೆ ಮಾಡುತ್ತಿದ್ದು ಚಂದ್ರನಾಥ ಆಚಾರ್ಯ, ಎಂ.ಎ. ಚೆಟ್ಟಿ, ಎಸ್.ಎಂ.ಪಂಡಿತ್ ಮತ್ತು ಪ್ರಹ್ಲಾದ ಅವರ ಪ್ರಭಾವವನ್ನು ಮೈಗೂಡಿಸಿಕೊಂಡು ತನ್ನ ತನದ ರೂಪ ರೇಶೆಯಲ್ಲಿ ಕಲಾಕೃತಿಗಳನ್ನು ರಚನೆ ಮಾಡುತ್ತಿದ್ದೆ. ಹಾಗೂ ರೇಖಾ ಚಿತ್ರಗಳಲ್ಲಿ ನನಗೆ ಕೆ.ಕೆ. ಹೆಬ್ಬಾರ್, ಎಂ.ಜೆ. ವಾಚೇದ್‌ಮಠ ಅವರ ಅಗಾಧವಾದ ಪ್ರಭಾವದಿಂದ ಚಿತ್ರಚನೆಗೆ ಪ್ರೇರಣೆ ಸಿಕ್ಕಂತಾಯಿತು ಎನ್ನುತ್ತಾರೆ. ಇವರು ಭಾವ ಚಿತ್ರರಚನೆ ಮಾಡಿದ್ದನ್ನು ಬೇರೆಯವರು ಇಷ್ಟಪಟ್ಟಾಗ ಆ ರಚನೆಯ ಹಿರಿಮೆಯ ಪ್ರಭಾವಕ್ಕೆ ಸಿಕ್ಕು ಮುಂದಿನ ಚಿತ್ರರಚನೆಗೆ ಪ್ರೇರಣೆ ದೊರೆತಂತೆ ನನಗೆ ಆನಂದವಾಗುತ್ತಿತ್ತು ಎನ್ನುತ್ತಾರೆ.'[೪]

'ಕಲಾ ಕಾಲೇಜಿನ ಪ್ರಾಂಶುಪಾಲರಾದ ಸಿ.ಸಿ. ಪಾಟೀಲ ಅವರ ಪ್ರೋತ್ಸಾಹದಿಂದ ಪ್ರಭಾವ, ಪ್ರೇರಣೆ ಎರಡನ್ನು ನನ್ನಲ್ಲಿ ಬಿತ್ತನೆ ಮಾಡಿದ್ದಾರೆ. ಹಾಗೆಯೇ ನಾಡಿನ ಖ್ಯಾತ ಬಿ.ವ್ಹಿ. ವೈಕುಂಠ, ರಾಜು ಅವರು ಅರಣಿ ಪತ್ರಿಕೆ, ರಾಜಪತ್ರಿಕೆಗಳಲ್ಲಿ ಎರಡನೆಯ ರಕ್ಷಾಪುಟಗಳಾಗಿ ನನ್ನ ಕಲಾಕೃತಿಗಳನ್ನು ದುಡಿಸಿಕೊಳ್ಳುತ್ತಿದ್ದರಿಂದ ಇವುಗಳ ಪ್ರಭಾವದಿಂದ ಮುಂದೆ ಹೆಚ್ಚಿನದಾಗಿ ಕಲಾಕೃತಿಯಲ್ಲಿ ಸಾಧನೆ ಮಾಡಲು ಪ್ರೇರಣೆ ನೀಡಿದವು.'[೫]

ತಂತ್ರ ಶೈಲಿ

ಬಾಗೂರು ಮಾರ್ಕಾಂಡೇಯ ಅವರು ಅಗಿನ ಸಂದರ್ಭದಲ್ಲಿ ನೈಜ ಚಿತ್ರಣಗಳನ್ನು ಹೆಚ್ಚು ಚಿತ್ರಿಸುತ್ತಿದ್ದರು. ಇವರ ಮೇಲೆ ರ‍್ಯಾಫಿಲ್, ಪೀಟರ್, ಪಾಲ್‌ರೂಬೆನ್ಸ್, ಮತ್ತು ಮೈಕಲೆಂಜಲೊ ಕಲಾವಿದರ ಪ್ರಭಾವವು ಬಾಗೂರರಲ್ಲಿ ವಿಲೀನಗೊಂಡು ನೈಜ ಶೈಲಿಯ ಕಲಾಕೃತಿಗಳನ್ನು ಚಿತ್ರಿಸುವುದರಲ್ಲಿ ಸಿದ್ಧ

ಹಸ್ತರಾಗಿದ್ದರು. ಇವರು ಹೆಚ್ಚಾಗಿ ಜಲವರ್ಣದಿಂದ ಅತ್ಯಂತ ಮೃದು ವರ್ಣಗಳನ್ನು ತಮ್ಮ ಆಕೃತಿಗಳಲ್ಲಿ ಬಳಸುತ್ತಿದ್ದರು. ಮತ್ತು ಸಣ್ಣ ವಸ್ತುವಿಗೂ ಅಷ್ಟೇ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ. ಇವರ ಕಲಾಕೃತಿಗಳಲ್ಲಿ ಸೂಕ್ಷ್ಮತೆಯಿಂದ ಕೂಡಿದ ಹಿನ್ನೆಲೆ, ನಿಸರ್ಗ, ವ್ಯಕ್ತಿಗಳ ಗಾಂಭೀರ್ಯ, ಎಲ್ಲಾ ನವರಸಗಳಿಂದ ಕೂಡಿದ ಕಾವ್ಯಮಯವಾದ ಕಳೆಯನ್ನು ಎಲ್ಲ ವಿಧದ ಚಿತ್ರಕಲಾಕೃತಿಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಇವರ ಕಲಾಕೃತಿಗಳಲ್ಲಿ ಕಾಣುವ ಇನ್ನೊಂದು ತಂತ್ರವೇನೆಂದರೆ ಅತಿ ಹೆಚ್ಚಾಗಿ ಜಲವರ್ಣವನ್ನು ಬಳಸುವುದು, ಹಾಗೆಯೇ 'ಪಾಶ್ಚಾತ್ಯರು, ಭಾವಚಿತ್ರಗಳಲ್ಲಿ ಬಾಯಿ, ಮೂಗು, ಇತರೆವುಗಳನ್ನು ಕೆಂಪಾಗಿ ಮಾಡುತ್ತಾರೆ. ಇದು ನನಗೆ ಇಷ್ಟ ಎಂದು ಹೇಳುತ್ತಾರೆ.' ನನ್ನ ಕಲಾಕೃತಿಗಳ ಶೈಲಿ ವಿವರವಾಗಿ ಸೂಕ್ಷ್ಮವಾಗಿ ಹೇಳುವಂತೆ ಇರುವುದು ಮತ್ತು ನೈಜ ಶೈಲಿ ತುಂಬಾ ನನಗೆ ಇಷ್ಟ.'[೬] ಭಾವಚಿತ್ರಗಳಲ್ಲಿ ಕುಂಚದ ಕಡಿಮೆ ಹೊಡೆತದ ಭಾವನೆಗಳ ಮುಖಾಂತರ ನೈಜ ರೂಪದ ವ್ಯಕ್ತಿಚಿತ್ರಗಳನ್ನು ಅತ್ಯಂತ ಕಡಿಮೆ ಸಮಯದಲ್ಲಿ ಅನಾವರಣಗೊಳಿಸುವ ಕೌಶಲ್ಯವನ್ನು ತಂತ್ರ ಶೈಲಿಯಲ್ಲಿ ಕಾಣಬಹುದು. ಒಟ್ಟಾರೆಯಾಗಿ ಬಾಗೂರರು ಮನೋಧರ್ಮವನ್ನು ಚಿತ್ರಕಲೆಯ ಮೂಲಕ ಕಾಪಾಡುವ ತಂತ್ರಗಾರಿಕೆಯನ್ನು ಹಿಡಿದಿಟ್ಟುಕೊಂಡಿದ್ದಾರೆ ಎನ್ನಬಹುದು.

ಒಟ್ಟಾರೆಯಾಗಿ ಈ ಮೇಲೆ ಹೇಳಿದ ಪ್ರಭಾವಿತ ಅಂಶಗಳೆಲ್ಲವನ್ನು ಮೈಗೂಡಿಸಿಕೊಂಡು ತನ್ನದೇಯಾದ ತಂತ್ರ, ಶೈಲಿಯಲ್ಲಿ ಕಾವ್ಯ ಮತ್ತು ಚಿತ್ರಕಲಾಕೃತಿಗಳನ್ನು ರಚಿಸಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ವಿಶೇಷವಾಗಿ ಇವರ ರೇಖಾಚಿತ್ರಗಳು ಹಾಗೂ ಚುಕ್ಕೆ ಚಿತ್ರಗಳಲ್ಲಿ ಇವರ ವೈಯಕ್ತಿಕ ಶೈಲಿ ಮತ್ತು ತಂತ್ರ ಎದ್ದುಕಾಣುತ್ತದೆ.

ಟಿಪ್ಪಣಿಗಳು:

೧. ಬಾಗೂರು ಮಾರ್ಕಾಂಡೇಯ : ಸಂದರ್ಶನ.

೨. ಚಿನ್ನಗೋವಿಂದಪ್ಪ : ಸಂದರ್ಶನ

೩. ಬಾಗೂರು ಮಾರ್ಕಾಂಡೇಯ : ಸಂದರ್ಶನ

೪. ಬಾಗೂರು ಮಾರ್ಕಾಂಡೇಯ : ಸಂದರ್ಶನ.

೫. ಬಾಗೂರು ಮಾರ್ಕಾಂಡೇಯ : ಸಂದರ್ಶನ.

೬. ಬಾಗೂರು ಮಾರ್ಕಾಂಡೇಯ : ಸಂದರ್ಶನ.

ಅಧ್ಯಾಯ ಆರು

ಬಾಗೂರು ಮಾರ್ಕಾಂಡೇಯ ಅವರ ಕುರಿತು
ಪ್ರಶಂಸಾ ಬರಹಗಳು, ಸಂದ ಪ್ರಶಸ್ತಿ-ಗೌರವಗಳು

ಅಧ್ಯಾಯ ಆರು

ಬಾಗೂರು ಮಾರ್ಕಾಂಡೇಯ ಅವರ ಕುರಿತು ಪ್ರಶಂಸಾ ಬರಹಗಳು, ಸಂದ ಪ್ರಶಸ್ತಿ-ಗೌರವಗಳು

ಯಾವುದಾದರೂ ಒಂದು ಕ್ಷೇತ್ರದಲ್ಲಿ ಸಾಧನೆಗೈದ ವ್ಯಕ್ತಿಗಳನ್ನು ಗುರುತಿಸಿ ಸರ್ಕಾರ, ಸಂಘಸಂಸ್ಥೆಗಳು, ಗೌರವದಿಂದ ನೀಡುವಂತಹವುಗಳನ್ನು ಪ್ರಶಸ್ತಿಗಳೆಂದು ಸಾಮಾನ್ಯ ಅರ್ಥದಲ್ಲಿ ಹೇಳಬಹುದು. ಇಂತಹ ಗೌರವ ಪುರಸ್ಕಾರಗಳನ್ನು ಕುರಿತು ವಿಮರ್ಶಾತ್ಮಕವಾಗಿ ಲೇಖಿಸುವುದಕ್ಕೆ ಪ್ರಶಂಸಾ ಬರಹಗಳು ಎನ್ನಬಹುದು. ಈ ಗೌರವ ಮತ್ತು ಪ್ರಶಂಸೆಯ ಕುರಿತು ಎನ್. ಮರಿಶ್ಯಾಮಚಾರ್, ಬರೆದಿರುವ ಕಲಾದಿಗ್ಗಜರು ಪುಸ್ತಕದಲ್ಲಿ ಕನ್ನಡದ ಹೆಸರಾಂತ ಸಾಹಿತಿಗಳ ಮಾತನ್ನು ಹಿಡಿದಿಟ್ಟಿದ್ದಾರೆ. 'ಜೀವಕ್ಕೆ ಪುರಸ್ಕಾರ ಬರುವುದೆಂದರೆ ನಿಷ್ಠೆಗೂ, ಪರಮಯೋಗ್ಯತೆಗೂ, ಲೋಕ ಸಮರ್ಪಿಸುವ ಕಾಣಿಕೆ. ಅವರ ಬದುಕಿಗೂ, ಕೃತಿಗಳಿಗೂ ನಾಡು ಸಲ್ಲಿಸುವ ಧನ್ಯವಾದ. ಅವರ ಜೀವನವೇ ಒಂದು ತಪಸ್ಸು'[1] ಎಂದಿದ್ದಾರೆ.

ಪ್ರಶಸ್ತಿ, ಪುರಸ್ಕಾರ, ಪ್ರಶಂಸಾ ಬರಹಗಳು ಪ್ರಸ್ತುತವಾಗಿ ಎಲ್ಲಾ ಕ್ಷೇತ್ರಗಳಲ್ಲಿ ಬಳ್ಳಿಯಂತೆ ಹುಟ್ಟಿ, ಸಾಧನಾ ಫಲವವನ್ನು ಕೊಡುವ ಒಂದು ಪ್ರಚೋದನ ಶಕ್ತಿಗಳು ಎಂದು ಹೇಳಬಹುದು. ಈ ಪ್ರಚೋಧನ ಶಕ್ತಿಗಳು ಲಭಿಸದೆ ಇದ್ದರೆ ಸಾಧನೆ ಮಾಡುವವರು ಮಂದಗತಿಯಲ್ಲಿ ನಡೆಯುತ್ತಾರೆ ಎಂದು ಹೇಳಬಹುದು. ಏಕೆಂದರೆ ಸಾಧನೆಯನ್ನು ಗುರುತಿಸುವವರೆ ಇಲ್ಲ ಎಂದಾಗ ಸಾಧನೆಗೈದು ಏನು ಫಲ ಎಂದು ಸಾಧಕ ಖಿನ್ನತೆಗೆ ಒಳಗಾಗಬಹುದು. ಇಂತಹ ಸಾಧಕರು ನಮ್ಮ ಕನ್ನಡ ಭೂಮಿಯಲ್ಲಿ ಮಂಜಿನಿಂದ ಮುಸುಕಿದ ಶಶಿಯಂತೆ ಇದ್ದಾರೆ ಎಂದು ಹೇಳಬಹುದು. ಇಂತಹವರಿಗೆ ಪ್ರಶಸ್ತಿ, ಪುರಸ್ಕಾರಗಳು, ವಿಮರ್ಶಾತ್ಮಕ ಬರಹಗಳು ಮತ್ತು ಗುರುತಿಸುವಿಕೆಯು ನಿಷ್ಪಕ್ಷಪಾತವಾಗಿ ಮತ್ತು ಅವರ ಸಾಧನೆಗೆ ಮೆಟ್ಟಿಲುಗಳನ್ನು ಮಾಡಿಕೊಟ್ಟಂತಾಗುತ್ತದೆ ಎಂದು ಹೇಳಬಹುದು.

ಈ ನಾಡಿನಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ಸಾಧನೆಗೈದಿರುವವರನ್ನು ನಾವು ಕಾಣಬಹುದು. ಉದಾಹರಣೆಗಾಗಿ ಸಾಹಿತ್ಯದಲ್ಲಿ ಕುವೆಂಪು, ಡಾ. ದ.ರಾ.ಬೇಂದ್ರೆ, ಡಾ. ಶಿವರಾಮ ಕಾರಂತ, ಡಾ.

ಮಾಸ್ತಿ ವೆಂಕಟೇಶ ಅಯ್ಯಂಗಾರ್, ಡಾ. ವಿ.ಕೃಗೋಕಾಕ್, ಡಾ. ಯು.ಆರ್.ಅನಂತಮೂರ್ತಿ, ಡಾ. ಗಿರೀಶ್ ಕಾರ್ನಾಡ್, ಡಾ. ಚಂದ್ರಶೇಖರ್ ಕಂಬಾರ್, ಡಾ. ಎಂ.ಎಂ. ಕಲಬುರ್ಗಿ ಮತ್ತು ಇತರರು. ಹಾಗೆಯೇ ಚಿತ್ರಕಲಾ ಕ್ಷೇತ್ರದಲ್ಲಿ ವಿ.ಜಿ. ಅಂದಾನಿ, ಜೆ.ಎಸ್. ಖಂಡೇರಾವ್, ಎಸ್.ಎಂ.ಪಂಡಿತ್, ಪಿ.ಆರ್.ತಿಪ್ಪೇಸ್ವಾಮಿ, ಪಿ.ಬಿ. ಹಿರೇಗೌಡರು, ಕೆ.ಕೆ. ಹೆಬ್ಬಾರ್, ಬಿ.ಕೆ.ಎಸ್. ವರ್ಮ ಮತ್ತು ಇತರರು ಪ್ರಶಸ್ತಿ, ಪ್ರಶಂಸೆ, ಗೌರವಾಧಾರಗಳನ್ನು ಸ್ವೀಕರಿಸಿದವರಾಗಿದ್ದು, ಇವರಂತೆಯೇ ಪ್ರಸ್ತುತ ಸಾಧನೆಗೈದುದರ ಫಲವಾಗಿ ಬಾಗೂರು ಮಾರ್ಕಾಂಡೇಯ ಅವರ ಕುರಿತು ಈಗ ಬಂದಿರುವ ಆಯ್ದ ಗೌರವಾಧಾರಗಳು, ಪ್ರಶಂಸೆ ಮತ್ತು ಬರಹಗಳನ್ನು ಇಲ್ಲಿ ಕಾಣಬಹುದು.

ಬಾಗೂರರ ಮನೆಗೆ ಭೇಟಿ ಇತ್ತ ಸಂದರ್ಭದಲ್ಲಿ ಕೆ.ಎಸ್.ನಿಸ್ಸಾರ್ ಅಹಮದ್ ಅವರು ಬರೆದ ನುಡಿಯ ಸಾಲುಗಳನ್ನು ಭಗವಾನ್‌ರವರು ಹಿಡಿದಿಟ್ಟಿದ್ದಾರೆ.

ಕೆ.ಕೆ. ಹೆಬ್ಬಾರರ ಚಿತ್ರಗಳ ಅರ್ಥವತ್ತಾದ ಚಿತ್ರದ ರೇಖೆಗಳ ಪವಾಡ ಸದೃಶ್ಯ ಪರಿಣಾಮಕಾರಿಕೆಯನ್ನು ಬಹಳ ಹಿಂದಿನಿಂದ ಮೆಚ್ಚಿದ ನಾನು ಮಾರ್ಕಾಂಡೇಯವರ ತತ್‌ಸದೃಶ್ಯ ರೇಖಾವಿಲಾಸವನ್ನು ಅನುಭವಿಸಿ ಸಂತಸಪಟ್ಟಿದ್ದೇನೆ. ಹೆಬ್ಬಾರರಿಂದ ಕಲಿಯಬಹುದಾದ ಸದೃಶ್ಯಗಳನ್ನು ಮೈಗೂಡಿಸಿಕೊಂಡು ತಮ್ಮದೇ ಆದ ವಿಶಿಷ್ಟ ಅಭಿವ್ಯಕ್ತಿ ವಿಧಾನವನ್ನು ಶ್ರೀಯುತರು ರೂಢಿಸಿಕೊಂಡಿರುವುದು ಪ್ರಶಂಸನೀಯ. ಕೃಷ್ಣ ಮತ್ತು ರಾಧೆಯರ ಪ್ರಣಯವನ್ನು ಪ್ರಮುಖ ವಸ್ತುವನ್ನಾಗಿ ಮಾಡಿರುವ ಕಲಾಕೃತಿಗಳು ಸರಳ, ನಿರಾಡಂಬರ. ಒಂದೊಂದು ಕೃತಿಯನ್ನು ಒಂದು ಚೊಕ್ಕ ಭಾವಗೀತೆಯನ್ನಾಗಿ ಮಾಡಿದ್ದಾರೆ. ಒಟ್ಟಿನಲ್ಲಿ ಒಂದು ಪ್ರಯೋಗ ಶಾಲೆಯನ್ನು ಹೊಕ್ಕು ಹೊರಬಂದ ಅನುಭವ ಸಹೃದಯರಿಗೆ ಆಗುವುದೆಂದು ನಾನು ಭಾವಿಸುತ್ತೇನೆ. ಇವರು ಇನ್ನೂ ಅತಿಶಯ ಫಲಪ್ರದ ಕೃತಿಗಳನ್ನು ಸೃಷ್ಟಿಸಬೇಕೆಂದು ಹಾರೈಸುತ್ತೇನೆಂದು ಪ್ರಶಂಸಾ ನುಡಿಯನ್ನು ಹಾಡಿದ್ದಾರೆ. ಹಾಗೆಯೇ ಪ್ರಸಿದ್ಧ ಗಾಯಕಿಯಾದ ರತ್ನಮಾಲಾ ಪ್ರಕಾಶ ಕೂಡ ಬಾಗೂರರ ವಿಚಾರವಾಗಿ 'ಕಷ್ಟಬಂತೆಂದರೆ ಕುಗ್ಗದೆ, ಸುಖ ಬಂತೆಂದರೆ ಹಿಗ್ಗದೆ ಕವಿಯಾಗಿ, ಸಾಹಿತಿಯಾಗಿ, ಚಿತ್ರಕಾರನಾಗಿ ಸಮಾಜಸೇವೆಯಲ್ಲಿ ತೊಡಗಿರುವ ಇವರಿಗೆ ಬದುಕಿನಂಗಳದಲ್ಲಿ ಎಂದೂ ಬಾಡದ ಮುಗುಳ್ನಗೆಯ ಚೆಂಗುಲಾಭಿಗಳು ಅರಳಲಿ, ಕಿರುನಗೆಯ ಮಲ್ಲಿಗೆ ಸೂಸತ್ತಲೇ ಇರಲಿ ಎಂದು ತನ್ನ ಪ್ರಶಂಸಾ ನುಡಿಗಳನ್ನು ನುಡಿದಿದ್ದಾರೆ.

ಜಿ.ವಿ. ಅತ್ರಿ ಮತ್ತು ಡಾ. ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ ಇವರುಗಳು ಮಕ್ಕಳ ಕವಿತೆಗಳನ್ನು ರಚಿಸಿ ಅದಕ್ಕೂ ಚಿತ್ರಬರೆಯುತ್ತಾರೆ. ಜೊತೆಗೆ ಗಣಕ ಯಂತ್ರದಲ್ಲಿ ಕನ್ನಡ ಕಲಿಸುವ ಕಾಯಕ ಮಾಡುತ್ತಾ ಕನ್ನಡ ಕಲಿಯುವವರ ಮನ ತಣಿಸಿದ್ದಾರೆ. ಅವರು ಬಹಳ ಉತ್ಸಾಹಿಗಳು ಹಾಗೂ ಭಾವುಕರು ಹೌದು. ಇವರ ಕವನಗಳಲ್ಲಿ ಹೆಚ್ಚಾಗಿ ಪರಿಸರದ ಅರಿವು, ಪ್ರೀತಿ, ಮಕ್ಕಳ ಮನದ ವಿಕಸನಕ್ಕಾಗಿ ಚಿಕ್ಕಮಕ್ಕಳ ಚಿತ್ರಮಾತನಾಡುತ್ತವೆ ಮತ್ತು ಮಕ್ಕಳಿಗಾಗಿ ರಚಿಸಿದ ಕವಿತೆಗಳಲ್ಲಿ ಆಯ್ದವುಗಳನ್ನು ಡಾ.ಎನ್. ಲಕ್ಷ್ಮೀನಾರಾಯಣ ಭಟ್ಟರು ಹಾಡಿದ್ದಾರೆಂದು ಹೇಳಿಕೊಂಡಿದ್ದು, ಜಿ.ವಿ. ಅತ್ರಿ ಹೇಳಿಕೆಗಳು ಸಹ ಇದಕ್ಕೆ ಸಾಮ್ಯವಾಗಿರುವಂತೆ ಇವರು ಬಾಗೂರು ಚಿತ್ರಕಲೆ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆಗಳನ್ನು ಲಿಖಿಸಿದ್ದಾರೆ.

ಕನ್ನಡ ಭಾಷೆಯ ಸಂವರ್ಧನೆಗೆ ಬಾಗೂರು ಮಾರ್ಕಾಂಡೇಯ ಅವರ ಕೊಡುಗೆ:

ಡಾ. ದೊಡ್ಡ ರಂಗೇಗೌಡ: ಕರುನಾಡ ಸಂಜೆ ಎಂಬ ಪತ್ರಿಕೆಯಲ್ಲಿ ಬಾಮಾರವರು 'ಕನ್ನಡ ಸೌರಭ' ಎಂಬ ಹೆಸರಿನಲ್ಲಿ ಅತ್ಯಂತ ಕ್ಷಿಪ್ರಗತಿಯಲ್ಲಿ ಕಡಿಮೆ ವೇಳೆಯಲ್ಲಿ ಯಾವ ಗುರುಗಳ ನೆರವಿಲ್ಲದೆ ಸ್ವಯಂ ಬೋಧನೆ ಎಂಬಂತೆ ಕಲಿಯಬಹುದಾದ ತಂತ್ರಾಂಶವನ್ನು ತಯಾರಿಸಿದ್ದು, ಈ ತಂತ್ರಾಂಶದಲ್ಲಿ ಚಿತ್ರ, ಕವಿತೆ, ಸಂಗೀತ, ಹಿನ್ನೆಲೆಯ ಧ್ವನಿಯ ಉಚ್ಚಾರಣೆ, ಚಿತ್ರಗಳ ಚಲನೆಗೆ ಅನಿಮೇಶನ್ ಬಳಸಿಕೊಂಡಿರುವುದು ಪ್ರಸ್ತುತ ಕನ್ನಡ ಸೌರಭದ ಹೆಗ್ಗಳಿಕೆಯಾಗಿದ್ದು ಈ ತಂತ್ರಾಂಶವು ಮಕ್ಕಳು ಅನ್ಯ ಭಾಷಿಕರಿಗೂ ಪ್ರಿಯವಾಗಿದೆ. ಈ 'ಕನ್ನಡ ಸೌರಭ' ಅನಾವರಣಗೊಂಡಿರುವುದು ತಾಯ್ನಾಡಿನ ಸೌಭಾಗ್ಯ ಹಾಗೂ ಹೆಮ್ಮೆಯ ಸಂಗತಿಯಾಗಿದೆ. ಮತ್ತು ಕನ್ನಡ ಸೌರಭ ಶೋಧನೆ ರೂಪಣೆ, ಕನ್ನಡಿಗರ ಕನ್ನಡ ಭಾಷೆಯ ಉಳಿವಿಗೆ ಪ್ರಭಾವಪೂರ್ಣವಾಗಿ ಪ್ರತಿಕ್ರಿಯಿಸಬಹುದು. ನಾಡಿನಲ್ಲಿ ಅನ್ಯ ಭಾಷಿಕರ ಅಧಿಕಾರಿಗಳ ಬಾಹುಳ್ಯದಿಂದಾಗಿ ಕನ್ನಡ ತನ್ನ ಅಸ್ತಿತ್ವವನ್ನು ಉಳಸಿಕೊಳ್ಳಲು ಇರಬಹುದಾದ ಒಂದು ಉಪಾಯವೆಂದರೆ ಈ ಬಗೆಯ ತಂತ್ರಾಂಶಗಳ ಮೂಲಕ ಕ್ಷಿಪ್ರಗತಿಯಲ್ಲಿ ಕನ್ನಡ ಕಲಿಸುವ ಶಾಲೆಗಳನ್ನು ತೆರೆದು ನಾಡಿನಲ್ಲಿರುವ ಸರ್ವ ಪ್ರಜೆಯೂ ಕೂಡ ಕನ್ನಡ ಕಲಿಯಲು ಉತ್ಸುಕರಾಗುವಂತೆ ಮಾಡಬಹುದಾಗಿದೆ ಎಂದು ಹೇಳಿದ್ದಾರೆ.

ಎಸ್. ದತ್ತಾತ್ರಿ: ಕನ್ನಡ ಕಲಿಕೆ, ಕನ್ನಡದ ಇಂಪಾದ ಗೀತೆ ಕನ್ನಡ ನಾಡಿನ ಪ್ರಾಕೃತಿಕ ಸಮೃದ್ಧತೆ ಕನ್ನಡಿಗರ ಔದಾರ್ಯದ ಮಹೋನ್ನತೆ ಹಾಗೂ ಕನ್ನಡದ ಅವಶ್ಯಕತೆಯನ್ನು ಸರಳವಾಗಿ ಎತ್ತಿಹಿಡಿದ ಬಾಗೂರು ಮಾರ್ಕಾಂಡೇಯ ಅವರ 'ಕನ್ನಡ ಸೌರಭ' ಪ್ರತಿಶತ ತನ್ನ ಹೆಸರನ್ನು ಸಾರ್ಥಕಗೊಳಿಸಿಕೊಂಡಿದೆ. ಹೊಸತಾಗಿ ಭಾಷೆ ಕಲಿಯುವವರೆಲ್ಲರೂ ಒಂದು ರೀತಿ ಮಕ್ಕಳೇ 'ಸುಲಿದ ಬಾಳೆಯ ಹಣ್ಣಿನಂದದಿ' ಕನ್ನಡ ಕಲಿಸುವ ಈ ತಂತ್ರಜ್ಞಾನ ಕುರಿತು ಡಾ. ವೀರೇಂದ್ರ ಹೆಗ್ಗಡೆಯವರ ಮಾತನ್ನು ಸಮೀಕರಿಸಿಕೊಂಡು ಇಂದಿನ ಯುಗದಲ್ಲಿ ವಿದ್ಯಾರ್ಥಿಗಳಿಗೆ ಮತ್ತು ಕನ್ನಡೇತರರಿಗೆ ಕನ್ನಡ ಭಾಷೆ ಕಲಿಸುವ ಅತ್ಯಂತ ಸುಲಭ ಮಾರ್ಗ ಇದು ಎಂದಿದ್ದಾರೆ.

ಗೌರವ ಪುರಸ್ಕಾರಗಳು

೧. ಚುಕುಬುಕು ರೈಲು, ಮಕ್ಕಳ ಸಾಹಿತ್ಯಕ್ಕಾಗಿ ೧೯೯೮ರಲ್ಲಿ ಗೊರೂರು ಸಾಹಿತ್ಯ ಪ್ರಶಸ್ತಿ

೨. ಚುಕುಬುಕು ರೈಲು, ಮಕ್ಕಳ ಸಾಹಿತ್ಯಕ್ಕಾಗಿ ೧೯೯೮ರಲ್ಲಿ ಕಾವ್ಯ ಸಿಂಧು ಪ್ರಶಸ್ತಿ

೩. ಚಿಣ್ಣರ ಚಿಲಿಪಿಲಿ ಮಕ್ಕಳ ಸಾಹಿತ್ಯಕ್ಕಾಗಿ ೧೯೯೯ರಲ್ಲಿ ಗೊರೂರು ಸಾಹಿತ್ಯ ಪ್ರಶಸ್ತಿ

೪. ಮಗು ಮತ್ತು ಚಲಿಸುವ ರೇಖೆ ೧೯೯೮, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಗೌರವಧನ ಪಡೆದ ಕೃತಿ.

೫. ಪುಸ್ತಕ ಸೊಗಸು ಬಹುಮಾನ ಪಡೆದ ಕೃತಿ.

೬. ಚಿತ್ರದುರ್ಗ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ (೧೦.೦೧.೧೯೯೯)

೭. ಪ್ರತಿಭಾ ಪ್ರಶಸ್ತಿ (೦೭.೪.೧೯೯೨)

೮. ಡಾ. ರಾಜಕುಮಾರ್ ಅಭಿಮಾನಿ ಸಂಘದಿಂದ ಚಲನಚಿತ್ರ ನಟ ಅಂಬರೀಷರ ಮೂಲಕ ಸನ್ಮಾನ

೯. ೦೯.೦೯.೧೯೮೫ರಂದು ಜೇಸಿಸ್ ಸಪ್ತಾಹದಲ್ಲಿ ಸನ್ಮಾನ

೧೦. ಗಾಂಧಿ ಸಾಹಿತ್ಯ ಸಂಘ, ಮಲ್ಲೇಶ್ವರಂ ವತಿಯಿಂದ ಸನ್ಮಾನ

೧೧. ಕೌಟಿಲ್ಯ ನ್ಯಾಷನಲ್ ಎಕ್ಸವೆನ್ಸ್ ಅವಾರ್ಡ್, ೨೦೦೬.

೧೨. ಜಯ ಪ್ರಕಾಶ್ ನಾರಾಯಣ ರಾಷ್ಟ್ರೀಯ ರತ್ನ ಪುರಸ್ಕಾರ, ೨೦೦೭.

೧೩. ಸ್ವಪ್ನ ನಡೆಸಿದ (೦೧.೧೧.೨೦೦೮) ೫೨ ಕನ್ನಡ ಪುಸ್ತಕಗಳ ಲೋಕಾರ್ಪಣೆ ಮತ್ತು ೫೨ ಸಾಹಿತಿಗಳ ಸನ್ಮಾನ ಸಮಾರಂಭದಲ್ಲಿ ಸನ್ಮಾನ

೧೪. ವಿವೇಕಾನಂದ ಸನ್ಮಾನ ೨೦೦೭-೨೦೦೮.

೧೫. ಪ್ರಗತಿಪರ ಪತ್ರಕರ್ತರ ವೇದಿಕೆ, ೨೪.೦೧.೨೦೦೭ರಂದು ಸನ್ಮಾನ

೧೬. ಕನ್ನಡ ಅಭಿವೃದ್ಧಿ ಬಳಗದಿಂದ ಸನ್ಮಾನ

೧೭. ಹಾಸ್ಯೋತ್ಸವದಲ್ಲಿ ಸನ್ಮಾನ, ೨೦೦೯.

೧೮. ಗಾಂಧಿ ಸಾಹಿತ್ಯ ಸಂಘ, ಹಾಸ್ಯ ಬ್ರಹ್ಮದ ವತಿಯಿಂದ ಸನ್ಮಾನ (೧೬.೦೬.೨೦೦೯)

೧೯. ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ಸನ್ಮಾನ.

ಅಧ್ಯಾಯ ಏಳು

ಸಮಾರೋಪ

ಅಧ್ಯಾಯ ಏಳು

ಸಮಾರೋಪ

ಕಲೆ ಸಂಸ್ಕೃತಿಯ ಒಂದು ಅಂಗ. ಈ ಸಂಸ್ಕೃತಿಯ ಜೀವಂತಿಕೆಯ ಹಿಂದೆ ಹಲವು ವ್ಯಕ್ತಿಗಳ ಚೈತನ್ಯವಿದೆ. ಬದುಕನ್ನೇ ಕಲೆ ಸಂಸ್ಕೃತಿಗಾಗಿ ಮುಡಿಪಾಗಿಟ್ಟು, ಬೆಳೆಸಿಕೊಂಡು ಬರುತ್ತಿರುವ ಕವಿ ಚಿತ್ರಕಲಾವಿದ ಬಾಗೂರು ಮಾರ್ಕಾಂಡೇಯ ಅವರ ಜೀವನ ಹಾಗೂ ಸಾಧನೆ ಕಲಾಕೃತಿಗಳ ಕೊಡುಗೆ ಅಷ್ಟೇ ಮುಖ್ಯವಾದದ್ದು. ನಾಡಿನ ಸಂಸ್ಕೃತಿಯನ್ನು ಬಿಂಬಿಸುವ ಹಿನ್ನೆಲೆಯಲ್ಲಿ ಅವರ ಜೀವನ, ಚಿತ್ರಕಲೆ, ಮತ್ತು ಸಾಹಿತ್ಯ ಕುರಿತು ಒಂದು ಅಧ್ಯಯನ ಸಂಪ್ರಬಂಧ ರೂಪುಗೊಂಡಿದೆ. ಈ ಅಧ್ಯಯನವನ್ನು ಒಟ್ಟು ಏಳು ಅಧ್ಯಾಯಗಳಲ್ಲಿ ವಿಷಯ ವಸ್ತುವಿನ ನಿರೂಪಣೆಯಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ವಸ್ತು ವಿಷಯವಾದ ಕವಿ ಚಿತ್ರಕಲಾವಿದ ಬಾಗೂರು ಮಾರ್ಕಾಂಡೇಯ ಅವರ ಜೀವನ ಮತ್ತು ಸಾಧನೆ ಎರಡೂ ಸೇರಿಕೊಂಡಂತೆ ಅವರ ಕಲಾಕೃತಿಗಳು, ಕಲಾಬದುಕು ಮತ್ತು ಅವರು ತಾಯ್ನಾಡಿಗೆ ಕೊಡುಗೆಯಾಗಿಕೊಟ್ಟಿರುವ ಕನ್ನಡ ಎಲ್ಲರೂ ಸುಲಭವಾಗಿ ಕಲಿಯಲು ತಂತ್ರಾಂಶದಲ್ಲಿ ಬೆಳಕಿಗೆ ತಂದಿರುವ 'ಕನ್ನಡ ಸೌರಭ' ಎಂಬ ಸಾಂದ್ರಿಕೆ ಕುರಿತು ಸಾವಿರಾರು ರೇಖಾಚಿತ್ರಗಳಲ್ಲಿ ಆಯ್ದವು ಚುಕ್ಕೆ ಚಿತ್ರ, ವರ್ಣಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ, ಶೈಲಿ ಜೊತೆಗೆ ವೃತ್ತಿಯಲ್ಲಿದ್ದುಕೊಂಡು ಕಲಾಕ್ಷೇತ್ರಗಳನ್ನು ದುಡಿಸಿಕೊಂಡು ಮಕ್ಕಳಲ್ಲಿ ಚಿತ್ರಕಲಾಸಕ್ತಿ ಮೂಡಿಸುವ, ಚಿತ್ರಕಲೆಯ ಜೊತೆ ಸಾಹಿತ್ಯದ ಭಾಗವಾದ ಕವನ, ಭಾವಗೀತೆ, ಸಂಗೀತಗಳನ್ನು ಸಂರ್ಕಿಣಿಸಿರುವ ಮತ್ತು ವಿವಿಧ ಅಕಾಡೆಮಿಗಳಲ್ಲಿ ಮಾಡಿದ ಕಾರ್ಯ ಚಟುವಟಿಕೆಗಳು ಕಲಾಕೃತಿಗಳ ನೆಲೆಯ ಸಂಗ್ರಹ ಕುರಿತಾದ ಒಟ್ಟಾರೆಯಾಗಿ ಕಲಾವಿದರ ಬಾಲ್ಯದಿಂದ ಇಂದಿನವರೆಗಿನ ಕಲಾಕ್ಷೇತ್ರಕ್ಕೆ ಸೇವೆ ಸಲ್ಲಿಸಿರುವ ಕಲಾತ್ಮಕ ತುಣುಕುಗಳನ್ನು ಅಧ್ಯಯನ ಮಾಡುವ ಸದುದ್ದೇಶ ಹೊಂದಲಾಗಿದೆ. ಹಾಗೂ ಈ ಅಧ್ಯಯನದ ಸ್ವರೂಪ ಏಳು ಅಧ್ಯಾಯಗಳನ್ನೊಳಗೊಂಡಿದ್ದು, ವ್ಯಾಪ್ತಿಯಲ್ಲಿ ಅಧ್ಯಯನದ

ವಸ್ತು ವಿಷಯ ನಿಗದಿಯಾದ ವಿಸ್ತಾರವನ್ನು ಒಳಗೊಂಡಿದೆ. ಇದರಲ್ಲಿ ಕಲಾವಿದನ ಸಾಧನೆಯ ಎಲ್ಲೆಗಳನ್ನು ತಿಳಿಸುತ್ತದೆ. ಇದರ ಎಲ್ಲೆ ಅರಮನೆ, ಗುರುಮನೆ, ಮಠಮಾನ್ಯ, ಗಣ್ಯವ್ಯಕ್ತಿ, ಆರ್ಟ್ ಗ್ಯಾಲರಿ ಸೇರಿದಂತೆ ಕರ್ನಾಟಕವನ್ನೊಳಗೊಂಡಂತೆ ಕಲೆಯ ಮಿತಿಯನ್ನು ಪರಿಗಣಿಸಿಕೊಂಡು ವ್ಯಾಪ್ತಿಯನ್ನು ಹಿಡಿದಿಡಲಾಗಿದೆ. ಹಾಗೆಯೇ ವಿಧಾನ ಮೂಲ ಆಕರ ಸಾಮಗ್ರಿ ಮತ್ತು ಅನುಷಂಗಿಕ ಆಕರ ಸಾಮಗ್ರಿಗಳ ವಿಧಾನದಿಂದ ಈ ಅಧ್ಯಯನವನ್ನು ಸಿದ್ಧಪಡಿಸಲಾಗಿದೆ.

ಅಧ್ಯಾಯ ಎರಡರಲ್ಲಿ ಕಲಾವಿದರಾದ ಬಾಗೂರು ಮಾರ್ಕಾಂಡೇಯ ಅವರ ಜನನ, ಬಾಲ್ಯ, ಪರಿಸರ, ಶಿಕ್ಷಣ ಮತ್ತು ವೃತ್ತಿಬದುಕುಗಳನ್ನು ಈ ರೀತಿಯಾಗಿ ಚರ್ಚಿಸಲಾಗಿದೆ. ಚೆನ್ನಗೋವಿಂದಪ್ಪ ಮತ್ತು ಲಕ್ಷ್ಮಮ್ಮ ಎಂಬ ದಂಪತಿಗಳಿಗೆ ೧೯೬೬, ಜೂನ್ ೨೧ರಂದು ಜನಿಸಿದ ಬಾಗೂರರ ಬಾಲ್ಯದ ತುಂಟಾಟಗಳನ್ನು ಹಾಗೂ ಸ್ನೇಹಿತರಾದ ರಾಜು, ಐಯುಬ್, ಅತ್ತೆ ಮಗ ಶಿವಪ್ಪ, ಚಂದ್ರು ಇತರರ ಜೊತೆ ಬೆರೆತ ಘಟನೆಗಳನ್ನು, ಬಾಲ್ಯದಲ್ಲಿ ರಚಿಸಿದ ಚಿತ್ರ, ತಯಾರಿಸಿದ ಶಿಲ್ಪಗಳ ಬಗ್ಗೆ ವಿವರಿಸಲಾಗಿದೆ. ಆಗಿನ ಕಾಲಮಾನದಲ್ಲಿ ಬಾಗೂರರು ಕೂಲಿಮಠಕ್ಕೆಂದು ವಿದ್ಯಾರ್ಜನೆಗೊಗಿರುವ ತಂದೆಯಿಂದ ಬಳುವಳಿಯಾಗಿ, ಮಹಾಕಾವ್ಯಗಳ ಇತರೆ ಕಂದಪದ್ಯಗಳ ಸಾರವನ್ನು ಇವರ ತಲೆಗೆ ಧಾರೆಯರಿವ ವಿಷಯವಾಗಿ ಬಾಗೂರರಿನಲ್ಲಿ ಚಿಕ್ಕ ವಯಸ್ಸಿನಲ್ಲೇ ಕಲೆಯನ್ನು ಗುರುತಿಸಿ ಕಲಾಬ್ಯಾಸ ಮುಂದುವರೆಸಲು ಪ್ರೇರೇಪಿಸಿದ ಪರಪ್ಪ ಮತ್ತು ಇನ್ನೋರ್ವರುಗಳಾದ ನಾ. ಕಾಳೇಶ್ವರರಾವ್ ಅವರು ಇವರ ಮನೆಯಲ್ಲಿನ ಗ್ರಂಥಾಲಯದ ತಿರುಳುಗಳನ್ನು ಬಾಗೂರರಿಗೆ ಉಣಬಡಿಸಿರುವುದು. ಬಾಮಾರವರು, ಚಿಕ್ಕವಯಸ್ಸಿನಲ್ಲಿ ಆ ಊರಿನಲ್ಲಿ ಯಾರೋ ಕಲಾವಿದ ಕೃಷ್ಣ ಚಿತ್ರ ಬರೆದದ್ದನ್ನು ತನ್ನ ಮನಸ್ಸಿಗೆ ನಾಟಿಕೊಂಡಿರುವುದು, ತಾನು ಸಹ ಆಂಜನೇಯನ ಚಿತ್ರ ಬರೆದು, ಆಂಜನೇಯನ ಗುಡಿಯಲ್ಲಿ ನೇತು ಹಾಕಿ ಊರಿನ ಜನರಿಂದ ಮೆಚ್ಚುಗೆಯ ಮಾತುಗಳನ್ನು ಪಡೆದಿರುವ ವಿಷಯವಾಗಿ ಚರ್ಚಿಸಲಾಗಿದೆ. ಜೊತೆಗೆ ತಂದೆಯವರ ಹೆಗಲ ಮೇಲೆ ಪ್ರವಾಸ ಮಾಡಿ ನಾಟಕ, ಕಾವ್ಯಗಳ ನೆನಪನ್ನು ಸವಿದಿರುವ ಬಗ್ಗೆ ಸ್ನೇಹಿತರ ಹೆಸರುಗಳನ್ನು ತಿಳಿಸುವುದರೊಂದಿಗೆ ಪ್ರೌಢಶಿಕ್ಷಣ ಹಂತದಲ್ಲಿ ಧಾರವಾಡದಿಂದ ಮ್ಯಾಗ್ಸಿನ್ ತರಿಸಿಕೊಂಡು ಶಿಕ್ಷಣ ಪೂರೈಸುವುದರೊಂದಿಗೆ ವಿವರವಾಗಿ ಚರ್ಚಿಸುವುದರ ಜೊತೆ ಕೆಲವೊಂದು ಬಾಲ್ಯದ ತುಣುಕುಗಳನ್ನು ಹಿಡಿದಿಡಲಾಗಿದೆ. ಹಾಗೂ ಬಾಗೂರಿನ ಚಾರಿತ್ರಿಕ ಐತಿಹ್ಯವನ್ನು ಸಂಕ್ಷಿಪ್ತವಾಗಿ ತಿಳಿಸಿದ್ದು, ಇವರ ಕಲಾಶಿಕ್ಷಣದ ಕಲಿಕೆಯ ಸಂದರ್ಭದಲ್ಲಿ ಅವರು ವಿರೂಪಾಕ್ಷಪ್ಪ ಎಂಬುವರ ಮನೆಯಲ್ಲಿದ್ದು ಬೆಲ್ಲದ ವ್ಯಾಪಾರ, ತಂದೆ–ತಾಯಿಯರು ಮಾವಿನ ಹಣ್ಣು– ಮೀನು ಹಿಡಿದು ಮಾರಿ ಬಂದ ಹಣವನ್ನು ಬಾಗೂರರಿಗೆ ಕಳುಹಿಸಿದ ಮತ್ತು ಪತ್ರದ ಜೊತೆ ಸಾಹಿತ್ಯದ ಉಕ್ತಿಗಳ ಬಗ್ಗೆ ತಿಳಿಸಲಾಗಿದೆ. ಕಲಾ ಕಾಲೇಜಿನ ಪ್ರಿನ್ಸಿಪಾಲರ ಸ್ನೇಹಿತರುಗಳ ಮತ್ತು ಕಲಾಭ್ಯಾಸದ ಕಲಿಕೆಯ ರೀತಿಗಳನ್ನು ವಿವರಿಸಲಾಗಿದೆ. ಆರ್ಥಿಕವಾಗಿ ಕೊರತೆಯನ್ನು ನೀಗಿಸಿಕೊಳ್ಳಲು, ಪತ್ರಿಕೆ ಸಂಪಾದಕರುಗಳಾದ ಶಿವಕುಮಾರ್ ಮತ್ತು ವೈಕುಂಠರಾಜ ಅವರ ಪತ್ರಿಕೆಗಳಲ್ಲಿ ಕಲಾಕೃತಿ ರಚಿಸಿ ಕೊಟ್ಟಿರುವುದು ಮತ್ತು ಇತರ ಮಾಸಪತ್ರಿಕೆಗಳಿಗೆ ರಕ್ಷಾಪುಟ ರಚಿಸಿರುವುದು, ಧಾರವಾಡದ ಅಂಗಡಿಗಳ ನಾಮಫಲಕಗಳನ್ನು ಬರೆದಿರುವುದು, ಆಸ್ಕರ್

ಫರ್ನಾಂಡಿಸ್ ಮೇರೆಗೆ ಪಿ.ಎ. ಮಂಜುನಾಥ ಎಂಬುವವರಿಂದ ಆರ್ಥಿಕ ಸಹಾಯ ಪಡೆದಿರುವುದನ್ನು ಚರ್ಚಿಸಲಾಗಿದ್ದು, ಓದುವ ಸಮಯದಲ್ಲಿ ಎಂ.ಜಿ. ವಾಚೇದಮಠ ಮತ್ತು ಸ್ನೇಹಿತರೊಂದಿಗೆ ಕರಡು ರೇಖಾಚಿತ್ರ ಅಥವಾ ಸ್ಕೆಚ್ ಮಾಡುವ ವಿವರ, ಇವರ ಕಲಾಕೃತಿಗಳ ಮೇಲಾದ ಪ್ರಭಾವ, ತಂತ್ರ, ಶೈಲಿಗಳ ಬಗ್ಗೆ ಮತ್ತು ಪ್ರಭಾವಿತರ ಬಗ್ಗೆ ಕಲಾಕೃತಿಗಳ ಬಗ್ಗೆ ಚರ್ಚಿಸಲಾಗಿದೆ. ಕಲಾಪ್ರದರ್ಶನಗಳನ್ನು ತಿಳಿಸಲಾಗಿದೆ.

ವೃತ್ತಿ ಜೀವನದ ಹಾಗೂ ಕಲಾಬದುಕಿನಲ್ಲಿ ಇವರು ಪ್ರಪ್ರಥಮವಾಗಿ ದಾವಣಗೆರೆ ತಾಲೂಕಿನ ಅರಸಾಪುರ (ಕಡ್ಲೆಬಾಳು) ಎಂಬ ಶಾಲೆಯಲ್ಲಿ ನಿಯೋಗಿಯಾಗಿ ಅಲ್ಲಿಯ ಮಕ್ಕಳ ಮತ್ತು ಊರಿನ ಜನಸಾಮಾನ್ಯರೆಲ್ಲ ಪ್ರೀತಿ ಗಳಿಸುತ್ತಿದ್ದಂತೆಯೇ ಚೆಲುವಯ್ಯಂಗಾರ್ ಅವರ ಸಹಾಯದಿಂದ ಬೆಂಗಳೂರು ಪಠ್ಯಪುಸ್ತಕ ನಿರ್ದೇಶನಾಲಯಕ್ಕೆ ವರ್ಗಾವಣೆಯಾಗಿ ಅಲ್ಲಿ ಪ್ರಸ್ತುತ ಕೆ.ಎಸ್. ನಿಸ್ಸಾರ ಅಹಮದ್, ಡಾ. ದೊಡ್ಡರಂಗೇಗೌಡ, ಡಾ. ಎಚ್.ಎಸ್. ವೆಂಕಟೇಶ್, ಬಿ.ಕೆ.ಸುಮಿತ್ರ, ಭಗವಾನ್, ಬಿ.ಜಿ. ಅತ್ರಿ, ಆನಂದ ಮಾದಲಗೆರೆ, ಮಕ್ಕಳ ಸಾಹಿತಿ, ಶ್ರೀರವಿ, ನಿವೃತ್ತ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ., ಬಿ. ಜಗನ್ನಾಥರಾವ್, ಡಾ. ಡಿ.ವೀರೇಂದ್ರ ಹೆಗ್ಗಡೆ, ಖ್ಯಾತ ಸಂಗೀತ ಗಾಯಕಿ ಡಾ. ಶಮಿತಾ ಮಲ್ನಾಡ್ ಇನ್ನೂ ಇತರ ಪ್ರಖ್ಯಾತ ಕಲಾ ಬಳಗದೊಡನೆ ನೇರ ಸಂಪರ್ಕ, ಪ್ರೀತಿ, ಸ್ನೆಹಗಳನ್ನು ಬೆಳೆಸಿಕೊಂಡು, ಸಾಹಿತ್ಯ ಮತ್ತು ಚಿತ್ರಕಲಾ ಕ್ಷೇತ್ರದಲ್ಲಿ ಮಾಡುತ್ತಿರುವ ಕಲಾ ಚಟುವಟಿಕೆಗಳನ್ನು ಸಂಕ್ಷಿಪ್ತವಾಗಿ ಈ ಅಧ್ಯಯನದಲ್ಲಿ ವಿವರಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ಕಲಾಕೃತಿಗಳನ್ನು ವಿಂಗಡಿಸಿಕೊಂಡು ಇಂಕ್, ಪೆನ್, ಮತ್ತು ಜಲವರ್ಣ ಮಾಧ್ಯಮಗಳಿಂದ ರಚಿಸಿದ ಕಲಾಕೃತಿಗಳಾದ ಚುಕ್ಕೆ ಚಿತ್ರ, ಭಾವಚಿತ್ರ, ಸಂಯೋಜನಾಚಿತ್ರ, ನಿಸರ್ಗ ಚಿತ್ರಣಗಳ ಜೊತೆ ರಕ್ಷಾಪುಟ ವಿನ್ಯಾಸ ಕುರಿತು ಚರ್ಚಿಸಲಾಗಿದೆ. ಒಟ್ಟಾರೆ ಎಲ್ಲ ಕಲಾಕೃತಿಗಳಲ್ಲಡಗಿರುವ ಜೀವಂತಿಕೆಗಳನ್ನು ವಿವರಿಸಲು ಪ್ರಯತ್ನಿಸಲಾಗಿದೆ. ರೇಖೆಗಳಲ್ಲಿಯ ಅವರ ಭಾವಾಭಿವ್ಯಕ್ತತೆ ಸನ್ನಿವೇಶದ ಪರಿಣಾಮ, ಲಯ, ಆನಂದ, ವಿಸ್ಮಯ ಮೊದಲಾದ ಭಾವ ಸಂಚಾರ ಇಂಥೆಲ್ಲದರ ಭಾವಗಳು ಸಹಜವೆನಿಸುವ ರೀತಿಯಲ್ಲಿ ಅಭಿವ್ಯಕ್ತಿಸಿರುವುದರ ಬಗ್ಗೆ ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಶಿಶು ಸಾಹಿತ್ಯ, ಚಿಂತನಾ ಬರಹಗಳು, ಭಾವಗೀತೆಗಳು ಕುರಿತು ಅಧ್ಯಾಯ ಮಾಡಲಾಗಿದೆ. ಬಾಗೂರರು ರಚಿಸಿದ ಮಕ್ಕಳ ಸಾಹಿತ್ಯದ ತುಣುಕುಗಳನ್ನು ಕವನಗಳ ಮೂಲಕ ವಿವರಿಸಲಾಗಿದೆ. ಚಿಂತನಾಬರಹದಲ್ಲಿ ಪರಿಸರ ಕುರಿತು ಕನ್ನಡ ನಾಡುನುಡಿಯನ್ನು ಕವಿತೆಗಳ ಮೂಲಕ ಹಿಡಿದಿಟ್ಟಿರುವ ಹಾಗೂ ರಾಧೆ ಮತ್ತು ಕೃಷ್ಣರ ಒಲುಮೆಯ ವೈವಿಧ್ಯಮಯ ರೇಖಾಚಿತ್ರಾಧಾರಿತ ಭಾವಗೀತೆಗಳ ಬಗ್ಗೆ ಕುರಿತು ಒಟ್ಟು ಬಾಗೂರರ ಸಾಹಿತ್ಯದಲ್ಲಿಯ ಆಯ್ದ ಕವನ ಸಂಕಲನಗಳಾದ ಚಿತ್ತಾರದ ಅಡ್ಡಿಗೆ, ಹಸಿ ಕ್ಯಾನ್ವಾಸ್, ಚಳಿಗದಿರ, ಕಾರೇಮುಳ್ಳು, ತಾರೆಗಳ ಬಳಗ, ರಾಧೆ ಒಲುಮೆಯ ಚಿತ್ತಾರ ಎಂಬ ಕೃತಿಗಳನ್ನು ವಿವರಿಸುವುದರ ಜೊತೆಗೆ ಇವುಗಳಲ್ಲಿಯ ಕಾವ್ಯ ಕವಿತೆಗಳನ್ನು ಆಯ್ದುಕೊಂಡು ಈ ಸಾಹಿತ್ಯದಲ್ಲಿ ದೊರಕುವ ತಿರುಳುಗಳನ್ನು ತಿಳಿಸುವ ವಿಚಾರವನ್ನು ಈ ಅಧ್ಯಯನದಲ್ಲಿ ವಿವರಿಸಲಾಗಿದೆ.

ಅಧ್ಯಾಯ ಐದರಲ್ಲಿ ಚಿತ್ರಕಲಾ ಮತ್ತು ಸಾಹಿತ್ಯದ ಮೇಲಾದ ಪ್ರಭಾವ, ಪ್ರೇರಣೆ ತಂತ್ರ ಮತ್ತು ಶೈಲಿ ಇಲ್ಲಿ ಕಾಣಬಹುದು. ಇವರ ರೇಖಾಚಿತ್ರಗಳಲ್ಲಿ ರೇಖೆಗಳಲ್ಲಿ ಸಾಂಗತ್ಯದ ಸಾಹಿತ್ಯವಿದೆ. ಭಾವಗಳು ಸಮತೋಲನೆಯ ಬಗ್ಗೆ ಗಮನಹರಿಸಿಕೊಂಡಿದ್ದಾರೆ. ಮೃದು ವರ್ಣಗಳ ಜೊತೆ ಪ್ರಖರ ವರ್ಣಗಳ ಮಿಳಿತವನ್ನು ಪೂರೈಸಿರುವ ರೀತಿಯನ್ನು ವಿವರಿಸಲಾಗಿದೆ. ಇವರ ಶೈಲಿ ಮತ್ತು ತಂತ್ರವನ್ನು ಅಲ್ಲದೆ ಇವರ ಕಲಾಶೈಲಿಯ ವಿಶಿಷ್ಟ ಕೊಡುಗೆಯ ಜೊತೆಗೆ ಸಾಹಿತ್ಯದ ಮೇಲಾದ ಪ್ರಭಾವಗಳನ್ನು ಪ್ರೇರಣಾ ಅಂಶಗಳನ್ನು ಈ ಅಧ್ಯಯನದಲ್ಲಿ ವಿವರಿಸಲಾಗಿದೆ.

ಅಧ್ಯಾಯ ಆರರಲ್ಲಿ ಬಾಗೂರು ಮಾರ್ಕಾಂಡೇಯ ಕುರಿತು ಪ್ರಶಂಸಾ ಬರಹಗಳು, ಸಂದ ಪ್ರಶಸ್ತಿ ಗೌರವಗಳನ್ನು ಇಲ್ಲಿ ಆಯ್ದ ಕೆಲವು ಪ್ರಶಂಸಾ ಬರಹ ಹಾಗೂ ದಿನಪತ್ರಿಕೆಗಳಲ್ಲಿ ಬಂದಂತಹ ಕನ್ನಡ ಬಾಷೆಯ ಸಂವರ್ಧನೆಗೆ ಭಾಮಾರವರ ಕೊಡುಗೆ ಎಂಬ ತಲೆಬರಹವುಳ್ಳ ಡಾ. ದೊಡ್ಡರಂಗೇಗೌಡ, ಎಸ್. ದತ್ತಾತ್ರಿ, ಇವರು ಬಾಗೂರರ ಕೊಡುಗೆ ಕುರಿತು ಬರೆದಿರುವ ಪ್ರಶಂಸಾ ಬರಹಗಳು ಪ್ರಶಸ್ತಿ ಗೌರವಗಳ ಬಗ್ಗೆ ವಿವರಿಸಲಾಗಿದೆ.

ಅಧ್ಯಾಯ ಏಳು ಸಮಾರೋಪವಾಗಿದ್ದು, ಈ ಮೇಲೇಳಿದ ಆರು ಅಧ್ಯಾಯಗಳಿಂದ ದೊರೆತ ಫಲಿತಾಂಶಗಳ ವಿವರಗಳನ್ನು ಹೊಂದಿರುತ್ತದೆ.

* ಜಲವರ್ಣ ಮತ್ತು ತೈಲವರ್ಣಗಳನ್ನು ಅವರು ಚೆನ್ನಾಗಿ ರೂಡಿಸಿಕೊಂಡಿದ್ದಾರೆ.

* ವಿಶೇಷವಾಗಿ ಚುಕ್ಕೆ ಚಿತ್ರಗಳಲ್ಲಿ ಪ್ರಾವೀಣ್ಯತೆಯನ್ನು ಮೆರೆದಿದ್ದಾರೆ.

* ಸಾಹಿತ್ಯ ಮತ್ತು ಇನ್ನಿತರ ಕ್ಷೇತ್ರಗಳಲ್ಲಿನ ಉನ್ನತ ವ್ಯಕ್ತಿಗಳೊಂದಿಗೆ ಬಾಂಧವ್ಯವನ್ನು ಬೆಸೆದುಕೊಂಡಿದ್ದು ಈ ಅಧ್ಯಯನದಿಂದ ತಿಳಿದುಬಂದಿದೆ.

* ಚಿತ್ರಕಲೆಯಲ್ಲದೆ ಕವನ, ಭಾವಗೀತೆಗಳ ರಚನೆಯಲ್ಲಿಯ ತಮ್ಮ ಪ್ರೌಢಿಮೆಯನ್ನು ಮೆರೆದಿದ್ದಾರೆ.

* ಇನ್ನೂ ಹೆಚ್ಚಿನದಾಗಿ ಅಧ್ಯಯನ ಮಾಡುವವರಿಗೆ ವಿಫುಲವಾದ ಕಲಾಕೃತಿಗಳು ಬಾಮಾರಲ್ಲಿ ಇರುವುದನ್ನು ಕಾಣುತ್ತೇವೆ.

* ಅಪೂರ್ವವಾದ ಕಾವ್ಯಗಳನ್ನು ಕೊಡುವಂತ 'ರಾಧಾ ಮಾಧವರ ಒಲುಮೆ ಚಿತ್ತಾರ'ದ ರೇಖಾ ಚಿತ್ರಗಳನ್ನು ರಚನೆಯಲ್ಲಿ ಕಾಣುತ್ತೇವೆ.

* ಪರಿಸರದ ಕುರಿತಾಗಿ ಗೀತೆಗಳನ್ನು ಬರೆದು ಧ್ವನಿ ಸಾಂಧ್ರಿಕೆಯಲ್ಲಿ ಮುದ್ರಿಸಿ ಪ್ರತಿಶಾಲೆ ಕಾಲೇಜುಗಳಿಗೆ ಸಂಗೀತಗಾರರು ಹೋಗಿ ಹಾಡುಗಳನ್ನು ಕಲಿಸಿಕೊಡುವ ಪರಿಸರದ ಬಗ್ಗೆ ತಿಳಿ ಹೇಳುವ ಶ್ರೇಯಸ್ಸು ಇವರಿಗಿದೆ.

* ಇವರ ಕಲಾಕೃತಿಗಳ ಮೇಲೆ ಚಂದ್ರನಾಥ ಆಚಾರ್ಯ ಎಂ.ಎ.ಚಟ್ಟಿ, ಎಸ್.ಎಂ.ಪಂಡಿತ್ ಮತ್ತು ಪ್ರಹ್ಲಾದ್‌ರವರ ಪ್ರಭಾವವನ್ನು ಕಾಣಬಹುದು.

* ರೇಖಾಚಿತ್ರ ಕಲಾಕೃತಿಗಳಲ್ಲಿ ಕೆ.ಕೆ. ಹೆಬ್ಬಾರ್ ಮತ್ತು ಎಂ.ಜೆ. ವಾಚೇದ್‌ಮಠ ಅವರ ಪ್ರಭಾವವನ್ನು ಕಾಣಬಹುದು.

* ಇವರ ಕಲಾಕೃತಿಗಳಲ್ಲಿ ಮತ್ತು ಸಾಹಿತ್ಯದಲ್ಲಿ ಸಮಕಾಲೀನ ಸಮಾಜದಲ್ಲಿಯ ಅಂಶಗಳನ್ನೇ ಕಾಣುತ್ತೇವೆ.

* ಒಟ್ಟಾರೆ ಬಾಗೂರು ಮಾರ್ಕಾಂಡೇಯ ಅವರ ಕುರಿತು ಮಾಡಲಾಗಿರುವ ಈ ಅಧ್ಯಯನದಿಂದ ಯುವ ಪೀಳಿಗೆಯ ಕಲಾವಿದರಿಗೆ ಪ್ರೇರಣೆಯಾಗುವುದಲ್ಲದೆ ಮಾರ್ಗದರ್ಶಿಯೂ ಆಗುತ್ತದೆ.

* ಪ್ರಸ್ತುತ ಅಧ್ಯಯನವು ದೃಶ್ಯಕಲಾ ಪ್ರಪಂಚಕ್ಕೆ ಮತ್ತು ಕಲಾ ಇತಿಹಾಸಕ್ಕೆ ಅಮೂಲ್ಯವಾದ ಸೇರ್ಪಡೆಯಾಗಿದೆ.

* ಮುಂದಿನ ಅಧ್ಯಯನಕಾರರಿಗೂ ಉಪಯುಕ್ತ ಆಕರವಾಗಿ ಹೊರ ಹೊಮ್ಮಿದೆ ಎಂದರೆ ತಪ್ಪಿಲ್ಲ.

* ಮಾರ್ಕಾಂಡೇಯ ಅವರ ಬದುಕು ಮತ್ತು ಅವರ ಕಲಾಕೃತಿಗಳ ಕುರಿತು ಬೇರೆ ಬೇರೆ ಮುಖಗಳಿಂದ ಅಧ್ಯಯನ ಮಾಡಲು ದಾರಿ ವಿಶಾಲವಾಗಿ ತೆರೆದುಕೊಂಡೇ ಇದೆ. ಇದೊಂದು ಸಣ್ಣ ಪ್ರಯತ್ನವಾಗಿದೆ ಎನ್ನಬಹುದು.


ಅನುಬಂಧಗಳು

ಛಾಯಾಚಿತ್ರಗಳು


ರೇಖಾಚಿತ್ರಗಳು



ಎದುರಾಯಿತು



ಧನ್ಯತೆಯ



ಬರುವನೆನು



ರಾಧಾ-ಮಾದವ




ರಾಧಾ ನಿನ್ನ ಕರುಣೆ ಮನದಿ



ನುಡಿಸು ಮಾದವ ಕೊಳಲ ನಾದವ



ನಂಬದು ರಾಧೆ ಮನ



ಏನೋ ಎದೆಯಾಳ



ಹರಸು ತಾಯೇ ಕನ್ನಡಿಗರ



ಕನ್ನಡದಾದಿಶಕ್ತಿ



ಪ್ರತಿ ಕ್ಷಣ ಸಲ್ಲುತ್ತಿದೆ ತಾಯಿಗೆ
ನಮನ

ಚುಕ್ಕೆ ಚಿತ್ರಗಳು



ಗಣಪತಿ




ಡಾ|| ರಾಜಕುಮಾರ್



ಕೆ. ಎಸ್. ನಿಸಾರ್ ಅಹಮ್ಮದ್



ತಾಯಿ-ಮಗು



ಡಾ. ವಿರೇಂದ್ರ ಹೆಗ್ಗಡೆ




ದೀಪದ ಹುಡುಗಿ



ಬಾಲಕಿ



ಒಂದು ಶಿಲ್ಪ



ಬಿಜಾಪುರದ ಭಂಗಿ ಮಹಲ್

ವರ್ಣ ಭಾವಚಿತ್ರಗಳು



ಶಂಕರ ಲಿಂಗ ಭಾಗವತ್ ಸರಸ್ವತಿ



ಸ್ತ್ರೀ ಭಾವಚಿತ್ರ



ಬಾಲಕನ ಭಾವಚಿತ್ರ

ನಿಸರ್ಗ ಚಿತ್ರಗಳು



ಬಾಗೂರು ಶ್ರೀ ಚನ್ನಕೇಶ್ವರ ದೇವಸ್ಥಾನ




ನೀರಗುಂದದ ಚಿತ್ರಣ

ಸಂಯೋಜನಾ ಚಿತ್ರಗಳು
(ನವ್ಯ ಚಿತ್ರಗಳು)




ಬೇರು ಚಿತ್ರ-೧




ಬೇರು ಚಿತ್ರ-೨



ಬೇರು ಚಿತ್ರ-೩



ಬೇರು ಚಿತ್ರ-೪



ಆಕ್ರಂದಿಸುವ ಚಿತ್ರ-೧



ಆಕ್ರಂದಿಸುವ ಚಿತ್ರ-೨





ಆಕ್ರಂದಿಸುವ ಚಿತ್ರ-೩




ಆಕ್ರಂದಿಸುವ ಚಿತ್ರ-೪


ರಕ್ಷಾಪುಟ ವಿನ್ಯಾಸ ಚಿತ್ರಗಳು













ಬಾಗೂರು ಮಾರ್ಕಾಂಡೇಯರ ಕವಿತೆ
ಸುಮಧುರ ಭಾವಗೀತೆ
ಚಿತ್ರ ಪ್ರಕಾಶನ
ಚಿತ್ರ ಪ್ರಕಾಶನ


ಕವಿತೆಗಳು


ಚಿತ್ರಗಳು
ಮಾತನಾಡುತ್ತಿವೆ


ಲಾಲಿ ಹಾಡುಗಳು

ಪ್ರಶಂಸಾ ಬರಹಗಳು

ಪತ್ರಿಕೆಗಳಲ್ಲಿ ಭಾಷೆ ಮತ್ತು ಕಲೆ ಕುರಿತ ಪ್ರಶಂಸ ಬರಹಗಳು

ಮಂಗಳವಾರ 09, ಡಿಸೆಂಬರ್ 2008 — ಕರುನಾಡ ಸಂಜೆ — ಪುಟ 4

ಕನ್ನಡ ಕಲಿಯಲು ಕನ್ನಡ ಸೌರಭ

ಡಾ ದೊಡ್ಡರಂಗೇಗೌಡ

'ಕನ್ನಡ ಸೌರಭ' ಎಂಬ ಹೆಸರಿನಲ್ಲಿ ಅತ್ಯಂತ ಕ್ಷಿಪ್ರಗತಿಯಲ್ಲಿ, ಕಡಿಮೆ ವೇಳೆಯಲ್ಲಿ ಯಾವ ಗುರುಗಳ ನೆರವಿಲ್ಲದೆಯೇ ಸ್ವಯಂ ಬೋಧನೆಯಂತೆ ಕಲಿಯಬಹುದಾದ ತಂತ್ರಾಂಶವನ್ನು ಬಾಗೂರು ಮಾರ್ಕಾಂಡೇಯ ತಯಾರಿಸಿದ್ದಾರೆ.

ಕನ್ನಡ ಗೊತ್ತಿರದ ಅನ್ಯ ಭಾಷೆಯವರಾಗಲಿ, ಮಕ್ಕಳೇ ಆಗಿರಲಿ ಕಂಪ್ಯೂಟರ್ ಪರದೆಯ ಮೇಲೆ ಕಂಡು ಬರುವ ಐಕಾನ್ ಮೇಲೆ ಮೌಸ್ ಬಟನ್ ಒತ್ತಿದರೆ ಸಾಕು ತಂತ್ರಾಂಶದೊಳಗಿರುವ ಪಾಠಗಳ ಪರಿಪಡಿಯನ್ನೂ ಸಹ ನೋಡಲಾಗಿದ್ದು ಪಾಠದಿಂದ ಪಾಠಕ್ಕೆ ಸರಿಯಲು ಸುಲಭ ಮಾರ್ಗಸೂಚಿಗಳನ್ನು ಸಾವಧಾನ್ಯ ಅರಿವಿಗೂ ಬರುವಂತೆ ವಿನ್ಯಾಸಗೊಳಿಸ ಲಾಗಿದೆ.

ನಮ್ಮ ಸರ್ಕಾರದ ಐಎಎಸ್, ಐಪಿಎಸ್ ಹಾಗೂ ಇತರೇ ಅನ್ಯಭಾಷಿತ ಅಧಿಕಾರಿ ವರ್ಗದವರಿಗೂ ಬುರುಕಾಗಿ ಕನ್ನಡ ಕಲಿಯಲು ಸ್ಫೂರ್ತಿಯಾಗುವಂತಿರಬೇಕು. ಇಂತಹ ಹಲವು ತುರ್ತು ಅವಶ್ಯಕತೆಗಳ ನಡುವೆ ಸುವರ್ಣ ಕರ್ನಾಟಕ ವರ್ಷಾಚರಣೆ ಸಂಭ್ರಮದ ಈ ಸಂದರ್ಭದಲ್ಲೇ ನಮಗೊಂದು ಸಂತಸ, ಸಮಾಧಾನ ತರುವ ಹೊಸ ತೊಂದು ಕನ್ನಡ ಕಲಿಕಾ ತಂತ್ರಾಂಶವು 'ಕನ್ನಡ ಸೌರಭ' ಅನಾವರಣಗೊಳ್ಳುತ್ತಿರುವುದು ತಾಯ್ನಾಡಿನ ಸೌಭಾಗ್ಯ ಹಾಗೂ ಹೆಮ್ಮೆಯ ಸಂಗತಿಯಾಗಿದೆ.

ಮಕ್ಕಳ ಎಳೆಯ ಮನೋಧರ್ಮಕ್ಕೆ ಅನುಸಾರವಾಗಿ ರೂಪಿಸಲು ಪ್ರಯತ್ನಿಸಲಾಗಿದೆ. ಇದಕ್ಕಾಗಿ ಚಿತ್ರ, ಕವಿತೆ, ಸಂಗೀತ, ಹಿನ್ನೆಲೆ ಧ್ವನಿಯ ಉಚ್ಚಾರಣೆ, ಚಿತ್ರಗಳ ಚಲನೆಗೆ ಅನಿಮೇಶನ್ ಬಳಸಿಕೊಂಡಿರುವುದು ಪ್ರಸ್ತುತ ಕನ್ನಡ ಸೌರಭ'ದ ಹೆಗ್ಗಳಿಕೆಯಾಗಿದ್ದು ತಂತ್ರಾಂಶವು ಮಕ್ಕಳು, ಅನ್ಯ ಭಾಷಿಕರಿಗೂ ಪ್ರಿಯವಾಗುತ್ತದೆ.

ಶಾಲಾಮಟ್ಟದಲ್ಲಿ ಆರಂಭದಲ್ಲಿ ಮಕ್ಕಳಿಗೆ ಕನ್ನಡ ಕಲಿಸುವ ಕಾರ್ಯ ತುಂಬ ಸರಳ ಸುಲಲಿತವಾಗುವುದರಲ್ಲಿ ಯಾವುದೇ ಅನುಮಾನಗಳಿಲ್ಲ. ವೈಜ್ಞಾನಿಕ ತಾಂತ್ರಿಕ ಮಾರ್ಗಗಳನ್ನು ಬಳಸಿಕೊಂಡಿರುವುದು ಶ್ಲಾಘ್ಯ ಪ್ರಯತ್ನ ಎನ್ನಬಹುದು.

'ಕನ್ನಡ ಸೌರಭ' ಅಕ್ಷರ ಪರಿಚಯದೊಂದಿಗೆ ಆರಂಭಗೊಳ್ಳುವ ಇದರ ಪಠ್ಯಕ್ರಮವು ಕೂಡ ... ಚಟುವಟಿಕೆಯ ಜೋಡಣೆಯೂ ಆಗಿದೆ ಎನ್ನಬಹುದು. ಕಲಿಕೆಯು ಕನ್ನಡ ವರ್ಣಮಾಲೆಯೊಳಗಿನ ಹ್ರಸ್ವ ದೀರ್ಘ ಸ್ವರಗಳು, ವರ್ಗೀಯ, ಅವರ್ಗೀಯ ವ್ಯಂಜನಗಳು, ಅನುನಾಸಿಕ, ವಿಸರ್ಗ, ಪ್ಲುತ ಸ್ವರಾಕ್ಷರಗಳಾದಿ ಒಂದೊಂದೇ ಅಕ್ಷರವನ್ನು ಸ್ಫುಟವಾಗಿ, ಪಡಿ ಮಾಡಿಸಿ ಉಚ್ಚಾರಣಾ ಧ್ವನಿಯನ್ನು ಹಿನ್ನೆಲೆಯಾಗಿ ನಿರೂಪಿಸಲಾಗಿದೆ.



ದೃಶ್ಯ, ಶ್ರವಣಗಳು ಏಕ ಕಾಲದಲ್ಲಿ ಕಲಿಯುವವನ ಆಸಕ್ತಿ, ಆಲೋಚನೆಗಳನ್ನು ಸ್ಥಿರಗೊಳಿಸುವಂತೆ ಇದ್ದು ಕಲಿಕೆಯ ಓಘವನ್ನು ಹುಂಡುಗಿಸುವಂತೆ ಆಯುತ್ತದೆ.

ಸ್ಪಷ್ಟ ಉಚ್ಚಾರದೊಂದಿಗೆ ಪರಿಚಯಿಸಲ್ಪಡುತ್ತದೆ. ಕನ್ನಡದಲ್ಲಿನ ಒತ್ತಕ್ಷರಗಳು, ಅದರಲ್ಲಿ ಇರುವ ಒಟ್ಟು ವಿಧಗಳೊಂದಿಗೆ ಹಾಗೂ ಬಳಕೆಯೊಂದಿಗೆ ಪರಿಚಯಿಸಲಾಗಿದೆ.

ಕಲಿಕೆ ಎಂಬುದು ಯಾರಿಗೇ ಆಗಲಿ ಕಬ್ಬಿಣದ ಕಡಲೆಯೆನಿಸದೆ ಸುಗಮ, ಸುಲಲಿತ, ನಿರಂತರ ಆಸಕ್ತಿದಾಯಕವಾಗಿರುವಂತೆ ತಂತ್ರಾಂಶವನ್ನು ಸರಳಗೊಳಿಸಲಾಗಿದೆ.

ಪ್ರಾಥಮಿಕ ಶಿಕ್ಷಣ ಮಟ್ಟದಲ್ಲಿ ಸೇವೆ ಸಲ್ಲಿಸುತ್ತಿರುವ ಶಾಲಾ ಶಿಕ್ಷಕರಿಗೆ ಮಕ್ಕಳಿಗೆ ಬೇಗ ಕನ್ನಡ ಕಲಿಸಲು ಕವಿತೆಯನ್ನು ರಚಿಸಿ ಅದು ಬೋಧಪ್ರದವಾಗುವಂತೆ ಮಾಡಲಾಗಿದೆ. ಇದಕ್ಕೆ ಪೂರಕ ಚಿತ್ರಗಳು, ಹಿನ್ನೆಲೆ ಧ್ವನಿಯನ್ನು ಸಹ ನೀಡಲಾಗಿದೆ.

ಒಂದೊಂದು ಅಕ್ಷರ ಹಾಗೂ ಅಂಕಿಗೂ ಸುಂದರ ಮಕ್ಕಳ ಗೀತೆಯಾಗುವ ಪ್ರಾಸಬದ್ಧ ಕವಿತೆಗಳನ್ನು ರಚಿಸಿ ಸಂಗೀತದೊಂದಿಗೆ ಅವುಗಳನ್ನು ಪಟ್ಟ ಹಾಡುಗಳಾಗಿಸಿ ರಂಜನೆಯೊಂದಿಗೆ ಕಲಿಕೆಯನ್ನು ಆಕರ್ಷಕಗೊಳಿಸಲಾಗಿದೆ. ಇದು ಎಡೆಬಿಡದೆ ಅಕ್ಷರಗಳು ಕಲಿಯುವವನ ಮನಸ್ಸಿಗೆ ನಾಟುವಂತೆ ಹಾಗೇ ನಿಜ್ಜಳ ಅಕ್ಷರದ ಆಕೃತಿ, ಉಚ್ಚಾರಗಳು ನೆನಪಲ್ಲುಳಿಯುವಂತೆ ಮಾಡಲಾಗಿದೆ. ಇದರಲ್ಲಿ ಅಂಕಿಗಳ ಏರಿಕೆ ಕ್ರಮ, ಇಳಿಕೆ ಕ್ರಮಗಳನ್ನು ಪರಿಚಯಿಸಲಾಗಿದೆ.

ಇನ್ನು ಒಂದು ಭಾಷೆಯ ಲಕ್ಷಣಗಳು ಅದರ ಶುದ್ಧ ವ್ಯಾಕರಣಾಂಶಗಳಲ್ಲಿ ಅಡಗಿದೆ. ಕನ್ನಡದಲ್ಲಿಯೂ ಇರುವ ಸ್ವರ ಸಂಕೇತಗಳು, ವ್ಯಂಜನಗಳು 'ಕ' ಕಾರದಿಂದ 'ಳ' ಕಾರದವರೆಗೆ ಕಾಗುಣಿತಗಳ ರೂಪದಲ್ಲಿ ಪ್ರತಿ ಅಕ್ಷರವನ್ನು ಮುದ ನೀಡುವಂತೆ ಪರಿಚಯಿಸಲಾಗಿದೆ. ಇದರ ಜೊತೆಗೆ ಸಂಯುಕ್ತಾಕ್ಷರಗಳ ಪರಿಚಯ. ರಚನೆ, ಪರಿಚಿತ ಅಕ್ಷರಗಳನ್ನು ಜೋಡಿಸಿ ಸರಳ ಪದಗಳ ರಚನೆ ಮಾಡಿ ತೋರಿಸಲಾಗಿದೆ.

ಮುಖ್ಯವಾಗಿ ಒಂದೊಂದು ಭಾಷೆಯ ಅಕ್ಷರ ಬರೆಯುವ ರೀತಿ ಒಂದೊಂದು ನಿಯಮಕ್ಕೆ ಬದ್ಧವಾಗಿರುವಂತೆ ಕನ್ನಡ ವರ್ಣಮಾಲೆಯ ಪ್ರತಿ ಅಕ್ಷರವೂ ಅದರ ಅಕ್ಷರ ಬರವಣಿಗೆಯ ಆರಂಭವನ್ನು ಹೊಂದಿದ್ದು ಅದನ್ನು ಅನಿಮೇಶನ್ ಬಳಸಿ, ಧ್ವನಿಯೊಂದಿಗೆ ಪರಿಚಯಿಸಲಾಗಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕನ್ನಡ ಗೊತ್ತಿಲ್ಲದ ಆದರೂ ಕಲಿಕೆಯಲ್ಲಿ ಆಸಕ್ತಿ ತೋರುವವರಿಗೆ ಈ ತಂತ್ರಾಂಶದ ನೆರವಿನಿಂದ ಕನ್ನಡ ಕಲಿಯಲು ಪ್ರೇರಣೆ ನೀಡಬಹುದು.

ಯಾವುದೇ ಭಾಷೆಯ ಶಿಕ್ಷಣ ಸಂದರ್ಭದಲ್ಲಿ ಅದರ ಮೂಲ ಶಕ್ತಿ



ಕ್ರಮಬದ್ಧತೆ ವ್ಯಾಕರಣವಾಗಿರುತ್ತದೆ. ಅದರ ಪರಿಚಯವನ್ನು ಈ ತಂತ್ರಾಂಶದಲ್ಲೂ ಸುಲಭ ಸರಳಗೊಳಿಸಲಾಗಿದೆ.

ಕನ್ನಡ ಸೌರಭ ತಂತ್ರಾಂಶ ಬೋಧನೆ, ರೂಪಣೆ ಕನ್ನಡಿಗರ ಕನ್ನಡ ಭಾಷೆಯ ಉಳಿವಿಗೆ ಪ್ರಭಾವಪೂರ್ಣವಾಗಿ ಪ್ರತಿಕ್ರಿಯಿಸಬಹುದು. ನಾಡಿನಲ್ಲಿ ಅನ್ಯ ಭಾಷಿಕ ಅಧಿಕಾರಿಗಳ ಬಾಹುಳ್ಯದಿಂದಾಗಿ ಕನ್ನಡ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಇರಬಹುದಾದ ಒಂದು ಉಪಾಯವೆಂದರೆ ಈ ಬಗೆಯ ತಂತ್ರಾಂಶಗಳ ಮೂಲಕ ಕ್ಷಿಪ್ರಗತಿಯಲ್ಲಿ ಕನ್ನಡ ಕಲಿಸುವ ಶಾಲೆಗಳನ್ನು ತೆರೆದು ನಾಡಿನಲ್ಲಿರುವ ಸರ್ವಪ್ರಜೆಯೂ ಕನ್ನಡ ಕಲಿಯಲು ಉತ್ಸುಕರಾಗುವಂತೆ ಮಾಡಬಹುದಾಗಿದೆ.






ಬಾಗೂರು ಮಾರ್ಕಾಂಡೇಯ

ಕನ್ನಡ ಸೌರಭ

ಕಂಪ್ಯೂಟರ್‌ನಲ್ಲಿ ಕನ್ನಡ ಕಲಿಕೆ

ಕಾಲ ಬದಲಿಸಿತು ತಕ್ಕಂತೆ ಬಾಳಬೇಕು, ಆಗಲೇ ಬೆಳಗು. ಇಂದು ಎಲ್ಲದಕ್ಕೂ ಕಂಪ್ಯೂಟರ್. ಮನೆಯ ಲೆಕ್ಕದಿಂದ ಹಿಡಿದು ಗಗನಕ್ಕೆ ಹಾರುವವರಿಗೆ. "ಹಾಗಾದರೆ ನಮ್ಮ ಕನ್ನಡ ನಾಡಿನಲ್ಲೇ ಕನ್ನಡ ಮೂಲೆಗುಂಪಾಗುತ್ತಿರುವ ಈ ದಿನದಲ್ಲಿ ಕನ್ನಡ ಕಲಿಕೆ ಕಂಪ್ಯೂಟರಿನಿಂದ ಏಕೆ ಆಗಬಾರದು?'' ಎಂಬ ಯೋಚನೆ ಒಬ್ಬ ಕನ್ನಡ ಪ್ರಿಯ ಸಾಹಸಿಗನಲ್ಲಿ ಮೂಡಿತು. ಕಾರ್ಯಪ್ರವೃತ್ತನಾದ ಆ ಉತ್ಸಾಹಿ, ಎಂಟು ವರ್ಷ ಸತತ ಪ್ರಯತ್ನದಲ್ಲಿ ತೊಡಗಿದ. ಹೆಂಡತಿಯೂ ಈ ಸಾಹಸದಲ್ಲಿ ಕೈ ಜೋಡಿಸಿದರು. ಇದೀಗ ಅವರ ಕನಸು ನನಸಾಗಿದೆ. ಆತ ಒಬ್ಬ ಕವಿ ಹೃದಯಿ.



ಕಲಾವಿದ, ಮಕ್ಕಳ ತಜ್ಞ. ಹಾಗಾಗಿ ವಿಶೇಷವೆಲ್ಲ ಆಯಾಮಗಳನ್ನು ಬಳಸಿಕೊಳ್ಳಬಹುದೋ ಅದನ್ನೆಲ್ಲಾ ಬಳಸಿಕೊಂಡು ಸಿದ್ಧಪಡಿಸಿದರು "ಕನ್ನಡ ಸೌರಭ - ತಂತ್ರಾಂಶ" ಅದೀಗ ತನ್ನ ಸೌರಭವನ್ನು ಬೀರಲು ಅರಳಿ ನಿಂತಿದೆ ಇದರ ರೂವಾರಿ ಬಾಗೂರು ಮಾರ್ಕಾಂಡೇಯ.

ಆಡುವ ಮಗು ಆಟದ ಜೊತೆ ಪಾಠ ಸುಲಭವಾಗಿ ಕಲಿಯುತ್ತಲ್ಲ. ಮಗುವಿಗಿಲ್ಲಿ ಈ ತಂತ್ರಜ್ಞಾನದಿಂದ ಕನ್ನಡ ಕಲಿಕೆ ಅತಿ ಸುಲಭ. ಕೇವಲ ಮಗು ಮಾತ್ರ ಕಲಿಯಬೇಕೆ? ಕನ್ನಡನಾಡು ಎಲ್ಲ ಭಾಷಿಕರ ಬೀಡಾಗಿದೆ ದೊಡ್ಡ ದೊಡ್ಡ ಅಧಿಕಾರಿಗಳು ಎಲ್ಲೆಲ್ಲಿಂದಲೋ ಬರುತ್ತಾರೆ. ಅವರಿಗೆಲ್ಲ ಈ ಸಾಧನದ ಮೂಲಕ ಸರಳವಾಗಿ ಕನ್ನಡವೇಕೆ ಕಲಿಸಬಾರದು?

ಬಾಗೂರು ಮಾರ್ಕಾಂಡೇಯ ಅವರ ಈ ತಂತ್ರಜ್ಞಾನದಲ್ಲಿ ಏನೆಲ್ಲ ಅಳವಡಿಕೆಯಾಗಿದೆ ಎಂದರೆ, ಅಕ್ಷರ ಪರಿಚಯದಿಂದ ಹಿಡಿದು ಹಣದವರೆಗೆ 50 ವಿಭಾಗವಿದೆ. ಅಕ್ಷರ ಉಚ್ಚಾರ, ಬರೆಯುವ ರೀತಿ, ಅಂಕಿಗಳು, ಕಾಗುಣಿತ, ಸಂಯುಕ್ತಾಕ್ಷರ, ಪದ ವಾಕ್ಯರಚನೆ ಎಲ್ಲವೂ ಹಂತಹಂತವಾಗಿ ಶಬ್ದ, ಚಿತ್ರ, ಅನಿಮೇಷನ್ ಮೂಲಕ ಸಾಗುತ್ತದೆ ಸ್ವತಃ ಕವಿಯಾದ ಇವರು ಒಂದೊಂದು ಅಕ್ಷರಕ್ಕೂ ಒಂದೊಂದು ಹಾಗೆವನಗಳನ್ನು ರಚಿಸಿ, ಸಂಗೀತದಲಿ ಹಾಡಿಸಿ, ... ಅಂಕಿಗಳಿಗೊಂದೊಂದು ಕವಿತೆ. ಹೀಗೆ ಸುಮಾರು 57 ಕವಿತೆಗಳಿವೆ. ಅವಕ್ಕೆ ಸುಂದರ ಚಿತ್ರಗಳನ್ನೂ ರಚಿಸಿದ್ದಾರೆ

ಈ ಒನ್ನೆಲೆಯಲ್ಲಿ "ಔ"
ಔಷಧ ರೋಗಕ್ಕೆ ...
ಔತಣವೇ ಊಟದ ಕವಿತೆ
ಔತ್ತುಮೇ ಬಾಳಿಗೆ ಭೂಷಣ

ಔದಾರ್ಯತೆ ಕನ್ನಡ ಜನತೆ... ಈ ಪದ್ಯ ಒಂದರಲ್ಲೇ ಔನಿಂದ ಪ್ರಾರಂಭವಾಗುವ ನಾಲ್ಕು ಹೊಸ ಪದಗಳನ್ನು ಪರಿಚಯಿಸುವ ಜೊತೆಗೆ ಕನ್ನಡಿಗರ ಔದಾರ್ಯ, ಉತ್ತಮ ವ್ಯಕ್ತಿ ನಡತೆಯ ನೀತಿ ಸಹಾ ಇಲ್ಲಿದೆ. ಇದೇ ರೀತಿ, "ಕ"...

ಕಪ ತೇಲೋ ಕದ
ಕಲಿಯಲು ಕಸ್ತೂರಿ ಕನ್ನಡವ
ಎಂದೆಂದಿಗೂ ಮುನ್ನಡೆವ
ಕಂಪು ಬೀರುವ ಹೂವಿನ ಹಾಗೆ

ಕನಕ ಬಾಳುವೆ ನಡೆಸುವ... ಒಂದೇ ಚುಟುಕುವಿನಲ್ಲಿ ಆರು ಶಬ್ದಗಳ ಪರಿಚಯವಾಗುತ್ತೆ. ಕನ್ನಡ ಶ್ರೇಷ್ಠತೆಯ ಕಂಪೂ ಬೀಸುತ್ತದೆ.

ಮುಂದೆ ಸಾಗಿ. ವಿವಿಧ ಶಬ್ದಗಳ ಪರಿಚಯದ ಜೊತೆಗೆ ಸಾಕು ಪ್ರಾಣಿ, ಕಾಡು ಪ್ರಾಣಿಗಳು, ಜಲಚರಗಳು, ಪಕ್ಷಿಗಳು, ಹೂವು - ಹಣ್ಣುಗಳು, ತರಕಾರಿ, ವಾಹನಗಳು, ಆಹಾರ, ಉಡುಪು, ಅಂಗಾಂಗಗಳು, ದಿನನಿತ್ಯ ಉಪಯೋಗಿಸುವ ವಸ್ತುಗಳು, ಸಂಗೀತ ಸಾಧನಗಳು, ಮಾನವ ಸಂಬಂಧಗಳು ಎಲ್ಲವೂ ಸಚಿತ್ರವಾಗಿ ಸಶಬ್ದವಾಗಿ ನಮ್ಮೆದುರು ಬರುತ್ತವೆ.

ಕನ್ನಡ ಕಲಿಕೆ, ಕನ್ನಡದ ಇಂಪಾದ ಗೀತೆ, ಕನ್ನಡ ನಾಡಿನ ಪ್ರಾಕೃತಿಕ ಸಮೃದ್ಧತೆ ಕನ್ನಡಿಗರ ಔದಾರ್ಯದ ಮಹೋನ್ನತೆ ಹಾಗೂ ಕನ್ನಡದ ಅವಶ್ಯಕತೆಯನ್ನು ಸರಳವಾಗಿ ಎತ್ತಿ ಹಿಡಿದ ಬಾಗೂರು ಮಾರ್ಕಾಂಡೇಯ ಅವರ "ಕನ್ನಡ ಸೌರಭ" ಪ್ರತಿಶತ ತನ್ನ ಹೆಸರನ್ನು ಸಾರ್ಥಕಗೊಳಿಸಿಕೊಂಡಿದೆ. ಹೊಸದಾಗಿ ಭಾಷೆ ಕಲಿವವರೆಲ್ಲರೂ ಒಂದು ರೀತಿ ಮಕ್ಕಳೇ. "ಸುಲಿದ ಬಾಳೆಯ ಹಣ್ಣಿನಂದದಿ'' ಕನ್ನಡ ಕಲಿಸುವ ಈ ತಂತ್ರಜ್ಞಾನ ಕುರಿತು ಡಾ. ವೀರೇಂದ್ರ ಹೆಗ್ಗಡೆಯವರು "ಇಂದಿನ ಯುಗದಲ್ಲಿ ವಿದ್ಯಾರ್ಥಿಗಳಿಗೆ ಮತ್ತು ಕನ್ನಡೇತರರಿಗೆ ಕನ್ನಡ ಭಾಷೆ ಕಲಿಸುವ ಅತ್ಯಂತ ಸುಲಭ ಮಾರ್ಗ ಇದು'' ಎಂದಿದ್ದಾರೆ

ಸರ್ಕಾರ, ಸಂಘ ಸಂಸ್ಥೆಗಳು ಇತ್ತ ಕಣ್ಣು ತೆರೆದು ನೋಡಿ ಇದನ್ನು ಸುಲಭವಾಗಿ ಎಲ್ಲರ ಮನ ತಲುಪಿಸುವ, ಕನ್ನಡದ ತೇರೆಳೆಯುವ ಕೆಲಸ ಮಾಡಿದರೆ - ನವೆಂಬರಿನಲ್ಲಿ ಮಾತ್ರ ಕನ್ನಡ ಉತ್ಸವಗಳನ್ನು ಮಾಡಿ ಹನ್ನೊಂದು ತಿಂಗಳು ಮರೆತು ಕೂರುವ ನಮ್ಮ ಪ್ರವೃತ್ತಿಯಿಂದ ದೂರ ಸರಿದಿದ್ದೇವೆ ಎಂಬುದಕ್ಕೆ ಅದು ಸಾಕ್ಷಿಯಾದಂತೆ ಅಲ್ಲವೆ? ಹೆಚ್ಚಿನ ಮಾಹಿತಿಗೆ ಮೊ. 94482 53533,
ಇ-ಮೇಲ್ : latabama@yahoo.com
ಸಂಪರ್ಕಿಸಬಹುದು.

) ಎನ್. ದತ್ತಾತ್ರಿ






4 ಈ ಸಂಜೆ

ಕನ್ನಡ ಕಲಿಯೋದು ಸುಲಭ

ಕೊಡುಗೆಯಾಗಲಿದೆ ಬಾಗೂರರ ಕನ್ನಡ ಸೌರಭ



ಕನ್ನಡ ಸೌರಭ – ಕಲಿಯಲು ಸುಲಭ

– ಕೋ.ಶಿ. ಜಗದೀಶ್

ಗಣಕ ತಂತ್ರಾಂಶಗಳ ಅಭಿವೃದ್ಧಿ ಕ್ಷೇತ್ರದಲ್ಲಿ ಭಾರತವಿಂದು ವಿಶ್ವದಲ್ಲೇ ಮಂಚೂಣಿಯಲ್ಲಿರುವುದು ಭಾರತೀಯರಾದ ನಮಗೆ ಹೆಮ್ಮೆಯ ಸಂಗತಿ. ಆದಾಗ್ಯೂ ನಮ್ಮ ದೇಶದ ಅಗತ್ಯಗಳನ್ನು ಸ್ವಯಂ ಮನಗಂಡು ದೇಶೀಯ ಭಾಷೆಯಲ್ಲಿ ಶಿಕ್ಷಣ ನೀಡುವುದು. ಈಗಿನ ಸ್ಥಿತಿಯನ್ನು ಸುಧಾರಿಸಲು ನೆರವಾಗಬಲ್ಲ ಪೂರಕ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಬೇಕಾಗಿರುವುದು ಇಂದಿನ ತುರ್ತು ಅಗತ್ಯವಾಗಿರುತ್ತದೆ.

ನಾಡಿನ ತಂತ್ರಾಂಶ ನಿಪುಣರು ಶ್ರಾಯ್ಸಾಡಿನ ಜನತೆಗೆ ಕಲಿಕೆಯಲ್ಲಿ ನೆರವಾಗಬಲ್ಲ ಸರಳ ತಂತ್ರಾಂಶಗಳನ್ನು ರೂಪಿಸುವುದರಿಂದ ಆತಂಕವಿಲ್ಲದಂತೆ ಎಲ್ಲರಿಗೂ ಕಲಿಕೆಯ ಅವಕಾಶ ತೆರೆದುಕೊಳ್ಳಲು ಸಾಧ್ಯವಾಗುತ್ತದೆ. ಅಂತೆಯೇ ಸಾಂಸ್ಕೃತಿಕ ವಲಯವು ಚೇತೋಹಾರಿ ದಳವಣಿಗೆಗೆ ವೇಗದ ಚಾಲನೆ ಪಡೆದುಕೊಳ್ಳುತ್ತದೆ. ಇಂದು ಸಾಫ್ಟ್‌ವೇರ್ ತಂತ್ರಜ್ಞಾನ ಕ್ಷೇತ್ರದಲ್ಲಿನ ಅನನ್ಯ ಸಾಧನೆಯಿಂದ ಕರ್ನಾಟಕವು ಭಾರತದಲ್ಲಷ್ಟೇ ಅಲ್ಲ ವಿಶ್ವದ ಗಮನವನ್ನೂ ಸೆಳೆದಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಈ ದಿಶೆಯಲ್ಲಿ ಕರ್ನಾಟಕಕ್ಕೆ ಅನ್ಯ ಭಾಷೆಗಳಿಂದ ತುಂಬಿ ಕನ್ನಡ ನಾಡಿಗೆ ಸಿಗಬೇಕಾದ ಮನ್ನಣೆ ಆದ್ಯತೆ ದೊರೆಯುತ್ತಿಲ್ಲದಿರುವುದು ಅತ್ಯಂತ ನೋವಿನ ವಿಷಯ. ಇಂತಹ ಸಂದರ್ಭದಲ್ಲಿ ರಾಜ್ಯಕ್ಕೆ ವಲಸೆ ಬಂದಿರುವ ವಿವಿಧ ಔದ್ಯೋಗಿಕ ಕ್ಷೇತ್ರಗಳಲ್ಲಿ ಕಾರ್ಯಮಗ್ನರಾಗಿರುವ ಅನ್ಯಭಾಷಿಕರು ಕನ್ನಡ ಕಲಿಯುವಂತಾಗಿ ನಾಡಿನ ಸಂಸ್ಕೃತಿಯ ಮುಖ್ಯವಾಹಿನಿಗೆ ಬರುವಂತಾಗಬೇಕು. ಇದಕ್ಕೆ ಪೂರಕ ಕಲಿಕಾ ವಾತಾವರಣ ಕಲ್ಪಿಸಲು ಕನ್ನಡ ಕಲಿಕೆ ಸರಳ ಮಾರ್ಗಗಳನ್ನು ತಾಂತ್ರಿಕವಾಗಿ ನಿರ್ಮಿಸಿಕೊಳ್ಳಬೇಕಾಗುತ್ತದೆ. ಇದು ರಾಜ್ಯದ ಮಕ್ಕಳಿಗೂ ಕಲಿಕೆಯಲ್ಲಿ ಹಿತವಾಗಿರುವಂತಿರಬೇಕು. ನಮ್ಮ ಸರ್ಕಾರದ ಐ.ಎ.ಎಸ್., ಐ.ಪಿ.ಎಸ್ ಹಾಗೂ ಇತರೇ ಅನ್ಯಭಾಷಿಕ ಅಧಿಕಾರಿ ವರ್ಗದವರಿಗೂ ಚುರುಕಾಗಿ ಕನ್ನಡ ಕಲಿಯಲು ಸ್ಫೂರ್ತಿಯಾಗುವಂತಿರಬೇಕು.

ಬಾಗೂರು ಮಾರ್ಕಂಡೇಯರವರು ತಮ್ಮ ೮ ವರ್ಷಗಳ ಅವಿರತ ಶ್ರಮ ಹಾಗೂ ಪರಿಕಲ್ಪನೆ ಜಾಣ್ಮೆಯಿಂದ 'ಕನ್ನಡ ಸೌರಭ' ಎಂಬ ಹೆಸರಿನಲ್ಲಿ ಅತ್ಯಂತ ಶೀಘ್ರಗತಿಯಲ್ಲಿ, ಕಡಿಮೆ ವೇಳೆಯಲ್ಲಿ ಗುರುಗಳ ನೆರವಿಲ್ಲದೆ ಕಲಿಯಬಹುದಾದ ತಂತ್ರಾಂಶವನ್ನು ತಯಾರಿಸಿದ್ದಾರೆ. ಕನ್ನಡ ಗೊತ್ತಿರದ ಅನ್ಯ ಭಾಷೆಯವರಾಗಲಿ, ಮಕ್ಕಳೇ ಆಗಿರಲಿ ಕಂಪ್ಯೂಟರ್ ಪರದೆಯ ಮೇಲೆ ಕಂಡು ಬರುವ ಐಕಾನ್ ಮೇಲೆ ಮೌಸ್ ಬಟನ್ ಒತ್ತಿದರೆ ಸಾಕು ಕನ್ನಡ ಸೌರಭ ತಂತ್ರಾಂಶದೊಳಗಿರುವ ಪಾಠಗಳ ಪರಿವಿಡಿಯನ್ನೂ ಸಹ ಕೊಡಲಾಗಿದ್ದು ಪಾಠದಿಂದ ಪಾಠಕ್ಕೆ ಸರಿಯಲು ಸುಲಭ ಮಾರ್ಗಸೂಚಿಗಳನ್ನು ಸಾಮಾನ್ಯರ ಅರಿವಿಗೂ ಬರುವಂತೆ ವಿನ್ಯಾಸಗೊಳಿಸಲಾಗಿದೆ. ಪ್ರತಿ ಅಂಕಿ ಹಾಗೂ 'ಅ'ಕಾರಾದಿ ಅಕ್ಷರಗಳಿಗೆ ಅರ್ಥಪೂರ್ಣ, ಬೋಧಪೂರ್ಣ ಕವಿತೆಗಳನ್ನು ರಚಿಸಿ ಅದಕ್ಕೆ ಸಂಗೀತ ಸಂಯೋಜಿಸಿ ಇಂಪಾದ ಹಾಡಾಗಿಸಲಾಗಿದೆ. ಇದಕ್ಕೆ ಖ್ಯಾತ ಸಂಗೀತ ನಿರ್ದೇಶಕರಾದ ಬಿ.ವಿ. ಶ್ರೀನಿವಾಸ್‌ರವರು ಸಂಗೀತ ನಿರ್ದೇಶನ ನೀಡಿದ್ದು, ಉಮೇಶ್‌ರವರು ವಾದ್ಯಗೋಷ್ಠಿ ನೆರವು ನೀಡಿದ್ದಾರೆ. ಹೆಸರಾಂತ ಗಾಯಕಿ ಡಾ. ಶಮಿತಾ ಮಲ್ನಾಡ್ ಅವರು ಇಂಪಾದ ಧ್ವನಿ ನೀಡಿದ್ದಾರೆ.

ಕನ್ನಡ ಭಾಷೆ ಕಲಿಕೆಯಲ್ಲಿ ಮಕ್ಕಳನ್ನು ದೃಷ್ಟಿಯಲ್ಲಿಟ್ಟುಕೊಂಡು ತಂತ್ರಾಂಶ ರೂಪಿಸಲಾಗಿದೆ. ಅದಕ್ಕೆ ಪೂರಕವಾಗಿಯೇ ತಂತ್ರಾಂಶದೊಳಗೆ ಕಲಿಕೆಯ ಆರಂಭದಿಂದ ಅಂತ್ಯದವರೆಗೂ ಮಕ್ಕಳ ಎಳೆಯ ಮನೋಧರ್ಮಕ್ಕೆ ಅನುಸಾರವಾಗಿ ರೂಪಿಸಲು ಪ್ರಯತ್ನಿಸಲಾಗಿದೆ. ಇದಕ್ಕಾಗಿ ಚಿತ್ರ, ಕವಿತೆ, ಸಂಗೀತ, ಹಿನ್ನೆಲೆ ಧ್ವನಿಯ ಉಚ್ಚಾರಣೆ, ಚಿತ್ರಗಳ ಚಲನೆಗೆ ಅನಿಮೇಶನ್ ಬಳಸಿಕೊಂಡಿರುವುದು ಪ್ರಸ್ತುತ ಕನ್ನಡ ಸೌರಭದ ಹೆಗ್ಗಳಿಕೆ.

ಅಕ್ಷರ ಪರಿಚಯದೊಂದಿಗೆ ಆರಂಭಗೊಳ್ಳುವ ಇದರ ಪಠ್ಯ ಕ್ರಮವೂ ಕೂಡ ಅನಾದೃಶ, ಜಾಣ್ಮೆ, ಚತುರತೆಯ ಜೋಡಣೆಯೂ ಆಗಿದೆ ಎನ್ನಬಹುದು. ಕಲಿಕೆಯು ಕನ್ನಡ ವರ್ಣಮಾಲೆಯೊಳಗಿನ ಹ್ರಸ್ವ, ದೀರ್ಘಸ್ವರಗಳು, ವರ್ಗೀಯ, ಅವರ್ಗೀಯ ವ್ಯಂಜನಗಳು, ಅನುನಾಸಿಕ, ವಿಸರ್ಗ, ಪ್ಲುತ ಸ್ವರಾಕ್ಷರಗಳಾದಿ ಒಂದೊಂದೇ ಅಕ್ಷರವನ್ನು ಸ್ಫುಟವಾಗಿ, ಪಡಿಮೂಡಿಸಿ ಉಚ್ಚಾರಣಾ ಧ್ವನಿಯನ್ನು ಹಿನ್ನೆಲೆಯಾಗಿ ನಿರೂಪಿಸಲಾಗಿದೆ. ದೃಶ್ಯ ಶ್ರವಣಗಳು ಏಕ ಕಾಲದಲ್ಲಿ ಕಲಿಯುವವನ ಆಸಕ್ತಿ, ಆಲೋಚನೆಗಳನ್ನು ಸ್ಥಿರಗೊಳಿಸುವಂತೆ ಇದ್ದು ಕಲಿಕೆಯ ಓಘವನ್ನು ತುಂಡರಿಸದಂತೆ ಕಾಯುತ್ತದೆ. ಇಲ್ಲಿನ ಕಲಿಕಾ ಲೋಕವು ತೀರಾ ನವ್ಯ ಶೈಲಿಯ ಜಾಲವನ್ನೇ ಹೆಣೆಯಲ್ಪಟ್ಟಿದೆ. ಕಲಿಕೆಯ ಸಮಯವು ಮಕ್ಕಳಲ್ಲಿ ಒಂದು ಬಗೆಯ ಆನಂದದ ಅನುಭೂತಿಯುಂಟಾಗುವಂತೆ ಅವರಿಗಾಗಿಯೇ ಮುದ್ದಾದ ಕಾರ್ಟೂನ್ ಚಿತ್ರಗಳನ್ನು ರಚಿಸಲಾಗಿದೆ. ಕನ್ನಡ ಸೌರಭ ತಂತ್ರಾಂಶವು ಕನ್ನಡ ಭಾಷೆಯ ಉಳಿವಿಗೆ ಪ್ರಭಾವಪೂರ್ಣವಾಗಿ ಪ್ರತಿಕ್ರಿಯಿಸಬಹುದು. ನಾಡಿನಲ್ಲಿ ಅನ್ಯ ಭಾಷಿಕ ಅಧಿಕಾರಿಗಳ ಬಾಹುಳ್ಯದಿಂದಾಗಿ ಕನ್ನಡ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಇರಬಹುದಾದ ಒಂದು ಉಪಾಯವೆಂದರೆ ಈ ಬಗೆಯ ತಂತ್ರಾಂಶಗಳ ಮೂಲಕ ಶೀಘ್ರಗತಿಯಲ್ಲಿ ಕನ್ನಡ ಕಲಿಸುವುದು. ಅಂತೆಯೇ ಶಾಲಾಮಟ್ಟದಲ್ಲಿ ಆರಂಭದಲ್ಲಿ ಮಕ್ಕಳಿಗೆ ಕನ್ನಡ ಕಲಿಸುವ ಕಾರ್ಯ ತುಂಬ ಸರಳ, ಸುಲಲಿತವಾಗುವುದರಲ್ಲಿ ಯಾವುದೇ ಅನುಮಾನಗಳಿಲ್ಲ. ಈ ತಂತ್ರಾಂಶವು ಸರ್ವಾಂಗಸುಂದರ ರೂಪ ನಿರೂಪಣೆಯನ್ನು ಹೊಂದಿದ್ದು ತನ್ನೊಳಗೆ ಅದಕ್ಕೆ ಕೆಲವು ವೈಜ್ಞಾನಿಕ ತಾಂತ್ರಿಕ ಮಾರ್ಗಗಳನ್ನು ಬಳಸಿಕೊಂಡಿರುವುದು ಶ್ಲಾಘ್ಯ ಪ್ರಯತ್ನ ಎನ್ನಬಹುದು. ●

ಕನ್ನಡ ಸಾಹಿತ್ಯ ಪರಿಷತ್ ನ ಕನ್ನಡ ನುಡಿ ಪತ್ರಿಕೆಯಲ್ಲಿ ಬಂದ ವರದಿ

ಪ್ರಶಸ್ತಿ ಗೌರವಗಳು

ಪ್ರಶಸ್ತಿ ಗೌರವಗಳು



ಕೌಟಿಲ್ಯ ಎಕ್ಸಲನ್ಸ್ ಅವಾರ್ಡ್-೨೦೦೮



ಬಾಗೂರು ಅವರಿಗೆ ಡಾ. ಸಿ. ಆರ್. ರಮೇಶ್
ಅವರಿಂದ ಸನ್ಮಾನ



ಸಪ್ನ ಬುಕ್ ಹೌಸ್ ಅವರಿಂದ ಸನ್ಮಾನ




ಗಣ್ಯರೊಂದಿಗೆ ಸನ್ಮಾನ ಸ್ವೀಕಾರ



ಗೊರೂರು ಪ್ರತಿಷ್ಠಾನ (ರಿ.)
ಗೊರೂರು ಸಾಹಿತ್ಯ ಪ್ರಶಸ್ತಿ
ಶ್ರೇಷ್ಠ ಪುಸ್ತಕಗಳಿಗೆ ಪುರಸ್ಕಾರ
ಅಭಿನಂದನೆಗಳು
26/06/2014 19:48
ಗೊರೂರು ಪ್ರತಿಷ್ಠಾನ (ರಿ.)
ಗೊರೂರು ಸಾಹಿತ್ಯ ಪ್ರಶಸ್ತಿ
ಶ್ರೇಷ್ಠ ಪುಸ್ತಕಗಳಿಗೆ ಪುರಸ್ಕಾರ
ಅಭಿನಂದನೆಗಳು
ಕುವೆಂಪು ಆದರ್ಶ ಗೆಳೆಯರ ಬಳಗ (ರಿ)
ಕುವೆಂಪುಶ್ರೀ ಪ್ರಶಸ್ತಿ
2012


5ನೇ ವಾರ್ಷಿಕೋತ್ಸವ


ಸಂಗೀತ ಸಂಗಮ ಟ್ರಸ್ಟ್ (ರಿ)
ಕಾವ್ಯ ಶಿರೋಮಣಿ
ಸನ್ಮಾನ ಪತ್ರ


KAUTILYA NATIONAL EXCELLENCE AWARD-2006
SRI. BAGUR MARKANDEYA
ಚಾಣಕ್ಯ ಫೌಂಡೇಷನ್ CHANAKYA FOUNDATION

ಅನುಬಂಧ ೧ – ವಕ್ತೃಗಳು

ಕ್ರಸಂ.	ಹೆಸರು	ವೃತ್ತಿ	ಊರು	ವಯಸ್ಸು
೧.	ಚೆನ್ನಗೋವಿಂದಪ್ಪ	ರೈತರು	ಬಾಗೂರು	೭೫
೨.	ಆನಂದ ಮಾದಲಗೆರೆ	ಲೆಕ್ಕ ಪರಿಶೋಧಕರು (ತೆರಿಗೆ ಸಲಹೆಗಾರರು) ಸುಗಮ ಸಂಗೀತಗಾರರು ನಿರ್ದೇಶಕರು	ಹೊಸಕೆರೆಹಳ್ಳಿ ಬೆಂಗಳೂರು	೪೩
೩.	ಬಿ.ಕೆ. ಸುಮಿತ್ರ	ಗಾಯಕರು	ಹೊಸಕೆರೆಹಳ್ಳಿ ಕ್ರಾಸ್ ಬೆಂಗಳೂರು	೭೨
೪.	ಅನುರಾಧ	ಕನ್ನಡ ಉಪನ್ಯಾಸಕರು	ಹಾರ್ನಹಳ್ಳಿ, ಶಿವಮೊಗ್ಗ	೪೮
೫.	ಹೆಚ್.ವಿ. ವೆಂಕಟೇಶ್	ಕರ್ನಾಟಕ ಶಿಕ್ಷಕರ ಕಲ್ಯಾಣ ನಿಧಿಯಲ್ಲಿ ಡಿ.ಡಿ.ಪಿ.ಐ.	ಹಳೇಪೆರೆ ಸಂಧ್ರ ಚಿಕ್ಕಬಳ್ಳಾಪುರ ಜಿಲ್ಲೆ	೫೯

ಅನುಬಂಧ ೨ – ಸಂಕ್ಷೇಪ ಸೂಚಿಗಳು

೧. ಬಾಮಾ : ಬಾಗೂರು ಮಾರ್ಕಾಂಡೇಯ

೨. ಸಂ : ಸಂಪಾದಕರು

೩. ಪ್ರಸಂ. : ಪ್ರಧಾನ ಸಂಪಾದಕರು

೪. ಕ.ವಿ.ವಿ. : ಕನ್ನಡ ವಿಶ್ವವಿದ್ಯಾಲಯ

ಅನುಬಂಧ ೩

ಗ್ರಂಥಋಣ

ಕ್ರ ಸಂ.	ಗ್ರಂಥದ ಹೆಸರು		ಲೇಖಕರು
೧.	**ಕಲಾಕೋಶ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೪	:	ಪಿ.ಆರ್. ತಿಪ್ಪೇಸ್ವಾಮಿ
೨.	**ಕಲಾಪ್ರಪಂಚ** ವ್ಯಾಸಂಗ ವಿಸ್ತರಣ ಪ್ರಕಟಣ ವಿಭಾಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೮.	:	ಶಿವರಾಮ ಕಾರಂತ
೩.	**ಕರ್ನಾಟಕದ ಜನಪದ ಚಿತ್ರಕಲೆ** ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ, ೧೯೯೩.	:	ಡಾ. ಎಸ್.ಸಿ. ಪಾಟೀಲ
೪.	**ರೇಖಾಚಿತ್ರ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೧.	:	ಬಿ.ವಿ.ಕೆ. ಶಾಸ್ತ್ರೀ
೫.	**ಕೆ.ಕೆ. ಹೆಬ್ಬಾರರ ಚಿತ್ರ ಸಂಪುಟ** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೧.	:	ಮನು ಬಳಿಗಾರ್
೬	**ಭಾರತೀಯ ಚಿತ್ರಕಲೆ** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೮.	:	ಶಿವರಾಮ ಕಾರಂತ
೭	**ಭಾರತದ ದೃಶ್ಯಕಲಾವಿದರು** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೨.	:	ಎನ್.ಮರಿಶಾಮಾಚಾರ್
೮.	**ವರ್ಣ ಸಂಚಯ** ವಿಜಯ ಲಲಿತಕಲಾ ಮಹಾವಿದ್ಯಾಲಯ, ಇಲಕಲ್ಲ, ೨೦೦೧.	:	ಡಾ. ಎಸ್.ಸಿ.ಪಾಟೀಲ್
೯.	**ಕರ್ನಾಟಕದಲ್ಲಿ ಚಿತ್ರಕಲಾ ಬೆಳವಣಿಗೆ ಒಂದು ಸಮೀಕ್ಷೆ** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೬.	:	ಎಲ್. ಶಿವಲಿಂಗಪ್ಪ
೧೦.	**ಕನ್ನಡದಲ್ಲಿ ಜ್ಞಾನಪೀಠ ಪ್ರಶಸ್ತಿ ವಿಜೇತರು** ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು, ೧೯೯೮.	:	ಆರ್.ಡಿ.ಜಿ.
೧೧.	**ನಡೆದಾಡುವ ಕಲಾಕೋಶ** ಸಂಯೋಜಿತ (ಟ್ರಸ್ಟ್) ಬೆಂಗಳೂರು, ೨೦೧೧.	:	(ಸಂ), ಎಚ್.ಎ.ಅನಿಲ್‌ಕುಮಾರ
೧೨.	**ಎಂ.ಎ. ಚೆಟ್ಟಿ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೮೫.	:	ಪ್ರೊ. ಅನ್ನದಾನಿ ಹಿರೇಮಠ

೧೩. **ಚಿತ್ರದುರ್ಗದ ಪಾಳೆಯಗಾರರು** : ಎಂ.ಎಸ್.ಪುಟ್ಟಣ್ಣ
ಬಿ.ಎನ್. ಗಂಡುಗಲಿ ಮದಕರಿ ಪ್ರಕಾಶನ, ತಾ.ರ.ಸು ಬೀದಿ,
ಚಿತ್ರದುರ್ಗ, ೧೯೯೭.

೧೪. **ಬಹುಮುಖಿ ಬಾಗೂರು ಮಾರ್ಕಾಂಡೇಯ** : ಭಗವಾನ್
ಅರ್ಕಾವತಿ ಪ್ರಕಾಶನ, ಬೆಂಗಳೂರು, ೨೦೧೩.

೧೫. **ರಾಧಾ ಮಾಧವರ ಒಲುಮೆ ಚಿತ್ತಾರ** : ಬಾಮಾ
ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೧.

೧೬. **ಚಿತ್ತಾರದ ಅಡ್ಡಿಕೆ** : ಬಾಮಾ
ತೇಜು ಪಬ್ಲಿಕೇಷನ್ಸ್, ಬೆಂಗಳೂರು, ೨೦೧೨.

೧೭. **ಹಸಿ ಕ್ಯಾನ್ವಾಸ್** : ಬಾಮಾ
ಶ್ರೀನಿವಾಸ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೨

೧೮. **ಚಳಗದಿರ** : ಬಾಮಾ
ತೇಜು ಪಬ್ಲಿಕೇಷನ್ಸ್, ಬೆಂಗಳೂರು, ೨೦೧೨.

೧೯. **ಕಾರೇಮುಳ್ಳು** : ಬಾಮಾ
ರಜತ ಸಾಹಿತ್ಯ, ಶಿವಮೊಗ್ಗ, ೨೦೧೨.

೨೦. **ತಾರೆಗಳ ಬಳಗ** : ಬಾಮಾ
ಅಂಕಿತ ಪುಸ್ತಕ, ಬೆಂಗಳೂರು, ೨೦೧೨.

೨೧. **ಚಿತ್ರಗಳು ಮಾತನಾಡುತ್ತಿವೆ.** : ಬಾಮಾ
ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೧.

೨೨. **ದೃಶ್ಯ ಪದದೃಶ್ಯಂ** : ಡಾ. ಶಿವಾನಂದ ಹೆಚ್. ಬಂಟನೂರು
ಅಲಕಾ ಪ್ರಕಾಶನ, ಖೈನೂರು, ೨೦೧೩

